
# ಕೊಡಗು ಸಂಗಾತಿ

ಜನವರಿ 16 ರಿಂದ 31, 2001 ಪಾಕ್ಷಿಕ ಪತ್ರಿಕೆ (ಪೊನ್ನಿ 3-18)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 5 ಸಂಚಿಕೆ : 2 ಪುಟಗಳು : 24 ಬೆಲೆ ರೂ. : 6-00

## ನಾನು ನೀನು ಜೋಡಿ ಬಾ ಜೊತೆಯಾಗಿ ಆಡೋಣವೆ? - ಕಾರ್ತಿಕ್


ಚಿತ್ರ : ದುಗ್ಗಳ ಸದಾನಂದ ಗೌಡ, ನಾಪೋಕ್ಲು

# ವಂದನೆಗಳು

ಹೊಸ ವರ್ಷದ ಮತ್ತು ಕೊಡಗುಸಂಗಾತಿ ತನ್ನ ಐದನೇ ವರ್ಷಕ್ಕೆ ಕಾಲಿಕ್ಕುವ ಈ ಶುಭ ಮುಹೂರ್ತದಲ್ಲಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ "ಗ್ರೀಟಿಂಗ್ ಕಾರ್ಡ್ಸ್", ಪತ್ರ ಮುಖೇನ ಶುಭ ಹಾರೈಸಿದ ಸರ್ವ ಹಿತೈಷಿಗಳಿಗೆಲ್ಲರಿಗೂ, ಓದುಗರಿಗೂ ಸಂಗಾತಿಯ ಶುಭ ಹಾರೈಕೆಗಳು.

**ಪಟ್ಟಡ ಶೀಲಾಮಣಿ**
**ಮತ್ತು ಸಂಗಾತಿ ಬಳಗ, ಮೈಸೂರು**

## ಸಂತಾಪ ಸೂಚನೆ



**ಗೌಡುದಾರೆ ನವೀನ್**
ಜನನ : 2-7-1974
ಮರಣ : 3-1-2001

ನಮ್ಮ ಪ್ರೀತಿಯ ಗೆಳೆಯನಾಗಿ
ನಮ್ಮ ನೆಚ್ಚಿನ ಸ್ನೇಹಿತನಾಗಿ
ನಮ್ಮ ಪ್ರೀತಿಯ ಮಾತುಗಾರನಾಗಿ
ಸದಾ ನಮ್ಮ ಮನ್ಸ್‌ಲಿ ನೆಲೆ ಊರ್ದ ನೀನ್
ಅರ್ಧದೆ ಮೊಗ್ಗ್‌ಲೆ ನಮ್ಮ ಮನ್ಸ್‌ಂದ ದೂರಾದ.

ಆ ಭಗವಂತನ ಪಾದ ಸೇರ್ದ ನಿಂಗೆ ಸದಾ ಚಿರಶಾಂತಿನ ನೀಡಲಿತ್ತೇಳಿ ನಾವೆಲ್ಲ ಪ್ರಾರ್ಥಿಸುವೆ.

ನಿನ್ನ ದುಃಖಿತಪ್ತ ಸ್ನೇಹಿತಂಗ,
**ಚಾರಿಕೇರ ಮನು, ನಂದ, ಧನು**
ಇಗ್ಗುತ್ತಪ್ಪ ಕೋಲ್ಡ್ ಸ್ಟೋರೆಜ್
ಖಾಸಗಿ ಬಸ್ ನಿಲ್ದಾಣ, ವೀರರಾಜ ಪೇಟೆ,
ಕೊಡಗು, ಫೋನ್ : 08274 - 56591

## ಶ್ರದ್ಧಾಂಜಲಿ



**ದಿ. ಕ್ಯಾಪ್ಟನ್ ದೇವಜನ ಟಿ. ರಾಜು**
ಜನನ : 18-12-1946
ಮರಣ : 7-1-2001

ಗೌಡ ಮತ್ತು ಬಂಧು ಮಿತ್ರರ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು ಇದರ ಅಧ್ಯಕ್ಷರಾಗಿದ್ದ ಕ್ಯಾಪ್ಟನ್ ದೇವಜನ ರಾಜುರವರು ದಿನಾಂಕ 7-1-2001ರಲ್ಲಿ ವೈಕುಂಠವಾಸಿಯಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಹಾರೈಸುತ್ತೇವೆ. ಮೃತರ ಸಂಸಾರಕ್ಕೆ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇವೆ.

**ಕಾರ್ಯದರ್ಶಿ ಮತ್ತು ಸದಸ್ಯರು**
**ಗೌಡ ಮತ್ತು ಬಂಧು ಮಿತ್ರರ ಕ್ಷೇಮಾಭಿವೃದ್ಧಿ ಸಂಘ,**
**ಬೆಂಗಳೂರು**

**2001,** ಜನವರಿ 16 ರಿಂದ 31ರ ತನಕ

## ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ದನದ ಗೊಬ್ಬರದ ಸರಬರಾಜು | - ಸಂಪಾದಕೀಯ | 02 |
| ಸಾಹಿತ್ಯ ಸಂಸ್ಕೃತಿಯ ಬಿಕ್ಕಟ್ಟನ್ನು ಸಮನ್ವಯಗೊಳಿಸಬೇಕು | - ಸಂಗಾತಿ | 02 |
| ಕೊಡಗು ಪ್ರತ್ಯೇಕತೆ ವಿರುದ್ಧ ಜಿ. ಪಂ. ನಿರ್ಣಯ | - ಕೊಡಗು ಮಿತ್ರ | 03 |
| ಬೆಂಗಳೂರಿನಲ್ಲಿ ಹುತ್ತರಿಯ ಸಂಭ್ರಮ | - ಗೋವಿಂದಮ್ಮನ. ಪ್ರವೀಣ್‌ಕುಮಾರ್ | 06 |
| ನಾಶ ಮಾಡುವವನಿಕ್ಕಿಂತ ರಕ್ಷಿಸುವಾತ ತುಂಬಾ ದೊಡ್ಡವನು | - ತೆಕ್ಕಡೆ ಬಿ. ರಘುನಾಥ | 07 |
| ಮನಸ್ಸು | - ಚೇಂದ್ರಿರಮಾಡ ಮುತ್ತಪ್ಪ, | 10 |
| ನಾಯಿ – ಮನುಷ್ಯರ ನಡುವೆ ... | - ಬಿ. ಆರ್. ಜೋಯಪ್ಪ | 11 |
| ಸೈನುಸೈಟಿಸ್ (Sinusitis) | - ಡಾ. ಪ್ರವೀಣ. ಯನ್. ಎಸ್, | 12 |
| ಹಿತ್ತಲ ಮದ್ದು : ಗರಿಕೆ ಹುಲ್ಲು | - ಹೊಸೂರು ತುಳಸಿಮಾಲ ಅಪ್ಪಾಜಿ, | 12 |
| ಸಂಗಾತಿ ಭವಿಷ್ಯ | - ಜ್ಯೋತಿಷ್ ಗಿರೀಶ್ ಕುಮಾರ್ | 16 |
| ಕವನ : ಕನಸಿನಲಿ ನಾಕಂಡ ಹುಡುಗಿ | - ತಳೂರು ಸುಧಿ | 18 |
| ಕವನ : ಕಾವೇರಿ | - ತೀರ್ಥ ಅರಂಬೂರು, | 18 |
| ಪ್ರೀತಿಸುವ ಹೃದಯ | - ಎಡಿಕೇರಿ ಸುಧರ್ಶನ್ | 19 |
| ಕುಶಾಲನಗರದಲ್ಲಿ ಹುತ್ತೇರಿ ಆಚರಣೆ. | - ಕುಂಭಗೌಡನ ಸೋಮಣ್ಣ. | 20 |
| ಡಾರ್ವಿನ್ ವಿಕಾಸವಾದವೆಂದರೇನು ? | - ಪಟ್ಟಡ ನಿಶಾ | 20 |
| **ಅರೆಭಾಷಿಕ ವಿಭಾಗ** | | |
| ಮಡಿಕೇರಿ ಆಕಾಶವಾಣಿಯಲ್ಲಿ ಪ್ರಸಾರವಾದ ಕೊಡಗು ಗೌಡ ಜನಾಂಗದವರ ಮದುವೆಯ ವಿಳ್ಯಶಾಸ್ತ್ರ | - ಬೈತಡ್ಕ ಜಾನಕಿ ಬೆಳ್ಯಪ್ಪ | 04 |
| ಬುದ್ದಿ ಬೆಳೆಯಕು | - ಪಟ್ಟಡ ಪ್ರಭಾಕರ | 06 |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 25 | - ಶಂಕರನ ಬಸಪ್ಪ | 13 |
| ನನ್ನ ಊರ್ | - ಕಾನಡ್ಕ ಚರಣ್ ಶಿವಯ್ಯ, | 14 |
| ಗುಡ್ ನೈಟ್ | - ಬಿ. ಆರ್. ಜೋಯಪ್ಪ | 15 |
| "ಪ್ರೇಮಾ ವಿವಾಹಕ್ಕೆ ಪ್ರೇರೇಪಣೆ ಬೇಕು" | - ಅಣ್ಣೆಚೀರಾ ಭಾರತಿ | 17 |



| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ,** 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047** |
| ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/29620 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, ಫೋನ್ :080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19, ಫೋನ್ : 080/6500946 |

**ಚಂದಾ ವಿವರ :** ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ **-75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), **ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.**

## ಸಂಪಾದಕೀಯ : ದನದ ಗೊಬ್ಬರದ ಸರಬರಾಜು

ಭತ್ತ ವ್ಯವಸಾಯ ಮಾಡುವವರು ತಮ್ಮ ಗದ್ದೆಗಳಿಗೆ ದನದ ಗೊಬ್ಬರವನ್ನು ತಾವು ಸಾಕಿದ ದನಗಳ ಗೊಬ್ಬರವನ್ನು ಉಪಯೋಗಿಸುತ್ತಾರೆ. ಆದರೆ ಕಾಫಿ ತೋಟಗಳಿಗೆ ದನದ ಗೊಬ್ಬರವನ್ನು ಹಾಕ ಬೇಕಾದರೆ ದನದ ಗೊಬ್ಬರ ಲಭ್ಯವಿರುವ ಸ್ಥಳಗಳಿಗೆ ಹೋಗಿ ಅಲ್ಲಿಂದ ಲಾರಿಗಳಲ್ಲಿ ಸಾಗಿಸಬೇಕಾದ ಸಂದರ್ಭವಾಗಿದೆ. ಅದರ ಬದಲು ಈ ವಿಷಯದಲ್ಲಿ ಈಗಾಗಲೇ ರಸಗೊಬ್ಬರವನ್ನು ತರಿಸಿಕೊಡುವ ವ್ಯವಸ್ಥೆಯನ್ನು ಗ್ರಾಮೀಣ ಸಹಕಾರ ಸಂಘದವರು ವಿತರಣೆ ಮಾಡುವ ರೀತಿಯಲ್ಲಿ ಸಹಕಾರ ಸಂಘದ ಮುಖಾಂತರವೇ ಸೆಗಣಿ ಗೊಬ್ಬರ ಕಾಂಪೋಸ್ಟ್. ಗೊಬ್ಬರ ಹಾಗೂ ಇತರ ಜೈವಿಕ ನೈಸರ್ಗಿಕ ಗೊಬ್ಬರಗಳನ್ನು ಯಾರ್‍ಯಾರಿಗೆ ಎಷ್ಟೆಷ್ಟು ಯಾವ ರೀತಿಯ ಗೊಬ್ಬರ ಬೇಕೆಂದು ಪ್ರತಿ ವರ್ಷದ ಮೊದಲಲ್ಲಿ ಪಟ್ಟಿ ಮಾಡಿ ಬೇಕಾದವರಿಂದ ಗೊಬ್ಬರದ ಕ್ರಯ ಹಾಗೂ ಸಾಗಿಸುವ ಖರ್ಚಿನ ಕೆಲವು ಭಾಗವನ್ನು ಪಡೆದು ಕೊಂಡು ಬಾಕಿ ಭಾಗವನ್ನು ಕೃಷಿ ಸಾಲದ ಮುಖಾಂತರ ಮಂಜೂರು ಮಾಡಿದರೆ ನಮ್ಮ ಸಹಕಾರ ಸಂಘಗಳ ಕಾರ್ಯವ್ಯಾಪ್ತಿ ಹೆಚ್ಚಿ ದಳ್ಳಾಳಿಗಳ ಮದ್ಯಸ್ಥಿಕೆಯನ್ನು ತಪ್ಪಿಸಿ ರೈತರ ಕ್ಷೇಮವನ್ನು ಕಾಪಾಡಲು ಸಹಕಾರಿಯಾಗಬಲ್ಲದೇ? ಎಂದು ಸಂಗಾತಿಯ ಸಲಹೆ.

## ಸಾಹಿತ್ಯ ಸಂಸ್ಕೃತಿಯ ಬಿಕ್ಕಟ್ಟನ್ನು ಸಮನ್ವಯಗೊಳಿಸಬೇಕು

ವ್ಯಕ್ತಿಯ ಬದುಕಿನಲ್ಲಿ ಕ್ರಿಯಾಶೀಲ ಅಭಿವ್ಯಕ್ತಿ ಭಾಷೆಯ ಮೂಲಕ ಮಾತ್ರ ಸಾಧ್ಯ. ಆದರೆ, ನಮ್ಮಲ್ಲಿ ಭಾಷೆಯ ಬಗ್ಗೆಯೇ ತಪ್ಪುಗ್ರಹಿಕೆ ಇದೆ. ಇದರಿಂದಾಗಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಸಾಹಿತ್ಯ ಸಂಸ್ಕೃತಿಯ ಬಿಕ್ಕಟ್ಟು ಉಂಟಾಗಿದೆ. ಇದನ್ನು ಸಮನ್ವಯಗೊಳಿಸುವ ಕೆಲಸ ಇಂದು ನಡೆಯಬೇಕು ಎಂದು ಜಾನಪದ ಸಂಶೋಧಕ, ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಿರ್ದೇಶಕ ಕೆ. ಚಿನ್ನಪ್ಪ ಗೌಡ ಅಭಿಪ್ರಾಯ ಪಟ್ಟಿದ್ದಾರೆ.

ಅವರು ಇತೀಚೆಗೆ ಕಾಣಿಯೂರಿನಲ್ಲಿ ಜಿಲ್ಲಾ ಮಟ್ಟದ ಕನ್ನಡ ಸಾಹಿತ್ಯ ಸಂಸ್ಕೃತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಒಟ್ಟಾಗಿ ಗೊಂದಲಗಳಿಲ್ಲದೆ ಸ್ವೀಕರಿಸಿದರೆ ಯಾವುದೇ ಸಮಸ್ಯೆಗಳಿಲ್ಲ. ಬದಲಾಗಿ ಪ್ರಸ್ತುತ ಗ್ರಾಮೀಣ ಮತ್ತು ನಗರಗಳಲ್ಲಿ ಪರಕೀಯ ಭಾವನೆ ಕಾಡುತ್ತದೆ. ಇದು ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯದ ದೃಷ್ಟಿಯಿಂದ ಅತ್ಯಂತ ಅಪಾಯಕಾರಿಯಾಗಿದೆ.

ನಮ್ಮ ಮನೆಯ ಭಾಷೆಯನ್ನು ಕಾಯಲು ಕಾವಲು ಸಮಿತಿಯೊಂದರ ನಿರ್ಮಾಣವೇ ಅತ್ಯಂತ ನೋವಿನ ವಿಷಯವಾಗಿದೆ. ಇದು ಕನ್ನಡ ಭಾಷೆಯ ಶೋಚನೀಯ ಸ್ಥಿತಿಯನ್ನು ವ್ಯಕ್ತಪಡಿಸುತ್ತಿದೆ. ನಗರದ ಇಂದಿನ ಜನತೆಗೆ ಕನ್ನಡ ಕಲಿಯದಿದ್ದರೂ ಆಗುತ್ತದೆ ಎಂಬ ಮನೋಭಾವನೆಯ ಸ್ಥಿತಿ ನಿರ್ಮಾಣಗೊಂಡಿರುವುದೇ ಇಂದಿನ ಪರಿಸ್ಥಿತಿಗೆ ಕಾರಣವಾಗಿದೆ ಎಂದು ವಿವರಿಸಿದರು.

ಜಾಗತಿಕ ಮಟ್ಟಕ್ಕೆ ತಮ್ಮನ್ನು ತೆರೆದುಕೊಳ್ಳುವ ನಗರದ ಮಂದಿಗೆ ಅನಾಥ ಪ್ರಜ್ಞೆ ಕಾಡುತ್ತದೆ. ಬಹುಶಃ ಕನ್ನಡಕ್ಕೊಂದು ಶಕ್ತಿ ನೀಡಲು ಗ್ರಾಮೀಣ ಜನರಿಂದ ಮಾತ್ರ ಸಾಧ್ಯ ಎಂಬುದು ಬರೀ ಕ್ಲೀಷೆಯ ಮಾತಲ್ಲ. ಕನ್ನಡದ ಸಮ್ಮಿಶ್ರ ಸಂಸ್ಕೃತಿಯನ್ನು ಉಳಿಸುವಲ್ಲಿ ಇಂತಹ ಕಾರ್ಯಕ್ರಮಗಳು ಅಗತ್ಯ ಎಂದರು.

ಒಂದು ಜನಾಂಗವನ್ನು ನಾಶ ಮಾಡಲು ಯಾವುದೇ ಅಣುಬಾಂಬು ಬೇಡ. ಕೇವಲ ಭಾಷೆಯನ್ನು ನಾಶಗೊಳಿಸಿದರೆ ಸಾಕು ಎಂಬ ಮಾತನ್ನು ಕನ್ನಡಿಗರು ಅರ್ಥಮಾಡಿಕೊಳ್ಳಬೇಕಾಗಿದೆ. ಬೆಂಗಳೂರಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಕನ್ನಡ ವಿಲ್ಲಿ ಕೊನೆಯ ಹಂತದಲ್ಲಿದೆ. ಇಲ್ಲಿ ಅನ್ಯಭಾಷಿಗರ ಪ್ರಾಬಲ್ಯ ಹೆಚ್ಚಿದೆ. ಹಾಗಾಗಿ ಕನ್ನಡವನ್ನು ಪ್ರೀತಿಸುವವರಿಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ನಮ್ಮದು ವೈವಿಧ್ಯತೆಯ ಸಾಹಿತ್ಯ ಸಂಸ್ಕೃತಿ. ಇದು ಶಕ್ತಿಯೇ ಹೊರತು ದೋಷವಲ್ಲ. ಆದರೆ, ಭಾಷೆ, ಸಾಹಿತ್ಯದ ಬಗ್ಗೆ ಗಂಭೀರ ಚಿಂತನೆ ನಡೆಯಬೇಕಾಗಿದೆ.

ವಿದೇಶಿಯರು ಇಂದು ತಾವು ಕಳೆದುಕೊಂಡ ಭವ್ಯ ಸಂಸ್ಕೃತಿಗಾಗಿ ಪರಿತಪಿಸುತ್ತಿದ್ದಾರೆ. ಇತಂಹ ಸ್ಥಿತಿ ಭಾರತದಲ್ಲಿ ನಿರ್ಮಾಣವಾಗಲು ನಾವು ಬಿಡಬಾರದು ಇದಕ್ಕಾಗಿ ದೊಡ್ಡ ಆಂದೋಲನವೇ ನಡೆಯಬೇಕಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ತುಳು ಭಾಷೆಗೆ 'ಸಿರಿ'ಕಾವ್ಯದ ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ದೊರಕಿದ್ದು, ತುಳು ಭಾಷೆಯ ಬಗ್ಗೆ ಚರ್ಚೆಗಳು ನಡೆಯುತ್ತಿದೆ. ಈ ನಿಟ್ಟಿನಲ್ಲಿ ತುಳು ಕೊಂಕಣಿಯಂತಹ ಭಾಷೆಗಳ ಅಕಾಡೆಮಿ ಸ್ಥಾಪನೆ ಅರ್ಥಪೂರ್ಣ ಮೌಲ್ಯಗಳನ್ನು ಪಡೆದು ಕೊಳ್ಳುತ್ತದೆ. ಆದರೆ, ಕನ್ನಡವನ್ನು ನಾವು ಮರೆಯುತ್ತಾ ಹೋಗುತ್ತಿರುವುದು ದುಃಖದ ವಿಷಯ ಎಂದು ಸಹ ಅಭಿಪ್ರಾಯ ಪಟ್ಟಿದ್ದಾರೆ.

ಅತಿ ಆಸೆ ಇರಬಾರದು, ಅತಿ ಪ್ರೀತಿ ಇರಬಾರದು.

# ಕೊಡಗು ಪ್ರತ್ಯೇಕತೆ ವಿರುದ್ಧ ಜಿಲ್ಲಾ ಪಂಚಾಯತ್ ನಿರ್ಣಯ

ಕರ್ನಾಟಕ ರಾಜ್ಯದ ಅಖಂಡತೆಯನ್ನು ಒಡೆಯಲು ಯತ್ನಿಸುತ್ತಿದೆ ಎಂದು ಆರೋಪಿಸಿ ಪ್ರತ್ಯೇಕ ಕೊಡಗು ರಾಜ್ಯ ಬೇಡಿಕೆ ವಿರುದ್ಧ ಮಡಿಕೇರಿಯಲ್ಲಿ ನಡೆದ ಜಿಲ್ಲಾ ಪಂಚಾಯತ್ ಸಭೆಯಲ್ಲಿ ನಿರ್ಣಯ ಕೈಗೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡಲು ನಿರ್ಧರಿಸಲಾಯಿತು.

ಅಧ್ಯಕ್ಷೆ ಕೆ. ಪಿ. ಚಂದ್ರಕಲಾ ಅವರ ಅಧ್ಯಕ್ಷತೆಯಲ್ಲಿ ಇಲ್ಲಿನ ಕೋಟೆ ಹಳೆ ವಿಧಾನ ಸಭಾಂಗಣದಲ್ಲಿ ನಡೆದ ಸಭೆಯ ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಸದಸ್ಯ ವಿ.ಪಿ. ಶಶಿಧರ್ ಅವರು, ಕರ್ನಾಟಕದ ಏಕತೆಯನ್ನು ಮತ್ತು ಸ್ಥಳೀಯ ಜನತೆಯನ್ನು ಬೇರ್ಪಡಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ಪ್ರತ್ಯೇಕತಾ ಹೋರಾಟ ಮುಂದೊಂದು ದಿನ ಅಶಾಂತಿಗೆ ಅವಕಾಶ ಮಾಡಿಕೊಡುವ ಸಾಧ್ಯತೆ ಇರುವುದರಿಂದ ಇಂತಹ ಹೋರಾಟವನ್ನು ನಿಗ್ರಹಿಸಬೇಕೆಂದು ಅಭಿಪ್ರಾಯಪಟ್ಟರು.

ಇದನ್ನು ಸದಸ್ಯರಾದ ದೇವಲಿಂಗಯ್ಯ ಮತ್ತು ಪಿ.ಕೆ. ಪೊನ್ನಪ್ಪ ಅವರುಗಳು ವಿರೋಧಿಸಿದರಾದರೂ, ಪ್ರಸ್ತಾಪಕ್ಕೆ ಅನುಮೋದನೆ ನೀಡಿದ ಹೆಚ್. ಎಂ. ಕಾಳಯ್ಯ ಅವರು, ಈ ಹೋರಾಟದಿಂದಾಗಿ ಜಿಲ್ಲೆಯ ಜನತೆಯ ಏಕತೆ ಮತ್ತು ಮನಸ್ಸುಗಳನ್ನು ಒಡೆಯುವ ಕೃತ್ಯ ನಡೆಯುತ್ತಿದೆ ಎಂದು ಆರೋಪಿಸಿದರಲ್ಲದೆ, ಕರ್ನಾಟಕವನ್ನು ಬೇರ್ಪಡಿಸುವ ಶಕ್ತಿಗಳಿಗೆ ಅವಕಾಶ ನೀಡ ಬಾರದೆಂದು ಕೋರಿದ ಸಂದರ್ಭ ಸಭೆಯು ಇದನ್ನು ಒಪ್ಪಿ ನಿರ್ಣಯವನ್ನು ಕೈಗೊಂಡಿತು.

**ಎನ್‌ಸಿ ಜೊತೆ ಶಾಮೀಲು ?**

ಕೊಡಗು ಪ್ರತ್ಯೇಕತೆಗಾಗಿ ಹೋರಾಟ ನಡೆಸುತ್ತಿರುವ ಕೂರ್ಗ್ ನ್ಯಾಶನಲ್ ಕೌನ್ಸಿಲ್ (ಸಿಎನ್‌ಸಿ) ಜೊತೆ ಜಿಲ್ಲಾಧಿಕಾರಿಗಳು ಶಾಮೀಲಾಗಿದ್ದು, ಅದಕ್ಕಾಗಿ ಜಿಲ್ಲಾ ಪಂಚಾಯ್ತಿಯನ್ನು ಕಡೆಗಣಿಸಿದ್ದಾರೆಂಬ ಗಂಭೀರ ಆರೋಪವನ್ನು ಸ್ಥಾಯಿಸಮಿತಿ ಅಧ್ಯಕ್ಷ ಸಿ.ಎಸ್. ಅರುಣ್ ಮಾಚಯ್ಯ ಈ ಸಂದರ್ಭದಲ್ಲಿ ಮಾಡಿದರು.

**ಜಿಲ್ಲಾಧಿಕಾರಿ ವಿರುದ್ಧ ಖಂಡನಾ ನಿರ್ಣಯ**

ಕಳೆದ ನವೆಂಬರ್‌ನಲ್ಲಿ ನಡೆದ ರಾಜ್ಯೋತ್ಸವ ಸಮಾರಂಭಕ್ಕೆ ಜಿ. ಪಂ. ನಿಂದ ಅನುದಾನ ಪಡೆದಿದ್ದರೂ ಜಿಲ್ಲಾಡಳಿತವು ಜಿ.ಪಂ. ಅಧ್ಯಕ್ಷರೂ ಸೇರಿದಂತೆ ಸದಸ್ಯರನ್ನು ಆಹ್ವಾನಿಸದೆ ಅವಮಾನಿಸಿದೆ ಎಂದು ಸಭೆಯಲ್ಲಿ ಆರೋಪ ಕೇಳಿಬಂದಿತಲ್ಲದೆ, ತೀವ್ರ ಆಕ್ರೋಶಕ್ಕೂ ಕಾರಣವಾಗಿ ಜಿಲ್ಲಾಡಳಿತದ ವಿರುದ್ಧ ಸಭೆಯು ಖಂಡನಾ ನಿರ್ಣಯವೊಂದನ್ನು ಕೈಗೊಂಡಿತು.

ಸಭೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಸದಸ್ಯ ಎ. ಕೆ. ದೇವಲಿಂಗಯ್ಯ ಅವರು ವಿಷಯ ಪ್ರಸ್ತಾಪಿಸಿ ಜಿಲ್ಲಾಡಳಿತವು ಸೌಜನ್ಯಕ್ಕಾದರೂ ಅಧ್ಯಕ್ಷರನ್ನು ಸಮಾರಂಭಕ್ಕೆ ಆಹ್ವಾನಿಸ ಬೇಕಿತ್ತು. ಆದರೆ ಸದಸ್ಯರುಗಳಿಗೂ ಆಹ್ವಾನವನ್ನು ನೀಡದೆ ಕಡೆಗಣಿಸಿದ್ದಾರೆ ಎಂದು ಆರೋಪಿಸಿದರು.

ಕೊಡಗು ಕರ್ನಾಟಕದಲ್ಲಿದೆಯೋ ಇಲ್ಲವೋ ಎಂಬ ಪ್ರಶ್ನೆ ಮೂಡಿದೆ. ಜಿಲ್ಲಾಡಳಿತ ಇದೇ ರೀತಿ ಮಾಡುವುದಾದರೆ ರಾಷ್ಟ್ರೀಯ ಹಬ್ಬಗಳನ್ನು ಜಿಲ್ಲಾ ಪಂಚಾಯ್ತಿಯು ಪ್ರತ್ಯೇಕವಾಗಿಯೇ ಆಚರಿಸುವುದು ಸೂಕ್ತ ಎಂದು ಅವರು ಅಭಿಪ್ರಾಯಪಟ್ಟರು.

ಇದನ್ನು ಪುಷ್ಟೀಕರಿಸಿದ ಬಿ.ಜಿ. ರಘುನಾಥ ನಾಯಕ್ ಅವರು, ತಲಕಾವೇರಿ ಜಾತ್ರೆಗೂ ಜಿಲ್ಲಾ ಪಂಚಾಯ್ತಿಯಿಂದ ಹಣ ನೀಡಲಾಗಿದ್ದು, ಆ ಸಂದರ್ಭವೂ ಜಿಲ್ಲಾ ಪಂಚಾಯ್ತಿಯನ್ನು ನಿರ್ಲಕ್ಷಿಸಲಾಗಿದೆ. ಆದುದರಿಂದ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯ್ತಿಯ ಅಧಿಕಾರಿಗಳ ಬಗ್ಗೆ ಸ್ಪಷ್ಟನಿಲುವು ತಳೆಯುವ ಅಗತ್ಯವಿದೆ ಎಂದರು. ಹೆಚ್. ಎಂ. ಕಾಳಯ್ಯ ಅವರು, ಜಿಲ್ಲಾಡಳಿತ ಹಾಗೂ ಜಿ.ಪಂ. ನಡುವೆ ಸ್ವಪ್ರತಿಷ್ಠೆಯ ಹೋರಾಟ ನಡೆಯುತ್ತಿದ್ದು, ಇದು ಜಿಲ್ಲೆಯ ಅಭಿವೃದ್ಧಿಗೆ ಮಾರಕವಾಗಿದೆ ಎಂದು ಆಪಾದಿಸಿದರು.

ಪೊನ್ನಂಪೇಟೆಗೆ ಕಂದಾಯ ಆಯುಕ್ತರು ಭೇಟಿ ನೀಡುವ ವಿಚಾರವನ್ನು ಆ ಕ್ಷೇತ್ರದ ಸದಸ್ಯರಾಗಿರುವ ತಮ್ಮ ಗಮನಕ್ಕೂ ತಾರದಿರುವ ಜಿಲ್ಲಾಡಳಿತ ಕಾರ್ಯ ವೈಖರಿ ಬಗ್ಗೆ ಪಿ. ಕೆ. ಪೊನ್ನಪ್ಪ ಈ ಸಂದರ್ಭದಲ್ಲಿ ಆಕ್ಷೇಪಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಲ್ಲಿ ಜಿ. ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರೂ ಸದಸ್ಯರಾಗಿರುವುದರಿಂದ ಜಿ. ಪಂ. ಕುರಿತು ಅವರು ಜವಾಬ್ದಾರಿ ಹೊರಬೇಕಾಗಿತ್ತು. ತಪ್ಪಿತಸ್ಥರು ನಮ್ಮಲ್ಲೇ ಇರುವಾಗ ಬೇರೆಯವರನ್ನು ಟೀಕಿಸಿ ಪ್ರಯೋಜನವೇನು ಎಂದು ಸದಸ್ಯ ಹೆಚ್. ಸಿ. ನಾಗೇಶ್ ಪ್ರಶ್ನಿಸಿದರೆ, ವಿ. ಪಿ. ಶಶಿಧರ್ ಮಧ್ಯ ಪ್ರವೇಶಿಸಿ ಜಿಲ್ಲಾಧಿಕಾರಿಗಳು ಶಿಷ್ಟಾಚಾರದ ಉಲ್ಲಂಘನೆ ಮಾಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಇದಕ್ಕೆ ಹೊಣೆ ಹೊರಬೇಕಾಗಿದೆ ಎಂದು ಟೀಕಿಸಿದರು.

ಜಿಲ್ಲಾಧಿಕಾರಿಗಳ ವರ್ತನೆ ಕುರಿತು ಸಭೆಯಲ್ಲಿ ಸುಮಾರು ೪೫ ನಿಮಿಷಗಳ ಸುದೀರ್ಘ ಚರ್ಚೆ ನಡೆದು ಈ ಕುರಿತು ಖಂಡನಾ ನಿರ್ಣಯ ಕೈಗೊಂಡು ಮೇಲಾಧಿಕಾರಿಗಳು ಹಾಗೂ ಸರ್ಕಾರಕ್ಕೆ ಕಳುಹಿಸಲು ನಿರ್ಧರಿಸಲಾಯಿತು.

**ಮಳೆ ಪರಿಹಾರ ಕಾಮಗಾರಿ**

ಜಿಲ್ಲೆಗೆ ಬಿಡುಗಡೆಯಾಗಿರುವ ಮಳೆ ಹಾನಿ ಪರಿಹಾರ ನಿಧಿಯಡಿ ಜಿಲ್ಲಾಡಳಿತವು ಜಿ. ಪಂ. ಸದಸ್ಯರು ನೀಡಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದೆ, ಜಿಲ್ಲಾಧಿಕಾರಿಗಳು ನಡೆಸಿದ ಗ್ರಾಮ ಸಂಪರ್ಕ ಸಭೆಗಳಲ್ಲಿ ಬಂದ ಕಾಮಗಾರಿಗಳಿಗೆ ಮಾತ್ರ ಮಂಜೂರಾತಿ ನೀಡಿರುವ ವಿಚಾರ ಮತ್ತೆ ಸದಸ್ಯರನ್ನು ಕೆರಳಿಸಿತು.

ಸುಮ್ಮನೆ ಕೂರುವುದಕ್ಕಿಂತ ಏನಾದರೂ ಮಾಡುವುದು ಲೇಸು 5 ನೇ ಪುಟಕ್ಕೆ

# ಮಡಿಕೇರಿ ಆಕಾಶವಾಣಿಯಲ್ಲಿ ಪ್ರಸಾರವಾದ ಕೊಡಗು ಗೌಡ ಜನಾಂಗದವರ ಮದುವೆಯ ವಿಳ್ಯಶಾಸ್ತ್ರ

ವಿಳ್ಯಶಾಸ್ತ್ರದ ದಿನ ಗಂಡ್‌ನ ಕಡೆಂದ ಏಳ್ (7) ಜನ ಹೊರ್ಟ್ವೆ. ಅವರ್ಲಿ ಮೂರ್ಜ್ನ (3) ಬೆಳಿಕೋಟು, ಕಚ್ಚೆಪಂಚೆ, ರೇಷ್ಮೆ ಶಾಲ್, ಮತ್ತೆ ತಲೆಗೆ ಜರಿ ರುಮಾಲ್ ಕಟ್ಟಿ, ನೆಲ್ಲಕ್ಕಿ ದೀಪದ ಹತ್ರ ಬಂದವೆ. ಆಗ ಮನೆ ಪಟ್ಟೆದಾರ್ರ್ ಕುಲದೇವ್ರುಗೆ ಪ್ರಾರ್ಥನೆ ಮಾಡಿಕಂಡ್ ಮುಖ್ಯಸ್ತರ ಕೈಲಿ ವಿಳ್ಯದೆಲೆ ಹಣ್ಣಡಿಕೆ ಹರಿವಾಣ ಪೆನ್ನ್ ಕಾಗದ ಎಲ್ಲಾ ತುಂಬ್ಸಿದ ಒಂದು ಚೀಲನ ಅವರ ಕೈಲಿ ಕೊಟ್ಟವೆ.

ಪ್ರಶ್ನೆ : " ಆ ಚೀಲನ ತಕಂಡ್ ಅವು ಏನ್ ಮಾಡುವೆ?"

ಉ. ಗೂಡೆನ ಮನೆಗೆ ಬಂದವೆ. ಬಂದ ನೆಂಟ್ರಿಗೆ ಕಾಲ್ ತೊಳಿಯಕೆ ನೀರ್ ಕೊಟ್ಟವೆ. ಮತ್ತೆ ಮನೆವೆಲ್ಲಾ ಬಂದ್ ಮಾತಾಡ್ಸಿ ಕಾಲ್ ಮುಟ್ಟಿ ನಮ್ಮಸ್ಕಾರ ಮಾಡಿ ಆದಮ್ಯಾಲೆ ಚಪ್ಪರ ಮೇಲೆ ಹಾಸಿದ ಚಾಪೆ ಮ್ಯಾಲೆ ಸಂಪ್ರದಾಯ ಉಡುಪಲಿರುವ ಮೂರು ಜನ ಅಲ್ಲಿ ಕುದ್ದವೆ. ಮತ್ತೆ ಮುಖ್ಯಸ್ತರ್ ಬಂದ ವಿಸಯನ ಹೇಳುವೆ. ಆದರೆ ಇವು ಆ ವಿ ಕೆ ಚೀಲನ ಮಾತ್ರ ಯಾರ ಕೈಗೂ ಕೊಡದೆ ಜಾಗ ಇರುವಲ್ಲಿ ಮಡ್ಗದೆ ಜೋಪಾನಾಗಿ ಅವರ ಕೈಲೆ ಹಿಡ್ಕಂಡಿದ್ದವೆ.

ಪ್ರಶ್ನೆ : ಮತ್ತೆನ್ಮಾಡುವೆ ತ ಸ್ವಲ್ಪ ಹೇಳಿರ್ಯಾ ?

ಉ. : ಆ ಮ್ಯಾಲೆ ನೆಲ್ಲಕ್ಕಿ ನಡುಬಾಡೆಲಿ ತೂಗುದೀಪದ ಕೆಳಗೆ 2ಚಾಪೆ ಹಾಕಿದ್ದವೆ ಅಲ್ಲಿ ಹೆಣ್ಣ್‌ನ ಕಡೆವು ಮೂರು ಜನ ಗಂಡ್‌ನ ಕಡೆವು ಮೂರು 'ಜನ ನಮ್ಮ ಸಂಪ್ರದಾಯದ ಉಡುಪುಲಿ ಎದುರು ಬದುರಾಗಿ ಕುದ್ದವೆ. ಅವೆಲ್ಲವು ತಲೆಗೆ ರುಮಾಲ್ ಕಟ್ಟಿಕಂಡ್ ಇದ್ದವೆ. ಆಗ ಗೊತ್ತಾದೆ ಇವೆ ಮುಖ್ಯಸ್ತರ್ ತ. (ಹಿಂದೆ ಕೊಡಗ್‌ಲಿ ಕುಪ್ಪಸದಟ್ಟಿಲಿ ಕೂರ್ತಾ ಇದ್ದೊತೇಳ್ದೊರ ಈಗ ನಾನು ನೆನ್ಸ್‌ಕಾದೆ)

ಪ್ರಶ್ನೆ : ಕುದ್ದ ಮುಖ್ಯಸ್ತರ್ ಏನ್ ಮಾಡುವೆ?

ಉ. : ಇವರ ಮಧ್ಯೆ ಒಂದು ಮುಕ್ಕಾಲ್ ಒಂದು ಮಣೆ ಇಟ್ಟಿದ್ದವೆ, ಮುಕ್ಕಾಲ್ ಮ್ಯಾಲೆ ಮಣ್ಣ್‌ನ ದೀಪ, ಮಣೆ ಮ್ಯಾಲೆ ಒಂದು ಕಂಚಿನ ಬಟ್ಲ್‌ಲಿ ಸ್ವೊಲ್ಪ ಅಕ್ಕಿಹಾಕಿ ಐದೆಲೆ ಒಂದಡಿಕೆ ಹಾಕಿದ್ದವೆ. ಮತ್ತೊಂದು ಹರಿವಾಣಲಿ ವಿಳ್ಯದೆಲೆ ಅಡಿಕೆ ತುಂಬ್ಸುದು ಪದ್ಧತಿ. ಹಂಗೆ ಒಂದು ಚೊಂಬು ನೀರ್ ತಕಂಡ್ ಪಟ್ಟೆದಾರ್ರ್ ಎಲ್ಲವರನ್ನ ಕರ್ದವೆ, ಈ ಶುಭ ಕಾರ್ಯನ ಎಲ್ಲವು ಬಂದ್ ಲಾಯ್ಕಾಗಿ ನಡ್‌ಸಿಕೊಡಕುತ ಕೇಳಿಕೊಂಡವೆ.

ಪ್ರಶ್ನೆ : ನಂತ್ರ?

ಉ. : ಆಗ ವರನ ಕಡೆಂದ ಬಂದ ನೆಂಟ್ರ್ ಎದ್ದ್ ನಿತ್ತ್ ಎಲ್ಲವುಕೆ ನಮಸ್ಕಾರ ಹೇಳಿ ಅವರ ಪರಿಚಯನ ಹೇಳುವೆ. ನಾವು ಇಂತ ಜಿಲ್ಲೆಂದ ಬಂದವು ಇಂತ ತಾಲೋಕುಗ್ರಾಮ ಮನೆಹೆಸರ್ ಹೇಳುವೆ. ಆಮ್ಯಾಲೆ ಪಟ್ಟೆದಾರ್ರ್ ಅನುಮತಿ ಮೇರೆ ವಧುನ ಪರಿಚಯನ ಸಹ ಹಿಂಗೆ ಮಾಡಿಕಂಡ್ ವಧುನ ಮನೆಗೆ ವಿಳ್ಯಶಾಸ್ತ್ರಕ್ಕೆ ಬಂದೊಳತ ಹೇಳುವೆ. ಅವು ಹೇಳ್ದ್ ಸರಿತಾದರೆ ಅವರ್ನ ಕೂರಿಕೆ ಹೇಳುವೆ. ಕುದ್ದಮ್ಯಾಲೆ ಅವರ ಚೀಲಂದ ಹರಿವಾಣ ತೆಗ್ದ್ ವಿಳ್ಯದೆಲೆ ಅಡಿಕೆ ತುಂಬ್ಸಿ ನಾವು ಬಂದ ಕಾರ್ಯನ ಲಾಯ್ಕಾಗಿ ನಡ್ಸಿ ಕೊಡಕುತ ಚೊಂಬುಲಿದ್ದ ನೀರ್ ಮುಟ್ಟಿ ಮುಖ್ಯಸ್ತರ ಕೈಲಿ ಕೊಟ್ಟವೆ.

ಪ್ರಶ್ನೆ : ಓಹೋ ಮತ್ತೆ ಏನ್ ಮಾಡುವೆ?

ಉ. ಮುಖ್ಯಸ್ತರ್ ವಿಳ್ಯತಕಂಡ್ ಅಲ್ಲಿ ಕೂಡ್ದ ಊರವು ನೆಂಟ್ರ್ ಮತ್ತೆ ಮುಖ್ಯ ಪಟ್ಟವರ್ನ ಸೋದರ ಮಾವಂಗೆ ಎಲ್ಲವಕೂ ಹೇಳುವೆ. ನಾವು ವಿಳ್ಯಶಾಸ್ತ್ರಕ್ಕೆ ಕುದ್ದೊಳೊ ಈಗ ವಿಳ್ಯ ಕಟ್ಟಿಕೆ ಎಲ್ಲವರ ಅನುಮತಿ ಉಟ್ಟಾತ ಕೇಳುವೆ. ಹಂಗೆ ಒಪ್ಪಿಗೆ ಪಡ್ದ್ ನೀರ್ ಮುಟ್ಟಿ ಐದೆಲೆ ಒಂದಡಿಕೆನ ಕಂಚಿನ ಬಟ್ಲಿಗೂ ಮತ್ತೆ ಹರಿವಾಣಕ್ಕೂ ಬಳ್ಸಿ ಎದ್ದ್‌ನಿತ್ತ್ **ಹತ್ತ್ ಕುಟುಂಬ ಹದ್ನೆಂಟು ಗೋತ್ರ ದೇವಸಭೆ ಕೂಡ್ದ ಕುಲಸ್ತರ ಸಮಸ್ತತರ ಸಂಗಡಕೇಳಿ** ನೆಲ್ಲಕ್ಕಿ ದೀವಿಗೆ ಅಡಿಲಿ ವರನ ಗೋತ್ರನೂ ವಧುನ ಗೋತ್ರನೂ ಹೇಳಿ ಅಂದರೆ ಇಂತಗೋತ್ರದ ಗಂಡಿಗೂ ಇಂತಹ ಗೋತ್ರದ ಹೆಣ್ಣಿಗೂ ಸಾಲಾವಳಿ ವೀಳ್ಯ ಕಟ್ಟುವೆತ ಮೂರು ಸಲ ಹೇಳುವೆ. ಆಗ ಸಭೆಲಿದ್ದವೆಲ್ಲಾ ಒಳ್ಳೆ ಕಾರ್ಯವೆಂತೆ ಜೋರಾಗಿ ಹೇಳುವೆ. ಹೌದಾ?

ಪ್ರಶ್ನೆ : ಒಟ್ಟಿಗೆ ಎಷ್ಟ್ ವಿಳ್ಯ ಬಳ್ಸುವೆ?

ಉ. : . ನಮ್ಮ ಕೊಡಗ್‌ಲಿ 9ವಿಳ್ಯ ಬಳ್ಸುವೆ ಅದ 1ಸಾಲಾವಳಿ ವಿಳ್ಯ, 2ಹೆಣ್ಣ್ ಮಾತ್‌ನ ವಿಳ್ಯ, 3 ಲಗ್ನಕರಾರ ವಿಳ್ಯ, 4ವಿಳ್ಯ ಶಾಸ್ತ್ರದ ವಿಳ್ಯ, 5. ಬಣ್ಣ ಬಂಗಾರದ ವಿಳ್ಯ 6. ಗುರು ವಿಳ್ಯ, 7 ತಾಯಿ ವಿಳ್ಯ, 8. ತಂದೆ ವಿಳ್ಯ ಮತ್ತೆ ಮಹಾನಾಡ್ ವಿಳ್ಯತ. ಪ್ರತೀ ವಿಳ್ಯನ ಎತ್ತಿ ಕೊಡ್ ಕಾಕನ 1 ಕುಟುಂಬ 18 ಗೋತ್ರತೇಳುವ ನುಡಿಕಟ್ಟ್‌ನ ಅಲ್ಲಿ ಮೂರ ಸಲ ಹೇಳೇ ಹೇಳೊಕು.

ವಿಳ್ಯಶಾಸ್ತ್ರಲಿ ಹ್ಯದಂಗೆ ಮತ್ತೆ ಗೂಡೆಗೆ 5 ಎಲೆ 1ಅಡಿ ಕೊಟ್ಟವೆ. ಅದರ್ನ ಹಿರಿಯ ಮುತ್ತೈದೆ ತಕಂಡ್ ಹೋಗಿ ನೆಲ್ಲ ಅಡಿಲಿ ನಿತ್ತ ಮದುವೆ ಗೂಡೆನ ಸೆರಗ್‌ಲಿ ಕಟ್ಟುವೆ. ಈ ಶಾಸ್ ಮುಗ್‌ದ ಮ್ಯಾಲೆ ಇಬ್ಬರು ಧಾರೆ ಆಗುವವರೆಗೆ ಮುಖ ಮು ನೋಡಿಕೆ ಆಗದ್. ವಿಳ್ಯ ಶಾಸ್ತ್ರ ಆದ ಗಂಡ್ ಮದುವೆ ಎ ಅರಶಣ ಶಾಸ್ತ್ರ ಆಗುವವರೆಗೆ ಕೈಮುಟ್ಟಿ ಮುಖ ಚವ ಮಾಡಿಕಾಗದ್, ಬ್ಯಾರೆಯವರ ಧಾರೆ ಮಂಟಪಕೆ ಹೋ ಆಗದ್.

ಪ್ರಶ್ನೆ : ಮತ್ತೆ?

ಉ. : ಬ್ಯಾರೆಯವರ ಮನೆಲಿ ವಳಿಯಕಾಗದ್ ಇದ್ಕೆ ವಿ ಶಾಸ್ತ್ರ ತ ಹೇಳ್ದು .

ಪ್ರಶ್ನೆ : ಮತ್ತೆನಾರ್ ಉಟ್ಟಾ?

**ಕೆಟ್ಟವರ ಸಹವಾಸ ಬೇಡ, ಕೊಟ್ಟವರ ಹಗೆತನ ಬೇಡ.**

ಉ. : ಮತ್ತೆ ಲಗ್ನ ಪತ್ರಿಕೆ ಬರ್‌ದವೆ. ಮುಖ್ಯಸ್ತರ್ ವಾಪಾಸ್ ಬಂದ್ ಪಟ್ಟೆದಾರ್‌ರ್‌ಗೆ ಲಗ್ನ ಪತ್ರಿಕೆನ ಮುಟ್ಟುಸುವೆ.

ಪ್ರಶ್ನೆ : ಅಲ್ಲಾ ಈಗನವು ಇದರ್ನ ಪಾಲ್ಸ್‌ತವಳೊತ?

ಉ. : ಇದರ್ನ ಬುಡಿಕೆ ಆಗದ್. ಹಳೆ ಸಂಪ್ರದಾಯನ ಉಳ್ಸಿ ಬೆಳ್ಸಕುತ ನಾವು ಜನಾಂಗದ ಪರ ಕೇಳ್ಕಂಡವೆ ಮತ್ತೆ ತಿಳುವಳಿಕೆನ ಕೊಡಕುತ ಹೇಳ್ನೊ.

ಬರ್ದವು : ಬೈತಡ್ಕ ಜಾನಕಿ ಬೆಳ್ಯಪ್ಪ
ಸಹಕರಿಸಿದವು : ಪೊನ್ನಚನ ಲಲಿತ ಸೋಮಣ್ಣ ಮತ್ತೆ
ನಡ್ಸಿಕೊಟ್ಟವು : ಬೈತಡ್ಕ ದೇವಮ್ಮ.

ಹಿಂದೆನ ಸಲ ನಾವುತೇಳ್ರೆ ಕೊಡಗ್ ಗೌಡ ಮಹಿಳಾ ಒಕ್ಕೂಟದ ಕಡೆಂದ "ಗೂಡೆನ ಮನೆಗೆ ನೆಂಟ್ರಾಗಿ ಹೋದು" ತೇಳ್ವ ವಿಸಯನ ಅರೆ ಬಾಸೆಲಿ ಪ್ರಥಮ ಬಾರಿಗೆ ಮಡಿಕೇರಿ ಆಕಾಶವಾಣಿ ಕೇಂದ್ರಂದ ಪ್ರಸಾರ ಮಾಡ್ಸಿದ್ದೊ. ಈ ಸಲ ಮೊನ್ನೆ ತಾ. ಡಿ. 14ರಂದ್ ನಾವು ನಡ್ಸಿ ಕೊಟ್ಟ ಕಾರ್ಯಕ್ರಮಲಿ ಗೌಡ ಜನಾಂಗದವರ ವಿಳ್ಯಶಾಸ್ತ್ರ ತೇಳುವ ವಿಷಯನ 19-12-2000ದಂದ್ ರಾತ್ರಿ 8ಗಂಟೆಗೆ ಮಹಿಳಾ ಲೋಕದಲ್ಲಿ ಪ್ರಸಾರ ಮಾಡ್ಸಿದೊತೇಳಿಕೆ ಬಾರಿ ಕುಸಿಲಿ ಹೇಳ್ಕಂಡವೆ. ಹಂಗೆ ಮುಂದೆ ನಮ್ಮ ಸಂಸ್ಕೃತಿ ಶಾಸ್ತ್ರಗಳ ಬಗ್ಗೆ ಸೋಬಾನೆ ಪದಗಳ ಬಗ್ಗೆ ವ್ಯವಸಾಯ ಮದ್ದ್ ಮತ್ತೆ ಹಳ್ಳಿಗಳಿಗೂ ಪ್ಯಾಟೆಗೂ ಸಂಬಂಧ ಪಡುವ ಎಲ್ಲವುಕೆ ಕೇಳಿ ಕುಸಿ ಆಗುವ ಕಾರ್ಯಕ್ರಮನ ಹಾಕೋ ಪ್ರಯತ್ನ ಪಡ್ತಾವಳೊ. ಆದರೆ ನೆಮ್ಮವು ಇದರ್ನ ಕೇಳಿ ಒಳ್ಳೆ ಸಲಹೆ ಸೂಚನೆ ಕೊಡೊದು ಅಲ್ಲದೆ ಹಿಂದೆಂದ ಆಡಿಕಂಬದು, ಹೆಸರಿಲ್ಲದೆ ಕಾಗ್ದ ಬರಿಯೊದು ಎಲ್ಲಾ ಮಾಡ್ತಾವಳೊ ತೇಳ್‌ಕೆ ನಮಿಗೆ ಬ್ಯಾಜಾರ್ ಆದೆ. ನಮ್ಮವು ಯಾರೂ ಮುಂದೆ ಬಾದುಲೆ, ಮಾಡ್ದಕೆ ಸೂನೆ ಹೇಳ್ದು ಅಲ್ಲದೆ ಒಳ್ಳೆ ಸಲಹೆಗಳ್ಳ ಆಗಲಿ ಒಳ್ಳೆ ಬರವಣಿಗೆ ಆಗಲಿ ಕೊಡ್ತಾ ಇಲ್ಲೆ. ಇಷ್ಟ್ ಕೆಲ್ಸಮಾಡಿಕೆ ಎಸ್ಟ್ ಕಷ್ಟವುಟ್ಟುತ್ತೇಳಿ ಯಾರಾದ್ರ್ ತಿಳ್ಕಂಡ್ರೆ ಸಾಕ್. ಇದ್ ನಮ್ಮ ಒಬ್ಬೊಬ್ಬರ ಸ್ವಾರ್ಥಕಲ್ಲ. ನಮ್ಮ ಜನಾಂಗವುಟ್ಟು ತೇಳ್ದೊರ್ನ ಗುರ್ತಿಸುವ ಪ್ರಯತ್ನ ಅಷ್ಟೆ. ನಾವು ಯಾರಿಗಾಗಿ ಇದೆಲ್ಲಾ ಮಾಡ್ದು? ನಮ್ಮ ಜನಾಂಗದ ಉದ್ಧಾರಕ್ಕಾಗಿ ನಮ್ಮ ಶ್ರಮಕ್ಕೆ ಯಾರೂ ದುಡ್ಡ್ ಕೊಡ್ತಾಯಿಲ್ಲೆ. ಈಗ ಸರ್ಕಾರ ಹಳೆಯ ಜಾನಪದ ಕಲೆಗಳಿಗೆ ಬಾರಿ ಪ್ರೋತ್ಸಾಹ ಕೊಡ್ತಾ ಉಟ್ಟ್. ಹಳೆದರ್ನ ಹೊರಗೆ ಹಾಕಿ ನಮ್ಮ ಈ ದೇಶದ ಸಂಸ್ಕೃತಿನ ಕಾಪಾಡೊಕುತ ಪ್ರಯತ್ನ ಪಡ್ತಾ ಉಟ್ಟು. ನಮ್ಮ ದೇಶದ ಇಂದ್‌ನ ಮಕ್ಕ ಕ್ಯಾಸೆಟ್ ಹಾಕಿ ವಿದೇಶದವರ ಸಂಸ್ಕೃತಿ ಕಡೆಗೆ ವಾಲ್ತಾ ವಳೊ ತೇಳಿ ಗೊತ್ತಾಗುಟ್ಟು. ಅದ್ಕೆ ನಮ್ಮ ಸಂಘ ಸಂಸ್ಥೆಯುವು ಆದಸ್ಟ್ ನಮ್ಮ ಸಂಸ್ಕೃತಿಗಳ ಬಗ್ಗೆ ಮಕ್ಕಳಿಗೆ ತಿಳುವಳ್ಕೆ ಕೊಟ್ಟ್ ಈ ಹಳೆ ಬೇರ್‌ಲಿ ಹೊಸ ಚಿಗ್‌ರ್ ಬಾಕನ ಎಷ್ಟ್ ಪೊರ್ಲ್ ಕಂಡದೆ ಆಗ ಆ ಚಿಗ್‌ರ್ ಮ್ಯಾಲೆ ಬಿದ್ದ ಮಂಜಿನ ಹನಿ ಎಷ್ಟ್ ಶೋಭಾಯಮಾನವಾಗಿ ಕಂಡದೆ ತೇಳಿ ನೋಡಕು. ರಾಜ್ಯೋತ್ಸವ ದಿನದಂತ ದಿನಗಳಲ್ಲಿ ಈಗ ಕ್ಯಾಸೆಟ್‌ಗಳ ಬಿಟ್ಟ್ ಬಾಯಲ್ಲಿ ಹೇಳುವ ಕ್ರಮ ಸುರು ಮಾಡ್ಯೊಳೊ.

ಇಷ್ಟೆಲ್ಲಾ ಬರ್ದ ನಾವ್ ಏನ್ ಮಾಡ್ಯೊಳೆ ?

ಅದ್ಕೆ ಮೂರು ಜನ ಇರುವ ಗುಂಪುಗಳ್ನ ಮಾಡಿಕಂಡ್ ಸಲಹೆಗಳ್ನ ಕೇಳಿ. ಹಸೆಮಣೆ ಪುಸ್ತಕಲಿರುವ ಕರ್ನಾಟಕದ ಸಂಸ್ಕೃತಿನ ಕಾಪಾಡುವ ಶ್ರೇಷ್ಠಮಟ್ಟದ ಹಾಡುಗಳ ಬ್ಗಗೆ ಸ್ಪಷ್ಟ ತಿಳುವಳಿಕೆ ಕೊಟ್ಟವೆ. ಹಂಗೆ ಸ್ಪರ್ಧೆಗಳ್ಲಿ ಭಾಗವಹಿಸುವವು ಗೂಡೆಗ ಮಹಿಳೆಗ ನಮ್ಮ ಸಂಪರ್ಕಿಸಿ ತರಬೇತಿ ಕೊಟ್ಟವೆ. ಎಲ್ಲವು ಸನ ಎಲ್ಲಾ ವಿಸಯಗಳ್ಗೆ ಭಾಗವಹಿಸೋಕು.

*ನಮ್ಮ ಫೋನ್ ನಂ.* ***28047 / 08272***

---

3 ನೇ ಪುಟದಿಂದ

ಮಳೆ ಪರಿಹಾರದಡಿ ಜಿ. ಪಂ. ವ್ಯಾಪ್ತಿಯಲ್ಲಿ ೬೨.೧೫ ಲಕ್ಷ ರೂ. ಕಾಮಗಾರಿ ಕೈಗೊಳ್ಳುವುದಾಗಿ ತಿಳಿಸಿ ಕಾಮಗಾರಿ ಪಟ್ಟಿ ಕಳುಹಿಸುವಂತೆ ಜಿಲ್ಲಾಡಳಿತ ಕೋರಿತ್ತು. ಆದರೆ ಆ ಪಟ್ಟಿಗೆ ಮಾನ್ಯತೆ ನೀಡದೆ ಸದಸ್ಯರನ್ನು ನಿರ್ಲಕ್ಷಿಸಲಾಗಿದೆ ಎಂಬ ಆರೋಪ ಎಲ್ಲಾ ಸದಸ್ಯರಿಂದ ಕೇಳಿಬಂದಿತು. ಅಲ್ಲದೇ ಜಿಲ್ಲಾಡಳಿತ ಪಟ್ಟಿ ಮಾಡಿರುವ ಕಾಮಗಾರಿಗಳಿಗೆ ತಮ್ಮ ವಿರೋಧವಿದೆ ಎಂದು ಸದಸ್ಯರು ಆಕ್ಷೇಪಿಸಿದರು.

ಇದೇ ಸಂದರ್ಭ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಕೂಡ ತಮ್ಮ ಅಸಹಾಯಕತೆ ವ್ಯಕ್ತಪಡಿಸಿ, ಇತರ ಜಿಲ್ಲೆಗಳಲ್ಲಿ ಇಂತಹ ಕ್ರಮವಿಲ್ಲ ಎಂದರು. ಇದು ಜಿಲ್ಲಾ ಉಸ್ತುವಾರಿ ಸಚಿವರ ಅಸಹಾಯಕತೆಗೆ ಉದಾಹರಣೆಯಾಗಿದ್ದು; ಜಿಲ್ಲೆಗೆ ಇಂತಹ ಅಧಿಕಾರಿಗಳು ಬೇಡವೆಂದಾದರೆ ಅವರನ್ನು ಕಳುಹಿಸಿ ಬೇರೆಯವರನ್ನು ನೇಮಿಸಲಿ ಎಂದು ವಿ. ಪಿ. ಶಶಿಧರ್ ಪದೇ ಪದೇ ಸಚಿವ ನಾಣಯ್ಯ ಅವರ ಕಾರ್ಯ ವೈಖರಿ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿಗಳು ಮಾಡಿರುವ ಪಟ್ಟಿಯಲ್ಲಿ ಮಡಿಕೇರಿ ತಾಲ್ಲೂಕಿಗೆ ಅನ್ಯಾಯವಾಗಿಲ್ಲ ಎಂದು ಸದಸ್ಯೆ ವೀಣಾ ಅಚ್ಚಯ್ಯ ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರೆ, ಇತರ ಸದಸ್ಯರೆಲ್ಲರೂ ಅವರ ವಿರುದ್ಧ ಕಿಡಿ ಕಾರಿದರು. ಜಿಲ್ಲಾಧಿಕಾರಿಗಳ ಬದಲಾವಣೆಗೆ ನಿರ್ಣಯ ಮಂಡಿಸಿ ಎಂದು ಅಧ್ಯಕ್ಷೆ ಕೆ. ಪಿ. ಚಂದ್ರಕಲಾ ಸದಸ್ಯರಿಗೆ ಸೂಚಿಸಿಧರಾದರೂ, ಚರ್ಚೆ ಅರ್ಧದಲ್ಲೇ ಮೊಟಕುಗೊಂಡಿತು. ಜಿ. ಪಂ. ಉಪಾಧ್ಯಕ್ಷ ಇಕ್ಬಾಲ್ ಹಸನ್ ಸೇರಿದಂತೆ ಬಹುತೇಕ ಸದಸ್ಯರು ಹಾಜರಿದ್ದರು. ಸಭೆಯ ಆರಂಭದಲ್ಲಿ ಮಾಜಿ ಮುಖ್ಯಮಂತ್ರಿ ಜೆ. ಹೆಚ್. ಪಟೇಲ್ ನಿಧನಕ್ಕೆ ಒಂದು ನಿಮಿಷ ಮೌನ ಆಚರಿಸಲಾಯಿತು.

— ಕೃಪೆ ಕೊಡಗು ಮಿತ್ರ.

---

ರಸವಿಲ್ಲದ ಕಬ್ಬು ಕಸಕ್ಕೆ ಸಮಾನ.

# ಬೆಂಗಳೂರಿನಲ್ಲಿ ಹುತ್ತರಿಯ ಸಂಭ್ರಮ

ಇದೇ ಪ್ರಥಮ ಬಾರಿಗೆ ಬೆಂಗಳೂರಿನ ಕೊಡಗು ಗೌಡ ಸಮಾಜವು ಕಾವಲ್‌ಬೈರಸಂದ್ರದಲ್ಲಿರುವ ಸಮಾಜದ ಕಟ್ಟಡದಲ್ಲಿ ದಿನಾಂಕ 11-12-2000ದಂದು ಹುತ್ತರಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಬೆಂಗಳೂರಿನಲ್ಲಿ ಮತ್ತಿಕೆರೆ, ಬೆಮೆಲ್ ಕಾಲೋನಿ ಮುಂತಾದ ಕಡೆಗಳಲ್ಲಿ ಸ್ಥಳೀಯ ಕೊಡಗಿನ ಇತರೆ ಜನಾಂಗದ ಕೆಲವು ಕುಟುಂಬಗಳೊಡನೆ ಸೇರಿ ಹುತ್ತರಿಯನ್ನು ಆಚರಿಸುತ್ತಿದ್ದರು. ಈ ಬಾರಿ ಕೊಡಗು ಗೌಡ ಸಮಾಜವು ಈ ಕಾರ್ಯಕ್ರಮವನ್ನು ಆಯೋಜಿಸಿದ್ದು ಶ್ಲಾಘನೀಯವಾದದ್ದು.

ಸಂಜೆ 6-45 ಗಂಟೆಗೆ ಶ್ರೀಮತಿ ಬಿಟ್ಟಿರ ಚೋಂದಮ್ಮ ಶಂಭು ಅವರ ಪ್ರಾರ್ಥನೆಯೊಡನೆ ಪ್ರಾರಂಭವಾದ ಈ ಕಾರ್ಯಕ್ರಮ ಸುಮಾರು 9-15ರ ತನಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. 8-00 ಗಂಟೆಗೆ ಸಮಾಜದ ಮಾಜಿ ಅಧ್ಯಕ್ಷರಾದ ಶ್ರೀ ತೋಟಂಬೈಲು ಬೆಳ್ಯಪ್ಪನವರು ಕದಿರನ್ನು ಕುಯ್ದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂದುವರಿದವು. ಸುಮಾರು 150 ಮಂದಿ ಸೇರಿದ್ದ ಈ ಸಮಾರಂಭದಲ್ಲಿ ಮೂಟೇರ ಅಂಜಲಿ ಉತ್ತಪ್ಪ, ಚೈತ್ರಶ್ರೀ ವಸಂತ ಕುಮಾರ್, ಅಪೂರ್ವ ಪರ್‌ಫಾಮಿಂಗ್ ಆರ್ಟ್ ಸೆಂಟರಿನ ಬಿಯಾಂಕ ಹಾಗೂ ದೀಪ್ತಿ, ಅಮ್ಮಾಜೀರ ಧೃತಿಪೊನ್ನಪ್ಪ ಮತ್ತು ತಂಡ, ಮತ್ತು ಅಣ್ಣಚ್ಚಿರ ಗಿರೀಶ್‌ರವರ 'ಶಿವಶಕ್ತಿ' ತಂಡದವರಿಂದ ಕುಣಿತಗಳು ಬಹಳ ಸುಂದರವಾಗಿ ಮೂಡಿಬಂದವು. ಯಂಕನ ದಿನೇಶ್‌ರವರ ಛದ್ಮವೇಶ ಕೂಡ ಚೆನ್ನಾಗಿತ್ತು. ಈ ಕಾರ್ಯಕ್ರಮವನ್ನು ಕರ್ಣೆಯನ ಸುನಿಲ್ ಹಾಗೂ ಬಿಟ್ಟೀರ ರೀನಾ ಶಂಭು ಅವರು ನಿರ್ವಹಿಸಿದ್ದರು. ಮೈಸೂರಿನಲ್ಲಿ ಆದರ್ಶ ದಂಪತಿಗಳ ಕಾರ್ಯಕ್ರಮದಲ್ಲಿ ಜಯಗಳಿಸಿದ ಶ್ರೀಮತಿ ಮತ್ತು ಶ್ರೀ ಮೊಟ್ಟನ ರವಿಕುಮಾರ್ ದಂಪತಿಗಳಿಗೆ ಹಾಗೂ ಫ್ಯಾಶನ್ ಶೋನಲ್ಲಿ ಜಯಶಾಲಿಯಾದ ಕುಮಾರಿ. ಬಿಟ್ಟಿರ ರೀನಾ ಶಂಭು ಅವರನ್ನು ವೇದಿಕೆಯಲ್ಲಿ ಅಭಿನಂದಿಸ ಲಾಯಿತು. ಕೊನೆಯಲ್ಲಿ ವಂದನಾರ್ಪಣೆಯನ್ನು ಮಾಡಿದ ಕಾರ್ಯಕ್ರಮದ ರುವಾರಿಯಾದ ಶ್ರೀ ಮೊಟ್ಟನ ರವಿಕುಮಾರ್ ಅವರು ಇನ್ನು ಮುಂದೆ ಪ್ರತಿ ವರ್ಷವು ಹುತ್ತರಿಯನ್ನು ಸಮಾಜದ ಕಟ್ಟಡದಲ್ಲಿ ಆಚರಿಸುವುದಾಗಿ ಹಾಗೂ ಕೈಲುಮುಹೂರ್ತ ಹಬ್ಬವನ್ನು ಹಬ್ಬನಡೆದ ಮರು ಭಾನುವಾರವೇ ಸಮಾಜದ ಕಟ್ಟಡದಲ್ಲಿ ನಡೆಸಲಾಗುವುದೆಂದು ಪ್ರಕಟಿಸಿದರು. ಈ ಸಮಾರಂಭದಲ್ಲಿ ಸಮಾಜದ ಅಧ್ಯಕ್ಷರಾದ ಶ್ರೀ ಅಮ್ಮವನ ವಾಸು, ಡಾ. ಕಾವೇರಿಮನೆ ಬೋಜಪ್ಪ ಶ್ರೀ ನಂಗಾರು ನಾಣಯ್ಯ, ಡಾ. ವಸಂತಕುಮಾರ್, ಶ್ರೀ ಕಾಳೇಕೋಟಿ ಮಾಚಯ್ಯ ಸಮಾಜದ ಕಾರ್ಯದರ್ಶಿಗಳಾದ ಶ್ರೀ ಕುದುಪಜೆ ಗಣಪತಿ ಮುಂತಾದವರು ಭಾಗವಹಿಸಿದ್ದರು. ಬಂದಿದ್ದವರಿಗೆಲ್ಲ ತಂಬಿಟ್ಟು, ಹಾಗೂ ಅವಲಕ್ಕಿಯ ವಿತರಣೆಯು ಸಹ ಇತ್ತು.

**"ಮತ್ತಿಕೆರೆಯಲ್ಲಿ ಹುತ್ತೇರಿ ಆಚರಣೆ"**

ಬೆಂಗಳೂರಿನ ಮತ್ತಿಕೆರೆಯಲ್ಲಿ ಶ್ರೀ ಚೆರಿಯಮನೆ ಗಣಪತಿಯವರ ಮನೆಯಲ್ಲಿ ದಿನಾಂಕ 11-12-2000ರಂದು ಸ್ಥಳೀಯ 20-25 ಕುಟುಂಬಗಳು ಸೇರಿ ಹುತ್ತರಿಯನ್ನು ಆಚರಿಸಿರುವುದು ಕೂಡ ತಿಳಿದು ಬಂದಿದೆ. ಸುಮಾರು 12ವರ್ಷಗಳಿಂದ ತಮ್ಮ ಮನೆಯ ಎದುರಿನ ಜಾಗದಲ್ಲಿ ಭತ್ತವನ್ನು ನೆಟ್ಟು ಹುತ್ತರಿಯನ್ನು ಆಚರಿಸುತ್ತಾ ಬಂದಿರುವ ಶ್ರೀ ಚೆರಿಯಮನೆ ಗಣಪತಿಯವರನ್ನು ಕೊಡಗಿನ ಪದ್ಧತಿಯನ್ನು ಉಳಿಸಿ ಬೆಳೆಸುವ ಅವರ ಈ ಕಾರ್ಯಕ್ಕಾಗಿ ಅವರನ್ನು ಮೆಚ್ಚಿ ಅಭಿನಂದಿಸುವುದು ಕೂಡ ನಮ್ಮ ಕರ್ತವ್ಯ.

— ಗೋವಿಂದಮ್ಮನ. ಪ್ರವೀಣ್‌ಕುಮಾರ್, ಬೆಂಗಳೂರು

---

# ಬುದ್ಧಿ ಬೆಳೆಯಕು

ನಮ್ಮ ಬದ್ಕ್‌ಗೆ ಅನುಕೂಲ ಬೇಕ್, ಬದ್‌ಕೇ, ಮನೆ, ಆಸ್ತಿ, ದುಡ್ಡ್ ವಳ್ಳೆ ಚಾಕ್ರಿ ಇದೆಲ್ಲಾ ಬೇಕ್. ಅನ್ನ ನೀರ್, ಗಾಳಿ, ಬಿಸಿಲ್ ಇಂತಾ ತೊಂದ್ರೆಂದ ನಾವ್ ನಮ್ಮ ರಕ್ಷಣೆ ಮಾಡಿಕಣಕು. ನಾವ್ ಬಾಳ್‌ಲಿ ತಿಂಬ, ಉಣ್ಣುವ, ಸಂತಾನ ಮಾಡ್ದು ಆತ್ನ ಪ್ರಾಣಿಗೂ ನಮಿಗೂ ಭೇದ ಇಲ್ಲೆ. 'ಜೀವನ" ಹೇಳ್‌ರೆ ಬೆಳ್‌ವಣಿಗೆ ಕಾಣಕು. ಬೆಳವಣಿಗೆ ಅಂದರೆ ಬರೀ ಶರೀರ ಅಲ್ಲ ಬುದ್ಧಿಯು ಬೆಳಿಯಕು. ಆತ್ಮದ ಬೆಳ್‌ವಣಿಗೆ ಆಕು. ಅರ್ಥ ಇಷ್ಟೇ ಮನುಷ್ಯನ ತಡಿ ಬೆಳ್‌ಕಂಡ್ ಬಂದಂಗೆ ಮನುಷ್ಯನ ಮನುಷ್ಯತ್ವ, ನೀತಿ, ನಡತೆ ಬೆಳಿಯಕು. ನಮ್ಮ ಶೀಲ ಸಂಸ್ಕಾರ ವಿಕಾಸ ಆಕು. ಗಿಣ್ಣ ಬೆಳ್ತ್ ತೆಳಿರೆ ಒಳ್ಳೆ ಬುದ್ಧಿ ತಾ ಅರ್ಥ. ಬದ್ಕ್‌ಕೆ ಪ್ರಾಣಿ ತರದ ಜೀವನ ಆಕಾಗದ್. ವಳ್ಳೆ ಬುದ್ಧಿಲಿ ಮನ್‌ಸ ಮನ್‌ಸನಾಗಿ ಬಾಳಕು. ನಮ್ಮ ಆದ್ಯ ಗುರಿ ಮನುಷ್ಯನಾಗಿರಕು. ಮನುಸತ್ವಲಿ ಒಳ್ಳೆ ಹೆಸ್ರ್ ತೆಗೆಯಕು.

ಕೊಡವ ಭಾಷೆಯಲ್ಲಿ : ಚೇಂದ್ರಿಮಾಡ ಮುತ್ತಪ್ಪ
ಅರೆಭಾಷೆಗೆ : ಪಟ್ಟಡ ಪ್ರಭಾಕರ.

---

*ನಗೆ ಹನಿ*

ರೋಗಿ : ಡಾಕ್ಟರೇ, ನನಗೆ ಕಳೆದ ಮೂರು, ದಿನದಿಂದ ಕೆಮ್ಮು
ಡಾಕ್ಟರ್ : ಮತ್ತೆ, ಇಷ್ಟು ದಿನ ಏನು ಮಾಡ್ತಾ ಇದ್ದೆ?
ರೋಗಿ : ಕೆಮ್ಮುತಾ ಇದ್ದೆ ಡಾಕ್ಟರ್!

---

**ಕೆಲಸವಿಲ್ಲದ ಮನಸ್ಸು ದೆವ್ವದ ಕಾರ್ಯಾಗಾರದಂತೆ.**

# ನಾಶ ಮಾಡುವನಿಕ್ಕಿಂತ ರಕ್ಷಿಸುವಾತ ತುಂಬಾ ದೊಡ್ಡವನು

ಮನುಷ್ಯನಿಗೆ ಅವನು ಜೀವವಿರುವವರೆಗೆ ಕಷ್ಟ ಸುಖಗಳು ಇದ್ದೇ ಇರುತ್ತವೆ. ಕೆಲವು ಅವನು ಹುಟ್ಟಿದ ಘಳಿಗೆಯ ಅನುಸಾರ ವಾಗಿ ಬರೆದಿರುತ್ತದೆ. ಒಟ್ಟಾರೆ ಗ್ರಹಚಾರ ಧೆಸೆಫಲ ಕಂಟಕ ಇತ್ಯಾದಿ ಜನ್ಮವಾಗುವಾಗಲೇ ಪಡೆದುಕೊಂಡು ಬಂದಿರುತ್ತೇವೆ. ಮಗು ಜನ್ಮವಾದ ಕೆಲವು ದಿವಸಗಳಲ್ಲಿ ಪೋಷಕರು ಜ್ಯೋತಿಷ್ಯರ ಹತ್ತಿರ ಹುಟ್ಟಿದ ಘಳಿಗೆಯ ಅನುಸಾರ ಜಾತಕ ಬರೆಸಿ ಅದರಲ್ಲಿ ಅಡಗಿರುವುದನ್ನೇ ಅನುಸರಿಸುತ್ತೇವೆ. ಆದರೆ ಕೆಲವೊಂದು ಮನುಷ್ಯನಿಗೆ ಹಣೆಯಲ್ಲಿ ಬರೆದ ಕಷ್ಟವಲ್ಲದೆ ಮಾಟಮಂತ್ರ ತಂತ್ರಗಳಿಂದ ಬರುತ್ತದೆ. ಆದರೆ ಅದು ಕೆಲಸಮಯದವರೆಗೆ ಮಾತ್ರ. ಆಗ ನಾವು ದೇವರಲ್ಲಿ ಮೊರೆಹೋಗುತ್ತೇವೆ. ಆ ಸಮಯದಲ್ಲಿ ನಾಶ ಮಾಡುವವನಿಂದ ರಕ್ಷಿಸುವಾತ ರಕ್ಷಿಸುತ್ತಾನೆ. ಆದರೆ ನಿಧಾನವಾಗಿ ನಾಶ ಮಾಡುವವನಿಗೆ ಅದರ ತಿರುಗೇಟು ನಿಧಾನವಾಗಿ ದೊರಕುತ್ತದೆ. ಆ ಜಾಗದಲ್ಲಿ ಕತ್ತಲೆಯಿಲ್ಲಾ. ಆದ್ದರಿಂದ ನಾವು ಏನೇ ಕಷ್ಟ ಬಂದರು ಬೇಡುವಾತನನ್ನು ನಿಶ್ಚಲ ಮನಸ್ಸಿನಿಂದ ಬೇಡಿದರೆ ನಮ್ಮ ಕಾರ್ಯಗಳು ನಿಧಾನವಾಗಿ ಈಡೇರುತ್ತದೆ. ಆದರೆ ಹೆದರಬಾರದು ಹೀಗೆಯೆ ಕೆಲವು ಗಂಡಾಂತರಗಳು ಕೂದಲೆಳೆಯ ಅಂತರದಿಂದ ಪಾರಗಿಬಿಡುತ್ತದೆ. ಆಗ ನಾವು ದೇವರೆ ನಮ್ಮ ಕಾಪಾಡಿದ ಎಂದು ಹೇಳಿಕೊಳ್ಳು ತ್ತೇವೆ. ಆಗದಿದ್ದಲ್ಲಿ ಆ ದೇವರು ಕಣ್ಣು ಸಹ ಬಿಟ್ಟಿಲ್ಲಾ ಎಂದು ಚಂಚಲಮನಸ್ಸಿನಿಂದ ಮನಸ್ಸಿನಲ್ಲಿ ಬೈಯ್ಯುತ್ತೇವೆ. ಹಾಗೆಯೇ ನಮ್ಮ ಮನಸ್ಸು ಸ್ಥಿರವಾಗಿರದೆ ಕಳೆದು ಹೋದ ಘಟನೆಗಳನ್ನು ಮೆಲಕುಹಾಕುತ್ತಿರುತ್ತವೆ. ಬಾಲ್ಯದಿಂದ ಹಿಡಿದು ಯೌವನ ಕಳೆದು ಮದುವೆಯಾದ ನಂತರವು ಸಹ ಆ ಯೋಚನೆ ಬರುತ್ತದೆ. ಅದರಲ್ಲಿ ಕಹಿ, ಸಿಹಿ, ಘಟನೆಗಳು ಸಹ ನಡೆದಿರುತ್ತವೆ. ಕಹಿ ಘಟನೆ ನಡೆದಿದ್ದುದು ಜಯಸಾಧಿಸಿದ್ದಲ್ಲಿ ಪುನಃ ಪುನಃ ಅದನ್ನು ನೆನಪಿಸಿ ಕೊಳ್ಳುತ್ತೇವೆ. ಹಾಗೆಯೆ ನನ್ನ ಜೀವನದ ಪಯಣದಲ್ಲಿ ಒಂದು ರೋಮಾಂಚಕಾರಿ ಸತ್ಯ ಘಟನೆ ನಡೆದು ಕಡೆಗೂ ಅದು ನಾವು ಬೇಡಿಕೊಂಡಂತೆ ಆಯಿತು.

1991ನೇ ಇಸವಿಯಲ್ಲಿ ನಾನು ಭೂದಳದಲ್ಲಿ ಸೇವೆ ಸಲ್ಲಿಸುತ್ತಿದ್ದೆ, ನಮ್ಮ ಯೂನಿಟ್‌ನಿಂದ ಮೂರು ಮಂದಿ ಫೈರಿಂಗ್ ಸ್ಪರ್ಧೆಗೆ ಹೋಗಬೇಕಾಗಿತ್ತು ಹೀಗೆ ನೂರಾರು ಮಂದಿ ಸೇರಿದ್ದರು. ಸ್ಪರ್ಧೆಗೆ ನಮ್ಮ ಮೂವರಲ್ಲಿ ನಾನೊಬ್ಬನಾಗಿದ್ದೆ ನನಗೆ ಮತ್ತು ವಿಶ್ವಾಸ್ ಎಂಬಾತನಿಗೆ ರೈಫಲ್‌ಕೊಟ್ಟರು. ಮೂರನೇಯವನಾದ ಭೂಪ್‌ಸಿಂಗ್‌ನಿಗೆ ಕಾರ್ಬನ್ ಮಿಷಿನ್ ಗನ್ ಕೊಟ್ಟರು. 1984ನೇ ಇಸವಿ ಆಕ್ಟೋಬರ್ 31ನೇ ತಾರೀಖು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಅವರ ರಕ್ಷಿಸುವರೆ ಅವರನ್ನು ಬಲಿತೆಗೆದುಕೊಂಡ ಗನ್ ಆದಾಗಿತ್ತು ನಾವುಗಳು ಹೊರಡುವ ಮುಂಚೆ ನಮ್ಮ ಮೇಲ್ವಿಚಾರಕರು ನಮಗೆ ಮುನ್ನೆಚ್ಚರಿಕೆ ನೀಡಿದ್ದರು. ನೀವುಗಳು ಯೂನಿಫಾರಂ ತೊಟ್ಟು ಬೆಲ್ಟ್‌ಗೆ ಚೈನ್ ಸಿಕ್ಕಿಸಿ ಅದರಲ್ಲಿ ನಿಮ್ಮ ಹತ್ಯಾರ್‌ಗಳನ್ನು ಲಾಕ್ ಮಾಡಿ ಕೊಂಡು ಸಂಜೆಗೆ ರೈಲ್ವೆ ಸ್ಟೇಷನ್‌ಗೆ ತೆರಳಿ ಎಂದು ಆದೇಶ ನೀಡಿದ್ದರು. ನಾನು ಮತ್ತು ವಿಶ್ವಾಸ್ ಎಂಬುವನು ಯೂನಿಫಾರಂ ತೊಟ್ಟು ಹೇಳಿದಂತೆ ರೈಫಲ್‌ಗಳಿಗೆ ಬಂದೋಬಸ್ತ್ ನೀಡಿದ್ದೆವು. ಆದರೆ ಭೂಪ್‌ಸಿಂಗ್ 24" ಸೂಟ್‌ಕೇಸ್‌ನಲ್ಲಿ ತನ್ನ ಹತ್ಯಾರನ್ನೇ ಇಟ್ಟು, ಯೂನಿಫಾರಂ ಸಹ ಹಾಕದೆ ಮದುವೆ ಮನೆಗೆ ಹೊರಟವನ ಹಾಗೆ ಡ್ರೆಸ್ ಮಾಡಿದ್ದನು. ನಾವು ರೈಲ್ವೆ ಸ್ಟೇಷನ್‌ಗೆ ಹೊರಡುವ ಮುಂಚೆಯೆ ಅವನಿಗೆ ನಮ್ಮಂತೆ ಡ್ರೆಸ್ ಮಾಡಿಕೊ ಎಂದು ಹೇಳಿದರು ಸಹ ಗಣನೆಗೆ ತೆಗೆದುಕೊಳ್ಳಲಿಲ್ಲಾ. ನಾನು ಎಷ್ಟೊಸಲ ಈತರಹ ಹೋಗಿದ್ದೇನೆ ನಿಮ್ಮದು ನೀವು ನೋಡಿ ಕೊಳ್ಳಿ ಎಂದು ಹೇಳಿದನು. ರೈಲು 10 ಘಂಟೆಗೆ ಹೊರಡುವುದಿತ್ತು. ನಾವು ಸಿಲಗುರಿಯಿಂದ ಆಮದ್‌ನಗರಕ್ಕೆ ಹೋಗಬೇಕಾಗಿತ್ತು. ರೈಲು ಹತ್ತುವುದಕ್ಕೆ ಮುಂಚೆಸಹ ಅವನಿಗೆ ಜಾಗ್ರತೆ ನೀಡಿದೆವು. ಅಲ್ಲಿಂದಲೇ ಅವನಿಗೆ ಶನಿ ಗ್ರಹಚಾರ ಸುರುವಾಯಿತು. ಸರಿಸಮಯಕ್ಕೆ ರೈಲು ಹತ್ತಿದೆವು ಮಲಗಲು ಜಾಗ ಸಿಕ್ಕದ ಕಾರಣ ಮೂವರು ಒಟ್ಟಿಗೆ ಕೂತು ರಾತ್ರಿಯನ್ನು ಕಳೆದೆವು. ಬೆಳಿಗ್ಗೆ ಎಂಟು ಘಂಟೆಗೆಲ್ಲಾ ರೈಲು ಕಟ್‌ನಿ ಎಂಬ ಸ್ಥಳಕ್ಕೆ ತಲುಪಿತು. ಅಲ್ಲಿಂದ ನಾವು ಬೇರೆ ರೈಲ್‌ನ್ನು ಹತ್ತಬೇಕಾಗಿತ್ತು. ಅಲ್ಲಿ ಕಾಫಿ ತಿಂಡಿ ಮುಗಿಸಿ ಮಧ್ಯಾಹ್ನ 11 ಘಂಟೆಗೆ ಬೇರೆ ರೈಲನ್ನು ಹತ್ತಿದೆವು ಆಗಲೂ ಸಹ ಅವನಿಗೆ ಆದೇಶ ನೀಡಿದೆವು. ಅವನಲ್ಲಿ ಏನೊಂದು ಪರಿಣಾಮ ಬೀರಲಿಲ್ಲಾ. ಅಲ್ಲಿಂದ ನಾವು ನೇರ ಆಹಮದ್ ನಗರಕ್ಕೆ ಹೋಗುವುದಿತ್ತು. ನಾವು ಹತ್ತಿದ ಕಂಪಾರ್ಟ್‌ಮೆಂಟ್ ಕೊನೆಯದಾಗಿತ್ತು. ಹತ್ತಿದೊಡನೆ ಮೇಲ್ಭಾಗದಲ್ಲಿ ಮಲಗಲು ಭೂಪ್‌ಸಿಂಗ್‌ನಿಗೆ ಸೀಟು ಸಿಕ್ಕಿತು. ನಾವಿಬ್ಬರು ಅವನ ಪಕ್ಕದ ಸೀಟಿನಲ್ಲಿ ಕುಳಿತು ಕೊಂಡೆವು. ಭೂಪ್‌ಸಿಂಗ್ ಸೂಟ್‌ಕೇಸನ್ನು ತಲೆಗೆ ಆಸರೆಯಾಗಿಟ್ಟುಕೊಂಡು ನಿದ್ರಾದೇವಿಗೆ ಶರಣಾದ ಅವನು ನಿದ್ರಿಸುವಾಗ ನಾವು ಘಳಿಗೆಗೊಮ್ಮೆ ಬಗ್ಗಿ ಅವನ ಸೂಟುಕೇಸ್‌ನ ಬಗ್ಗೆ ಗಮನ ನೀಡುತ್ತಿದ್ದೆವು. ರಾತ್ರಿ ಎಂಟು ಘಂಟೆಗೆಲ್ಲಾ ರೈಲು ಜಬ್ಬಲ್‌ಪುರ ಎಂಬ ಸ್ಟೇಷನನ್ನು ತಲಪಿತು ಅಲ್ಲಿ ಅರ್ಧ ಘಂಟೆ ರೈಲು ನಿಲ್ಲುವುದಿತ್ತು. ನಾವು ಮೂವರು ಅಲ್ಲಿ ರಾತ್ರಿಯ ಊಟ ಮಾಡಿದೆವು. ರೈಲು ಹೊರಟನಂತರ ಭೂಪ್‌ಸಿಂಗ್ ಮೇಲೆ ಹತ್ತಿ ಪುನಃ ನಿದ್ರಿಸಲಿಕ್ಕೆ ತಯಾರುಮಾಡಿದ. ಆಗ ನಾವು ಅವನಲ್ಲಿ ಕೇಳಿಕೊಂಡೆವು ನಾವು ಸ್ವಲ್ಪ ನಿದ್ರಿಸುತ್ತೇವೆ ನೀನು ಕೆಳಗಡೆ ಕುಳಿತುಕೋ ಎಂದು, ಆದರೆ ಅವನು ಒಪ್ಪಲಿಲ್ಲ. ಜಬ್ಬಲ್‌ಪುರದಲ್ಲಿ ಕಳ್ಳ ಈ ಸೂಟುಕೇಸನ್ನು ಎಗರಿಸುವ ಪ್ರಯತ್ನದಲ್ಲಿ ರೈಲು ನಿಧಾನವಾಗಿ ಚಲಿಸುತ್ತಿರುವಾಗ ಹತ್ತಿದನು. ಹಾಗೂ ಕೆಳಗಡೆ ಮುಖಕ್ಕೆ ತೆಳ್ಳಗಿನ ಟವಲ್ ಹಾಕಿಕೊಂಡು ನಿದ್ರೆ ಹೊಡೆಯುವವನ ಹಾಗೆ ಮಲಗಿದ್ದನು. ಅವನ ಅಭಿಪ್ರಾಯವೆಂದರೆ ಭೂಪ್‌ಸಿಂಗ್‌ಗೆ ನಿದ್ರೆಯಾದ ಕೂಡಲೇ ಆಸರೆಯಾಗಿಟ್ಟುಕೊಂಡ

**ಕೋಣೆಯಲ್ಲಿ ಬೆಳೆದವರು ಕೊಳೆಯುತ್ತಾರೆ, ದಾರಿಯಲ್ಲಿ ಬೆಳೆದವರು ಬೆಳೆಯುತ್ತಾರೆ.**

ಸೂಟುಕೇಸಿನಿಂದ ತಲೆ ಬೇರ್ಪಡೆಯಾದ ಕೂಡಲೇ ಅದನ್ನು ಎಗರಿಸುವ ಕಳ್ಳನ ಆಲೋಚನೆಯಾಗಿತ್ತು. ಯಾರು ಸಹ ಅವನು ಕಳ್ಳನಲ್ಲಪ..ದು ಗೋಷ್ಟಿಮಾಡಲಿಲ್ಲ. ಯಾವುದೋ ಬಿಕ್ಷುಕನೆಂದು ತಿಳಿದಿದ್ದರು. ಇಡೀ ಕಂಪಾರ್ಟ್‌ಮೆಂಟ್‌ನಲ್ಲಿರು ವರೆಲ್ಲಾ ನಿದ್ರೆಗೆ ಶರಣಾದರು. ನಮಗೆ ಕುಳಿತಲ್ಲಿಂದಲೆ ನಿದ್ರೆಯ ಮಂಪರಾಗುತ್ತಿತ್ತು. ಆದರೂ ಸಹ ಒಮ್ಮೊಮ್ಮೆ ಭೂಪ್‌ಸಿಂಗ್‌ನ ಕಡೆ ಕಣ್ಣಾಡಿಸುತ್ತಿದ್ದೆವು. ಅವನು ಭೂಪನ ಹಾಗೆ ಗೊರಕೆ ಹೊಡೆಯುತ್ತಿದ್ದ. ರಾತ್ರಿ 11-30ರ ಸಮಯದಲ್ಲಿ ಭೂಪ್‌ಸಿಂಗ್‌ನಿಗೆ ಎಚ್ಚರವಾಗಿ ನಮ್ಮ ಬಳಿಗೆ ಕೂಗಿಕೊಂಡು ನನ್ನ ಸೂಟುಕೇಸ್ ಕಾಣುವುದಿಲ್ಲಾ, ನೀವೇನಾದರು ತಮಾಷೆಗಾಗಿ ಬಚ್ಚಿಟ್ಟಿದ್ದೀರೋ ಎಂದು ಕೇಳಿದನು. ನಮಗೆ ಗಾಬರಿ, ಹೆದರಿಕೆ ಅವನ ಮೇಲೆ ಕೋಪ ಸಹ ಉಕ್ಕೇರಿ ಬಂತು. ಇಡೀ ಕಂಪಾರ್ಟ್‌ಮೆಂಟಿನಲ್ಲಿರು ವರೆಲ್ಲಾ ಎಚ್ಚರಗೊಂಡರು ಇವನ ಬೊಬ್ಬೆಗೆ. ಭೂಪ್‌ಸಿಂಗ್ ತನ್ನ ತಲೆಯನ್ನು ಸೀಟಿನ ರಾಡ್‌ಗಳಿಗೆಗುದ್ದಿಕೊಂಡು ನಾನು ಮೊದಲೇ ನಿಮ್ಮ ಮಾತು ಕೇಳಬೇಕಾಗಿತ್ತು. ನಾನು ಗುಂಡಿಗೆ ಬಿದ್ದೆ ನಿಮ್ಮನ್ನು ಸಹ ಗುಂಡಿಗೆ ಬೀಳಿಸಿದೆ ಎಂದುಕೊಂಡು ಚಲಿಸುತ್ತಿರುವ ರೈಲಿನಿಂದ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿದ. ನಾವು ಕೋಪಗೊಳ್ಳದೆ ನೀನು ಹೆದರ ಬೇಡ ಧೈರ್ಯದಿಂದ ಇರು ಕಳುವಾದ ವಸ್ತು ಸಿಕ್ಕೆ ಸಿಗುತ್ತದೆ ದೇವರಲ್ಲಿ ಧೈರ್ಯವಾಗಿ ಪ್ರಾರ್ಥಿಸಿಕೊಂಡರೆ ಏನನ್ನೂ ಬೇಕಾದರು ಸಾಧಿಸಬಹುದು, ನಾವು ಹುಡುಕಿ ಪ್ರಯತ್ನಿಸೋಣವೆಂದು ಸಮಾಧಾನ ಪಡಿಸಿದೆವು. ಕೆಲವು ಪ್ರಯಾಣಿಕರು ನಮಗೆ ಹೇಳಿದರು. ಅವನಿಂದಾಗಿ ನಿಮಗೆ ಸಹ ಶಿಕ್ಷೆಯಾಗುತ್ತದೆ ಅವನನ್ನು ಚಲಿಸುವ ರೈಲಿನಿಂದ ತಳ್ಳಿಬಿಡಿ, ನಂತರ ನಿಮ್ಮ ಮೇಲ್ವಿಚಾರಕರಿಗೆ ಹೇಳಿ ಅವನು ಎಲ್ಲೊ ತಪ್ಪಿಸಿಕೊಂಡು ಹೋದನೊ ಗೊತ್ತಿಲ್ಲವೆಂದು. ಆದರೆ ಆ ತರಹ ನಾವು ಮನಸ್ಸಿಗೆ ತೆಗೆದು ಕೊಳ್ಳಲಿಲ್ಲ. ಅವನಿಗೆ ಆಗಿರುವ ನೋವು ಪಶ್ಚಾತ್ತಾಪ ನಮ್ಮದೆ ಎಂದು ತಿಳಿದು ಸುಮ್ಮನಾದೆವು. ನಡೆಯುಂತಹದು ನಡೆದು ಹೋಗಿದೆ. ಇನ್ನೂ ದೇವರ ಕೈಯಲ್ಲಿದೆಯೆಂದು ಭೂಪ್‌ಸಿಂಗ್‌ನಿಗೆ ಧೈರ್ಯ ಹೇಳಿದೆವು. ಕಾಣೆಯಾದ ಬಗ್ಗೆ ಮುಂದಿನ ಮಾರ್ಗದರ್ಶನ ನೀಡಿದವನು ಒಬ್ಬ ಶಾಲಾ ಶಿಕ್ಷಕ. ಅವನು 12 ಘಂಟೆಗೆಲ್ಲಾ ಮುಂದಿನ ಸ್ಟೇಷನ್‌ನಲ್ಲಿ ಇಳಿಯ ಬೇಕಾಗಿತ್ತು. ಅವನು 11 ರ ಸಮಯದಲ್ಲಿ ತನ್ನ ಸಾಮಾನನ್ನು ಬಾಗಿಲ ಬಳಿ ತಂದಿಟ್ಟು ಕುಳಿತಿದ್ದನಂತೆ. ಆ ಸಮಯದಲ್ಲಿ ಕಂದು ಬಣ್ಣದ ಸೂಟುಕೇಸ್ ಹಿಡಿದು ಮಾಸಲು ಬಟ್ಟೆಯ ಕುರುಚಲು ಗಡ್ಡದ ವ್ಯಕ್ತಿ ಸಹ ಇಳಿಯಲಿಕ್ಕೆ ಬಾಗಿಲ ಸಮೀಪ ನಿಂತಿದ್ದನಂತೆ. ಅವನ ಮೇಲೆ ಸಂಶಯ ಬಂದರು ವಿಚಾರಿಸದೆ ಸುಮ್ಮನಾದರಂತೆ. 11-15ರ ಸಮಯದಲ್ಲಿ ರೈಲು ಸಿಗ್ನಲ್‌ಗಾಗಿ ವೇಗ ಕಡಿಮೆ ಮಾಡಿದಾಗ ಈತನು ರೈಲಿನಿಂದ ಇಳಿದು ಕತ್ತಲೆಯಲ್ಲಿ ಮರೆಯಾದನೆಂದು ಆ ಶಿಕ್ಷಕ ನಮಗೆ ವಿವರಣೆ ನೀಡಿದನು. ಆ ಸ್ಥಳ ಪಿಪರೀಯಾ ಎಂಬ ಸ್ಟೇಷನ್ ಆಗಿತ್ತು. ಅಲ್ಲಿ ಈ ರೈಲಿಗೆ ನಿಲುಗಡೆಯಿಲ್ಲ. ನಮಗೆ ಏನು ಮಾಡಬೇಕೆಂದು ತೋಚಲಿಲ್ಲ. ಕೆಲವರು ಹೇಳಿದರು ಚೈನ್ ಎಳೆದು ರೈಲನ್ನು ನಿಲ್ಲಿಸಿಯೆಂದು. ಆದರೆ ನಿಲ್ಲಿಸಿ ಪ್ರಯೋಜನವಿರಲಿಲ್ಲ. ಆ ಸ್ಥಳ 20 ಕಿ.ಮೀ. ವರೆಗೆ ಕಾಡು ಪ್ರದೇಶವಾಗಿತ್ತು ಹಾಗೂ ರೈಲು ಕತ್ತಲನ್ನು ಸೀಳಿಕೊಂಡು 100ಕಿ.ಮೀ. ವೇಗದಲ್ಲಿ ಚಲಿಸುತ್ತಿತ್ತು. ನಮ್ಮಿಂದಾಗಿ ಎಲ್ಲರಿಗೆ ತೊಂದರೆ ಕೊಡಬೇಡವೆಂದು ಗ್ರಹಿಸಿ ಮುಂಬರುವ ಇಟಾಹರ್‌ಸಿ ಎಂಬ ಸ್ಥಳದಲ್ಲಿ ಪೋಲಿಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಡುವ ಎಂದು ನಿಶ್ಚಯಿಸಿದೆವು. ಬೆಳಗಿನ ಜಾವ 3-30 ಕ್ಕೆಲ್ಲಾ ಅಲ್ಲಿಗೆ ತಲುಪಿದೆವು. ಅಲ್ಲಿ ಹೋಗಿ ಕಂಪ್ಲೇಂಟ್ ಲಾಡ್ಜ್ ಮಾಡಿದೆವು. ಆ ಸ್ಟೇಷನ್‌ನವರು ಹತ್ತಿರವಿದ್ದ ಎಲ್ಲಾ ಸ್ಟೇಷನ್‌ಗಳಿಗೂ ಸಹ ತಿಳಿಸಿದರು. ಏಕೆಂದರೆ ಕಳ್ಳತನವಾಗಿದ್ದು ಅಂತಹ ವಸ್ತುವಾಗಿತ್ತು. ಬೆಳಿಗ್ಗೆ 7ರ ಮಯಕ್ಕೆ ಕಳ್ಳ ಇಳಿದು ಹೋದ ಪೀಪೆರಿಯಾ ಎಂಬಾ ಸ್ಥಳಕ್ಕೆ ಇಬ್ಬರು ಪೋಲಿಸ್ ಪೇದೆಯ ಜೊತೆಯಲ್ಲಿ ಬಂದೆವು. ಅವರು ಅಲ್ಲಿಯ ರಿಕ್ಷಾ ಇತರ ವಾಹನಗಳ ಡ್ರೈವರ್‌ಗಳನ್ನೆಲ್ಲಾ ಕರೆದು ವಿಚಾರಣೆ ಮಾಡಿದರು. ಇಂತಹ ವ್ಯಕ್ತಿ ನಿಮ್ಮ ವಾಹನದಲ್ಲಿ ಯಾವ ಕಡೆ ಪ್ರಯಾಣ ಬೆಳೆಸಿದನೆಂದು. ಆದರೆ ಯಾರ ಬಾಯಿಂದಲೂ ಅವನ ಬಗ್ಗೆ ತಿಳಿಯಲಿಲ್ಲಾ ಹಾಗೂ ಅಲ್ಲಿಯೇ ಇದ್ದ ಪೋಲಿಸ್ ಸ್ಟೇಷನ್‌ಗೆ ಸಹ ತಿಳಿಸಿ ನಾನು ಭೂಪ್‌ಸಿಂಗ್ ಮತ್ತು ವಿಶ್ವಾಸ್‌ನನ್ನು ಅಲ್ಲಿಯೇ ಬಿಟ್ಟು ಕಳ್ಳ ಇಳಿದ ಸ್ಥಳದಿಂದ 10ಕಿ. ಮೀ. ಪ್ರದೇಶವನ್ನೆಲ್ಲಾ ಸುತ್ತಾಡಿದೆ. ಪ್ರತಿಯೊಂದು ಮನೆಗಳಿಗೆ ಹೋಗಿ ಸಹ ವಿಚಾರಿಸಿದೆ. ಬೇರೆಯಾವ ವಸ್ತುವನ್ನಾದರು ತೆಗೆದುಕೊಳ್ಳಿ. ಆದರೆ ಆ ಹತ್ಯಾರವನ್ನು ಮಾತ್ರ ಕೊಟ್ಟುಬಿಡಿಯೆಂದು. ಆದರೆ ಏನು ಪ್ರಯೋಜನವಾಗಲಿಲ್ಲ. ಪುನಃ ಮಾರನೇ ದಿವಸ ಇದೇ ತರಹ ಮಾಡಿದೆ ರಾವಣನು ಸೀತೆಯನ್ನು ಲಂಕೆಗೆ ಅಪಹರಿಸಿದ ಸಮಯದಲ್ಲಿ ರಾಮ ಲಕ್ಷ್ಮಣರು ಪ್ರತಿಯೊಂದು ಮರಗಿಡ ಪಕ್ಷಿಗಳನ್ನು ನೀವು ಸೀತೆಯನ್ನು ನೋಡಿದಿರಾ ಎಂದು ಕೇಳಿದ ಹಾಗೆ ನಾನು ಪ್ರತಿಯೊಬ್ಬ ಮನುಷ್ಯನನ್ನು ಸಹ ಕೇಳಿದೆ. ಹೀಗೆ ಹುಡುಕುವ ಜವಾಬ್ದಾರಿ ಪೂರಾ ನನ್ನ ಮೇಲೆ ಬಿತ್ತು. ನನ್ನ ಹಾಗೂ ವಿಶ್ವಾಸನ ರೈಫಲ್‌ಗೆ ಅವನು ಅಲ್ಲಿಯೇ ಕಾವಲಿದ್ದ ಭೂಪ್‌ಸಿಂಗ್ ನಡೆಯಲಿಕ್ಕೆ ನಿತ್ರಾಣನಾಗಿದ್ದ. ಇನ್ನೂ ಪೋಲಿಸರ ಕರ್ತವ್ಯ ಗೊತ್ತಿದೆಯಲ್ಲಾ ಹಾಗೂ ನಮ್ಮ ಮೂವರ ಪೈಕಿ ನಾನು ಒಂದು ತಿಂಗಳ ಮಟ್ಟಿಗೆ ಸೀನಿಯರ್ ಆಗಿದ್ದೆ. ಘಟನೆ ನಡೆದ ವಿವರವನ್ನು ಮುಂಚೆ ನನ್ನಲ್ಲಿಯೇ ಕೇಳುತ್ತಿದ್ದರು. ಹೀಗೆ ಊಟದ ಕಡೆಗೆ ಸಹ ಗಮನ ಕೊಡದೆ ಮೂರು ದಿವಸ ಪ್ರಯತ್ನಿಸಿ ಆಯಿತು. ಈಗ ಮಧ್ಯೆದಲ್ಲಿ ಸಿಕ್ಕಿಕೊಂಡ ಹಾಗೆ ಆಯಿತು. ಇನ್ನೂ ವಾಪಾಸ್ಸು ಯೂನಿಟ್‌ಗೆ ಮುಖ ತೋರಿಸಲಿಕ್ಕೆ ನಾಚಿಕೆಯಾಗುತ್ತಿದೆಯೆಂದು ಅಲ್ಲಿಗೆ ಟೆಲಿಗ್ರಾಂ ಮುಖಾಂತರ ತಿಳಿಸಿ ನಾನು ವಿಶ್ವಾಸ್ ಎಂಬುವನು ಆಮದ್‌ನಗರಕ್ಕೆ ಹೋದೆವು. ಭೂಪ್‌ಸಿಂಗ್ ಆ ಸ್ಥಳದಲ್ಲಿಯೇ ಉಳಿದನು. ಅಲ್ಲಿಯ ಪೋಲಿಸರು ಹೇಳಿದರು ಅಕಸ್ಮಾತ್ ವಸ್ತುಗಳು ದೊರಕಿದರೆ ಇವನು ಅದನ್ನು ಗುರುತಿಸಬಹುದೆಂದು ಹಾಗೂ ಅವನು ನಮ್ಮೊಡನೆ ಬರಲು ಒಪ್ಪಲಿಲ್ಲ. ಮಾರನೇ ದಿನ ನಾವು ಅಲ್ಲಿ ಹೋಗಿ ರಿಪೋರ್ಟ್

---

**ಆನೆ ಲದ್ದಿ ಹಾಕುತ್ತದೆಂದು ಮೊಲ ಲದ್ದಿ ಹಾಕಿದರೆ ?**

ಮಾಡಿದೆವು. ಈ ವಿಷಯ ತಿಳಿದ ಅಲ್ಲಿಯ ಪ್ರತಿಯೊಬ್ಬರು ಸ್ಟೇನ್‌ಗನ್ ಕಳುವಾಗಿಲ್ಲಾ. ನೀವು ಮೂರು ಮಂದಿ ಸೇರಿ ಅದನ್ನು ಮಾರಾಟ ಮಾಡಿದ್ದೀರ ಸುಳ್ಳು ಹೇಳುತ್ತಿದ್ದೀರಾ ನಿಮಗೆ ಸರ್ಕಾರದಿಂದ ಸಿಗಬೇಕಾದ ಯಾವ ಸೌಲಭ್ಯವಿಲ್ಲದೆ ನೇರ ಸಿಕಂದರಾಬಾದ್ ಸೆಂಟ್ರಲ್ ಜೈಲ್‌ಗೆ ಹೋಗ ಬೇಕಾಗುತ್ತದೆ ಯೆಂದು ಹೇಳಿದರು. ಆ ಸಮಯದಲ್ಲಿ ನಮ್ಮ ಅಳಲನ್ನು ಯಾರಲ್ಲಿ ಹೇಳಿಕೊಳ್ಳುವುದು. ಬೆಳಿಗ್ಗೆ ಸಾಯಂಕಾಲ ದೇವಸ್ಥಾನಕ್ಕೆ ಹೋಗಿ ದೇವರನ್ನು ಬೇಡುತ್ತಿದ್ದೆವು. ಕಳ್ಳತನವಾದ ವಸ್ತು ಮರಳಿ ಸಿಗಲೆಂದು. ನಮ್ಮನ್ನು ಕಸ್ಟಡಿಯಲ್ಲಿಟ್ಟು ಯಾವಾಗಲು ವಿಚಾರಣೆ ಮಾಡುತ್ತಿದ್ದರು. ನಾವಿಬ್ಬರು ನಡೆದ ಘಟನೆಯ ಬಗ್ಗೆ ಒಂದೇ ಉತ್ತರ ಕೊಡುತ್ತಿದ್ದೆವು. 10ದಿವಸ ಕಳೆದ 11ನೇ ದಿವಸವಾಗಿತ್ತು. ಅಲ್ಲಿದ್ದ ಮೇಲ್ವಿಚಾರಕರು ಭೂಪ್‌ಸಿಂಗ್‌ನನ್ನು ಅಲ್ಲಿಂದ ಕರೆತರಲಿಕ್ಕೆ ನಾಲ್ಕು ಮಂದಿಯನ್ನು ಕಳುಹಿಸಿದ್ದರು. ಮಾರನೇ ದಿವಸ ಎಲ್ಲರ ಮುಂದೆ ಮೆರವಣಿಗೆ ಮಾಡಿ ಕೋರ್ಡ್ ಮಾರ್ಷಲ್ ಪೆರೇಡ್ ಮಾಡಿ ಜೈಲ್‌ಗೆ ಕಳುಹಿಸುವುದಾಗಿತ್ತು. ನಾವಿಬ್ಬರು ಒಂಬತ್ತು ಘಂಟೆಗೆ ಹತ್ತಿರವಿದ್ದ ದೇವಸ್ಥಾನಕ್ಕೆ ಹೋಗಿದ್ದೆವು. ಆದಿತ್ಯವಾರ ಆದ್ದರಿಂದ ಭಜನೆ ಕಾರ್ಯಕ್ರಮಗಳಿದ್ದವು. ಹತ್ತುವರೆ ಘಂಟೆಗೆ ದೇವಸ್ಥಾನದಿಂದ ಮರಳಿ ವಾಸಸ್ಥಳಕ್ಕೆ ಬರುತ್ತಿರುವಾಗ ಒಬ್ಬಾತ ವೇಗದಿಂದ ನಮ್ಮತ್ತ ಓಡಿ ಬರುತ್ತಿದ್ದ. ಮುಬಾರಕ್‌ಹೋ ನೀವು ಎಲ್ಲರಿಗೂ ಸಿಹಿ ತಿಂಡಿ ಹಂಚಿ ನಿಮ್ಮ ಕಳೆದು ಹೋದ ವಸ್ತುಗಳೆಲ್ಲಾ ಸಿಕ್ಕಿದೆಯೆಂದು ಪಿಪೇರಿಯಾದಿಂದ ಟೆಲಿಗ್ರಾಂ ಬಂದಿದೆಯೆಂದು. ಇದನ್ನು ಕೇಳಿ ನಮಗೆ ಕನಸ್ಸು ಕಾಣುತ್ತಿರುವ ಹಾಗೆ ಅನ್ನಿಸಿತು ಹಾಗೂ ಸಂತೋಷದ ಕಣ್ಣೀರು ಬಂತು. ಆದರೆ ತಾನೊಂದು ಬಗೆದರೆ ದೈವವೊಂದು ಬಗೆದಿತ್ತು. ಈ ವಿಷಯವನ್ನು ಪೇಪರ್‌ನಲ್ಲಿ ಸಹ ಹಾಕಿದ್ದರು. ಇದೆಲ್ಲಾ ದೊರಕಬೇಕಾದರೆ ಕಾರಣ ಹಾಗೂ ಪೋಲಿಸರಿಗೆ ಮಾಹಿತಿ ಕೊಟ್ಟಂತಹ ವ್ಯಕ್ತಿ ಕಳ್ಳನ ಚಡ್ಡಿದೋಸ್ತ್ ಆಗಿದ್ದನು. ದೇವರು ಆತನ ಮನಸ್ಸನ್ನು ಸೆಕೆಂಡಿನಲ್ಲಿ ಬದಲಾಯಿಸಿದ್ದನು. ಅದು ನಡೆದ ಘಟನೆ ಹೀಗಿದೆ.

ಕಳ್ಳ ಸುಟ್‌ಕೇಸನ್ನು ಅಪಹರಿಸಿ ರಾತ್ರೋರಾತ್ರಿ ಕಾಲ್ನಡಿಗೆಯಲ್ಲಿ ಅವನ ಮನೆಗೆ ತಲುಪಿ ಸೂಟುಕೇಸ್ ಲಾಕನ್ನು ಒಡೆದು ಗನ್‌ನನ್ನು ನೋಡಿ ಸ್ವಲ್ಪ ಗಾಬರಿ ಪಟ್ಟನಂತೆ. ಈ ವಸ್ತು ಇರಬಹುದೆಂದು ಆತನಿಗೆ ಗೊತ್ತಿರಲಿಲ್ಲ. ಕೇವಲ ಹಣ ಇನ್ನಿತರ ವಸ್ತುಗಳಿಗಾಗಿ ಆತ ಅದನ್ನು ಅಪಹರಿಸಿದ್ದನು. ನಂತರ ಈ ವಿಷಯವನ್ನು ತನ್ನ ಸೋದರ ಅಣ್ಣನಿಗೆ ತಿಳಿಸಿ ಗನ್‌ನನ್ನು ತೋರಿಸಿದನು. ಅದನ್ನು ನೋಡಿ ಆತನು ತುಂಬಾ ಖುಷಿಪಟ್ಟನು. ಇದನ್ನು ಮಾರೋಣವೆಂದು ತೀರ್ಮಾನಕೆ ಬಂದರು. ಆ ಪ್ರದೇಶದ ಡಾಕು ಜಬ್ಬರ್‌ಸಿಂಗ್ ಎಂಬಾತನಿಗೆ ಅವನ ಅಣ್ಣನು ಸಹ ದರೋಡೆಕೋರರ ಗ್ಯಾಂಗ್‌ನಲ್ಲಿದ್ದನು ಹಾಗೂ ಜಬ್ಬರ್‌ಸಿಂಗ್‌ನ ಚೇಲಾ ಆಗಿದ್ದನು. ಅವನೊಂದಿಗೆ ವ್ಯವಹರಿಸಿ ಕೇವಲ ಒಂಬತ್ತು ಸಾವಿರ ರೂ.ಗಳಿಗೆ ಮಾರುವ ವ್ಯವಸ್ಥೆ ಮಾಡಿದ್ದನು. ಕತ್ತಲಾದೊಡನೆಯೇ ಜಬ್ಬರ್‌ಸಿಂಗ್ ಹಣಕೊಟ್ಟು ಮಾಲನ್ನು ತೆಗೆದುಕೊಂಡು ಹೋಗುವ ಹಾಗೆ ಇತ್ತು. ಕಳ್ಳನ ಮನೆಯಲ್ಲಿ ಸಂಜೆಯಾದೊಡನೆ ಹಣಕೊಟ್ಟು ಪ್ರತಿದಿನ ಜೂಜ್ಜ ಆಡುತ್ತಿದ್ದರು. ಆಟಕ್ಕೆ ಕುಳಿತ ನಂತರ ಕಳ್ಳನು ಕೋಣೆಯೊಳಗಡೆ ಇರಿಸಿದಂತ ಸೂಟುಕೇಸ್‌ನಿಂದ ಹಣ ತೆಗೆಯುತ್ತಿರುವಾಗ ಇವನ ಸ್ನೇಹಿತ ಸಹ ಎದ್ದು ಕೋಣೆಯೊಳಗೆ ಹೋಗಿ ಆತನ ಹಿಂಬದಿ ಯಿಂದ ಈ ದೃಶ್ಯವನ್ನು ನೋಡಿಬಿಟ್ಟನು. ಕಳ್ಳನಿಗೆ ಇವನು ನೋಡಿದ್ದಾನೆಂದು ಪರಿವೆಯಿರಲಿಲ್ಲ. ಕಳ್ಳನ ಸ್ನೇಹಿತನಿಗೆ ಆಟ ನಡೆಯುತ್ತಿರುವಾಗ ಇದರ ಬಗ್ಗೆ ಯೋಚಿಸುತ್ತಿದ್ದನಂತೆ. ಹನ್ನೊಂದು ದಿವಸಗಳ ಹಿಂದೆ ಇದಕ್ಕಾಗಿ 4-5 ದಿವಸ ಗಲ್ಲಿ ಗಲ್ಲಿ ಹುಡುಕುತ್ತಿದ್ದ ಈ ದೇಶ ಸೇವಕರಿಗೆ ಇವನು ಇಂತಹ ಅನ್ಯಾಯ ಮಾಡುತ್ತಿದ್ದಾನಲ್ಲಾ ಎಂದು ಆಲೋಚಿಸಿ ಬೀಡಿ ತರುವ ನೆಪದಲ್ಲಿ ಹತ್ತಿರವೇ ಇದ್ದ ಪೋಲಿಸ್ ಸ್ಟೇಷನ್‌ಗೆ ಮಾಹಿತಿ ಒದಗಿಸಿದನು. ಕಳುವಾಗಿರುವ ಸಮಯದಲ್ಲಿ ನಾನು ಅದೇ ಊರಿನಲ್ಲಿ ಎಲ್ಲರನ್ನೂ ವಿಚಾರಿಸಿ ಅಲೆದಾಡಿದ್ದೆ. ಅದರ ಬಗ್ಗೆ ಕಳ್ಳನ ಸ್ನೇಹಿತನಿಗೆ ಗೊತ್ತಿತ್ತು. ಡಾಕು ಜಬ್ಬರ್ ಸಿಂಗ್‌ನ ಜೀಪು ಹತ್ಯಾರ ತೆಗೆದು ಕೊಂಡು ಹೋಗಲು ಆತನ ಮನೆ ಮುಂದೆ ಬಂದು ಬ್ರೇಕ್ ಹೊಡೆಯುವ ಸಮಯವು ಹಾಗೂ ಪೋಲಿಸರ ಜೀಪು ಹಿಂದಿನಿಂದ ಬಂದು ಬ್ರೇಕ್ ಹೊಡೆಯುವ ಸಮಯವು ಒಂದಾಗಿತ್ತು. ತದನಂತರ ಮಾಲು ಸಮೇತ ಪೋಲಿಸರು ಎಲ್ಲರನ್ನು ಅವರ ವಶಕ್ಕೆ ತೆಗೆದುಕೊಂಡು ಜೈಲ್‌ಗೆ ಕಳುಹಿಸಿ ದರು. ನಂತರ ಸ್ಟೇನ್‌ಗನ್ 3ತಿಂಗಳು ಕಳೆದ ನಂತರ ನಮಗೆ ಕೋರ್ಟಿನ ಮುಖಾಂತರ ಸಿಕ್ಕಿತ್ತು. ಭೂಪ್‌ಸಿಂಗ್‌ನನ್ನು ಕರೆದು ಕೊಂಡು ಬಂದನಂತರ ನಮ್ಮನ್ನು ಕಳ್ಳರೆಂದು ಭಾವಿಸಿದ ನಮ್ಮ ಒಂದೇ ನೆಲದ ಸಹಪಾಠಿಗಳು ಕೈ ಕುಲುಕಿ ಕ್ಷಮೆ ಯಾಚಿಸಿದರು. ಹೀಗೆಯೆ ಅಲ್ಲಿಯೇ 3ತಿಂಗಳು ಕೋರ್ಟಿನ ವಿಚಾರಣೆ ಎದುರಿಸಿ ಹತ್ಯಾರ್ ನಮ್ಮ ವಶವಾದ ನಂತರ ಮರಳಿ ನಮ್ಮ ಯೂನಿಟ್‌ಗೆ ಬಂದೆವು. ಅಲ್ಲಿ ನಮ್ಮ ಮೇಲ್ವಿಚಾರಕರು ನಮಗೆ ಸುರುವಿನಲ್ಲಿ ಸ್ವಲ್ಪ ಬೈದರೂ ಕಡೆಗೆ ಶಬಾಷ್ ಹೇಳಿ ಎಲ್ಲರ ಮುಂದೆ ಪ್ರಶಂಸಿದರು. ಈ ತರಹ ಕಳ್ಳತನ ಹಲವು ನಡೆದಿದೆ. ಆದರೆ ಮರಳಿ ದೊರಕಿದ್ದು ಇದೆ ಮೊದಲ ಬಾರಿ ಎಂದು. ಆದರೆ ಭೂಪ್‌ಸಿಂಗ್ ನಿಗೆ ಸಣ್ಣದಾದ ಶಿಕ್ಷೆಕೊಡಲು ಅವರು ಮರೆತ್ತಿದ್ದಿಲ್ಲಾ. ಪುನಃ ನೀನು ಎಡವಿ ಬೀಳಬೇಡವೆಂದು ಹಾಗೂ ನಮ್ಮ ಮೇಲ್ವಿಚಾರಕರು ಪುನಃ ನಮಗೆ ಇಂತಹ ಘಟನೆಗಳ ಬಗ್ಗೆ ಕೆಟ್ಟ ಹೆಸರು ಬರಬಾರದೆಂದು ಇಂತಹ ಹತ್ಯಾರ್‌ಗಳನ್ನು ಕೊಂಡೊಯ್ಯುವಾಗ ಬೇರೆಡೆಗೆ ಸೂಕ್ತ ಕಾವಲು ಬಂದೋಬಸ್ತಿನಿಂದ ಕಳುಹಿಸಿಕೊಡು ತ್ತಿದ್ದರು. ಭೂಪ್‌ಸಿಂಗ್ ಮಾತ್ರ ರಜೆ ಅಥವಾ ಬೇರೆಡೆ ಕೆಲಸದ ನಿಮಿತ್ತ ರೈಲಿನಲ್ಲಿ ಪ್ರಯಾಣಿಸಬೇಕಾದರೆ ಅತೀ ಕಟ್ಟೆಚ್ಚರದಿಂದ 2-3ದಿವಸ ಹಗಲು ರಾತ್ರಿ ನಿದ್ದೆ ಸಹ ಮಾಡದೆ ಪ್ರಯಾಣಿಸು ತ್ತಿದ್ದನು. ಆಗುವಂತಹ ಪ್ರಸಂಗಗಳು ನಡೆಯ ಬೇಕಾದರೆ ಅದು ನಡೆದೆ ತೀರುತ್ತದೆ ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲಾ ಆ ದೇವರಿಂದ ಮಾತ್ರ ಸಾಧ್ಯ. ನಂತರ ನಾವು ಜಾಗ್ರತೆ ವಹಿಸುತ್ತೇವೆ.

ಬರೆದವರು : ತೆಕ್ಕಡೆ ಬಿ. ರಘುನಾಥ, ಮುತ್ತಾರ್‌ಮುಡಿ

**ಮಾತು ಸಕ್ಕರೆಯ ಹಾಗೆ, ಕೆಲಸ ಕತ್ತೆಯ ಹಾಗೆ.**

# ಮನಸ್ಸು

✍ ಚೇಂದ್ರಿಮಾಡ ಮುತ್ತಪ್ಪ, ಕುಶಾಲನಗರ.

ಬೇರುಗಳು ಯಾರಿಗೂ ಕಾಣಿಸುವುದಿಲ್ಲ. ಆದರೆ ಅವು ಇದೆ ಮಣ್ಣಿನೊಳಗೆ, ಯಾರ ಕಣ್ಣಿಗೂ ಬೀಳದು. ಮರಗಳಿಗೆ ಬೇರುಗಳಲ್ಲಿ ಕೆಳಗಿನಿಂದ ಪೋಷಣೆ ಒದಗಿಸಿ ನೆಟ್ಟಗೆ ನಿಲ್ಲಿಸುವಂಥಾದೇನು ಇಲ್ಲ ಎಂದು ಹೇಳಲಾಗದು. ಹಾಗೆಯೇ ದೇವರು ಇದ್ದಾನೆ. ದೃಷ್ಟಿಗೆ ಗೋಚರವಾಗದ ರೀತಿಯಲ್ಲಿ ಅವನು ಪೋಷಿಸುತ್ತಾನೆ. ನೆಲೆ ನಿಲ್ಲಿಸುತ್ತಾನೆ. ಇದು ಮಹಾತ್ಮರ ನುಡಿ ವಿಜ್ಞಾನ ಕಲಿತ ಕೆಲವು ಅಜ್ಞಾನಿಗಳು ಕಣ್ಣಿಗೆ ಕಾಣದ್ದು ಇಲ್ಲವೆನ್ನುತ್ತಾರೆ. ಗಾಳಿಕಣ್ಣಿಗೆ ಕಾಣಿಸುವುದಿಲ್ಲ. ಆದರೂ ವಿಜ್ಞಾನಿಗಳು ಅದನ್ನು ನಂಬುತ್ತಾರೆ. ನಮಗೆ ಅಧ್ಯಾತ್ಮಿಕವೂ ಬೇಕು, ಅಷ್ಟೇ ಪ್ರಾಮುಖ್ಯತೆ ವಿಜ್ಞಾನಕ್ಕೂ ಬೇಕು. ಅಧ್ಯಾತ್ಮಿಕ, ವಿಜ್ಞಾನಗಳೆರಡು ಸತ್ಯ ಶೋದನೆಗಾಗಿ. ಆದರೆ ವಿಜ್ಞಾನಕ್ಕೆ ಒಂದು ಮಿತಿ ಇದೆ. ಜ್ಞಾನಕ್ಕೆ ಮಿತಿ ಇಲ್ಲ. ಜ್ಞಾನಕ್ಕೆ ಬುದ್ಧಿ, ಮನಸ್ಸು, ನಿರ್ಧಾರ, ಆತ್ಮತತ್ವಬೇಕು ವಿಜ್ಞಾನಕ್ಕೆ ಸಂಶೋಧನೆಯ ಉಪಕರಣಗಳು ಬೇಕು.

ಮಾನವನು ಹುಟ್ಟುವಾಗ ವಿಜ್ಞಾನಿಯಾಗಿಯಾಗಲೀ, ಅಧ್ಯಾತ್ಮಿಕನಾಗಿಯಾಗಲೀ ಹುಟ್ಟುವುದಿಲ್ಲ. ಆ ಜ್ಞಾನವನ್ನು ಮಾನವನು ತನ್ನ ಸ್ವಪ್ರಯತ್ನದಿಂದ, ಸಾಧನೆಯಿಂದಗಳಿಸಬೇಕು. ಅಧ್ಯಾತ್ಮಿಕತೆಯನ್ನು, ವಿಜ್ಞಾನವನ್ನು ತಿಳಿಧು ಕೊಳ್ಳುವ ಜ್ಞಾನವನ್ನು ನಾವು ಮನಸ್ಸುಮಾಡಿ ಪ್ರಯತ್ನಿಸಿ ಗಳಿಸಬೇಕು. ಎಂಬುದಾಗಿ ಸರ್ ಆರ್ತರ್ ಎಡಿಂಗ್‌ಟನ್ ಹೇಳಿದ್ದಾರೆ. ವಿಜ್ಞಾನವು ಯಾವುದನ್ನೇ ಆಗಲಿ ಪರೀಕ್ಷಿಸಿ ಸ್ವೀಕರಿಸುವುದು ಪರೀಕ್ಷೆ ಎಂಬ ಅಗ್ನಿಯಲ್ಲಿ ಹಾದು ಬಂದುದು ಮಾತ್ರವೇ ಸತ್ಯವನ್ನುವುದು ಅದರ ಅಂಬೋಣ. ಆದರೆ ವಿಜ್ಞಾನವು ಒಂದು ಹಂತದವರೆಗೆ ಮಾತ್ರ ಸೃಷ್ಟಿಯ ರಹಸ್ಯವನ್ನು ವಿವರಿಸಬಲ್ಲುದು. ಅದಕ್ಕಿಂತ ಮುಂದೆ ಸಾಗುವ ಬಲ ಅದಕ್ಕಿಲ್ಲ. ಅಧ್ಯಾತ್ಮವನ್ನು ವಿವರಿಸುವಷ್ಟು ಶಕ್ತಿ ಸಂಪನ್ನವಾಗಿ ವಿಜ್ಞಾನವು ಇನ್ನೂ ಬೆಳೆದು ಬಂದಿಲ್ಲ. ಅಧ್ಯಾತ್ಮದ ವಿವರಣೆ ಅಧ್ಯಾತ್ಮಿಕವಾದಿಗೇ ಹೊರತು ಮಿಕ್ಕವರಿಗೆ ಸಾಧ್ಯವಾಗುವುದಿಲ್ಲ.

ಅಧ್ಯಾತ್ಮಿಕವಾಗಲೀ, ವಿಜ್ಞಾನವಾಗಲೀ ಮುನ್ನಡೆಗೆ ನಮ್ಮ ಮನಸ್ಸೇ ಕಾರಣ ಆ ಪವಿತ್ರವಾದ ಮನಸ್ಸು ನಮ್ಮೊಳಗೆ ಇದೆ. ಯಾವದಾದರೊಂದು ತತ್ವಕ್ಕೆ (ದೇವರಲ್ಲಿ ನಂಬಿಕೆ) ಗಟ್ಟಿಯಾಗಿ ಅಂಟಿರಬೇಕು. ನಮ್ಮ ತತ್ವವನ್ನು, ಮನಸ್ಸನ್ನು ದಿನನಿತ್ಯ ಬದಲಿಸಬಾರದು. ಮನಸ್ಸಿನ ನಂಬಿಕೆಯ ಆಧಾರದ ಮೇಲೆ ಧೃಡವಾದ ನಂಬಿಕೆಯಿಂದ ಏಕ ದೇವನ ಭಜಿಸುವುದು ಒಳಿತು. ದೇವನೊಬ್ಬ, ನಾಮ ಹಲವು ಒಂದು ದೇವರನ್ನು ಒಬ್ಬನು ಒಂದು ಹೆಸರಿನಿಂದಲೇ ಭಕ್ತಿಯನ್ನು ಧೃಢವಾಗಿ ಇರಿಸಿಕೊಳ್ಳುವುದು ಉತ್ತಮ. ನಾವು ಸದಾ ಮಾನಸಿಕವಾಗಿ ಎಚ್ಚರಿಕೆಯಿಂದಿರುವುದು ಒಳಿತು. ದೇಹವೆಂಬ ಭವನಕ್ಕೆ ಮನಸ್ಸೇ ಬುನಾದಿ. ಮಹಾತ್ಮರು ಅನಾದಿ ಕಾಲದಿಂದಲೂ ಜನರಿಗೆ ತ್ಯಾಗ, ಯೋಗವನ್ನು ಭೋದಿಸಿ, ಮಾನವನು ಸುಖ ಶಾಂತಿ ಪಡೆಯಬೇಕೆಂದು ಭೋದಿಸಿದರು.

ಅನಾದಿಕಾಲದಿಂದಲೂ ಭೋದಿಸುತ್ತ ಬಂದಿದ್ದ ಪಾಠಗಳು ಇಂದೇನಾಗಿದೆ?

ಇಂದು ಅನ್ಯಾಯ, ಅಕ್ರಮ, ಅಪನಂಬಿಕೆ, ಭಯ, ಅನಾಚಾರಗಳು ತಾಂಡವವಾಡುತ್ತಿವೆ. ಕಾರಣ ನಾವು ನಮ್ಮ ದೇಹಕ್ಕೆ ಕೊಡುವ ಮಹತ್ವ. ಈ ದೇಹವು ಒಂದಿಲ್ಲೊಂದು ದಿನ ನಾಶವಾಗುತ್ತದೆ. ನಾಶವಾಗಲೇ ಬೇಕು. ಆತ್ಮವು ಶಾಶ್ವತವಾಗದು. ಆತ್ಮತತ್ವವೆಂದರೆ ನಮ್ಮನ್ನು ನಾವು ತಿಳಿದು ಕೊಳ್ಳುವುದು. ಇದು ಮಹಾತ್ಮರ ವಾಣಿ ಅರ್ಧಂಬರ್ಧ ಕಲಿತ ಕೆಲವು ವಿವೇಕ ಅವಿವೇಕಿಗಳು ನೀನು ಮಹಾತ್ಮನಾದರೆ ಸಮುದ್ರವನ್ನು ಎಣ್ಣೆಯಾಗಿ ಮಾಡು, ನದಿಯನ್ನು ಆಲ್ಕೋಹಾಲ್‌ಮಾಡು ಎನ್ನುವರು ಒಂದು ವೇಳೆ ಹಾಗೆ ಮಾಡಿದರೆ ಒಬ್ಬ ಅವಿವೇಕಿ ಬೆಂಕಿಕಡ್ಡಿ ಗೀರಿ ಎಸೆದರೆ ಎಣ್ಣೆ ಏನಾಗಬೇಕು? ನದಿನೀರನ್ನು ಆಲ್ಕೋಹಾಲ್ ಮಾಡಿದರೆ ಅದನ್ನು ಕುಡಿದವರ ಪಾಡೇನು ? ಸಮುದ್ರ ನೀರು ಮಳೆಗಾಗಿ, ಹೊಳೆಯ ನೀರು ವ್ಯವಸಾಯಕ್ಕೆ ಸಮುದ್ರ ಎಣ್ಣೆಸಲ್ಲದು. ಹೊಳೆಗೆ ಆಲ್ಕೋಹಾಲ್ ಸಲ್ಲದು. ಶಕ್ತಿ ಇದೆ ಎಂದು ಶಕ್ತಿ ಪ್ರದರ್ಶನ ಸಲ್ಲದು. ಶಕ್ತಿಯಿಂದ ಮುಕ್ತಿ ಪಡೆಯಬೇಕು. ಜನನ, ಮರಣ ಇಲ್ಲದಿದ್ದರೆ ದೇವರಿಗೆ ಏನು ಕೆಲಸ? ದೇವರೇಕೆ ಬೇಕು? ಇದನ್ನು ನಾವು ಮನಸ್ಸಿಟ್ಟು ವಿಮರ್ಶೆಮಾಡಬೇಕು ತುಂಬಿದ ಕೊಡ ತುಳುಕದು ಹಾಗೆಯೇ ಅರ್ಧ ಜ್ಞಾನ ಅಧಃ ಪತನ.

ಕಣ್ಣಿಗೆ ಕಾಣಿಸುವುದು, ಕಿವಿಗೆ ಕೇಳಿಸುವುದು, ಮನಸ್ಸಿಗೆ ಅನಿಸುವುದು ಎಲ್ಲವೂ ಪ್ರಕೃತಿಗೆ ಸಂಬಂಧಿಸಿದವು. ಕಾಣಿಸುವ ಈ ಪ್ರಕೃತಿಗೆ ಕಾಣಿಸದ ಆತ್ಮವು ಆಧಾರ, ಭವನದ ಭಧ್ರತೆ ಬುನಾದಿಯ ಮೇಲೆ, ದೇಹವೆಂಬ ಭವನಕ್ಕೆ ಮನಸ್ಸೇ ಬುನಾದಿ ಮನಸ್ಸು ಸ್ಥಿರವಾಗಿದ್ದರೆ ದೇಹವು ಸ್ಥಿರವಾಗಿರುತ್ತದೆ. ದೇಹ, ಮನಸ್ಸು, ಬುದ್ಧಿಗಳ ತಾರತಮ್ಯಗಳನ್ನರಿತಾಗ ಅವುಗಳನ್ನು ಸರಿಯಾಗಿ ಉಪಯೋಗಿಸುವುದು ಸಾಧ್ಯವಾಗುತ್ತದೆ. ಮನಸ್ಸಿನಂತೆ ಮನುಷ್ಯ. ಮನುಷ್ಯನಿಗೆ ಮರಣವಿದೆ ಮನಸ್ಸಿಗೆ ಮರಣವಿಲ್ಲ. ಆದ್ದರಿಂದ ಮನಸ್ಸಿನ ಭಾವನೆಗಳನ್ನು ಶುಚಿಯಾಗಿಟ್ಟುಕೊಳ್ಳಬೇಕು. ನಿತ್ಯ ಸತ್ಯವಾದ ಸುಖಶಾಂತಿಗಳು ಜಗತ್ತಿನಲ್ಲಿಲ್ಲ. ಅವು ಮಾನವನಲ್ಲಿದೆ. ಒಳ್ಳೇದು ಕೆಟ್ಟದ್ದು, ಸುಖ ದುಃಖ ಆಸೆ ಆಕಾಂಕ್ಷೆ, ಪ್ರೀತಿ ಪ್ರೇಮ, ದ್ವೇಶ ಅನುರಾಗ, ಬಂಧನ ಮೋಕ್ಷಕ್ಕೆ ಮನಸ್ಸೇ ಕಾರಣ. ಆದ್ದರಿಂದ ಮನಸ್ಸನ್ನು ನಾವು ಪೂರ್ತಿಯಾಗಿ ಹತೋಟಿ ಯಲ್ಲಿ ಇಟ್ಟುಕೊಳ್ಳಬೇಕು. ಪ್ರತೀ ಹಂತದಲ್ಲಿ ಮನಸ್ಸನ್ನು ಮನಸ್ಸಿನಿಂದ ವಿಮರ್ಶಿಸಬೇಕು. ವಿಮರ್ಶಿಸಿ ಸರಿದಾರಿಯನ್ನು ನಾವು ಕಂಡುಕೊಳ್ಳಬೇಕು. ಎಷ್ಟು ದೈಹಿಕ ಬಲವಿದ್ದರೂ ಮನೋ ಬಲವಿಲ್ಲದಿದ್ದರೆ ಅವನು ಮನುಷ್ಯನೇ ಅಲ್ಲ. ಸ್ವಾರ್ಥರಹಿತ ಪ್ರೇಮವೇ ನಮ್ಮ ಪ್ರಾಣವಾಗಬೇಕು. ಮನಸ್ಸಿದ್ದಲ್ಲಿ ಪ್ರೇಮವಿದೆ. ಪ್ರೇಮವಿದ್ದಲ್ಲಿ ಶಾಂತಿ ಇದೆ. ಶಾಂತಿ ಇದ್ದಲ್ಲಿ ಪರಮಾನಂದವಿದೆ. ಪ್ರೇಮವೇ ಎಲ್ಲಕ್ಕಿಂತ ಮಿಗಿಲಾದದ್ದು. ಪ್ರೇಮ ಕೊಡುತ್ತದೆ, ಕೇಳುವುದಿಲ್ಲ. ಸ್ವಾರ್ಥಕೇಳುತ್ತದೆ. ಮರೆ ಯುತ್ತದೆ ನಾವು ದೇಹ ಭ್ರಾಂತಿಯನ್ನು ಬಿಟ್ಟು ನಮ್ಮ ಕರ್ತವ್ಯ ಗಳನ್ನು ಮಾಡಬೇಕು. ಅಹಂಕಾರವೇ ದ್ವೇಷಕ್ಕೆ ಕಾರಣ. ಅಹಂಕಾರ ತೊರೆದರೆ ಅಲಂಕಾರ ವರ್ಧಿಸುತ್ತದೆ ಇವೆಲ್ಲಕ್ಕೂ ಮನಸ್ಸೇ ಕಾರಣ ಭಗವಂತನ ಶಾಶ್ವತ ವಿಳಾಸವೇ ನಮ್ಮ ಶುಭ್ರ ಹೃದಯ ಅದಕ್ಕೆ ಮನಸ್ಸನ್ನು ಕೇಂದ್ರೀಕರಿಸಬೇಕು. ಮನಸ್ಸೇ ಬಂಧನ ಮನಸ್ಸೇ ಮೋಕ್ಷ.

---

**ಬಲ ಕೈಯಲ್ಲಿ ಎಣ್ಣೆ, ಎಡ ಕೈಯಲ್ಲಿ ದೊಣ್ಣೆ.**

# ನಾಯಿ – ಮನುಷ್ಯರ ನಡುವೆ ...

— ಬಿ. ಆರ್. ಜೋಯಪ್ಪ

ಆನೆ ಚೌಕೂರಿನ ಕಾಡು. ಜಿಂಕೆಗಳು ನಕ್ಕುನಲಿವ ತಾಣ. ಆ ಹಿಂಡಿನಲ್ಲೊಂದು ತುಂಟ ಜಿಂಕೆ. ಅದಕ್ಕೆ ಎಳೆ ಬಿಸಿಲಲ್ಲಿ ಮಿಂದು ಕುಣಿವಾಸೆ. ಹಿಂಡಿನಿಂದ ಬೇರಾಗಿ ಬಹು ದೂರ ಓಡುವ ತವಕ. ಒಂದೆರಡು ಬಾಯಿ ಗರಿಕೆಯನ್ನು ಮೇದು ಜಿಗಿದಾಡಿ ಗುಂಪು ಸೇರುವಾಟ. ಮತ್ತೆ ಓಡುವುದು. ದೂರ ನಿಂತು ಹಿಂತಿರುಗಿ ನೋಡಿ ಗುಂಪು ಸೇರಿ ಕಾಲ ಕಳೆಯುವುದೆಂದರೆ ಆ ಅರೆ ಬೆಳೆದ ಜಿಂಕೆಗೆ ಎಲ್ಲಿಲ್ಲದ ಹಿಗ್ಗು!

ಇನ್ನೂ ಕೋಡು ಮೂಡದ ಜಿಂಕೆ ನಿಂತಲ್ಲಿ ನಿಲ್ಲಲಾರದು. ಮಲಗಿದ್ದಲ್ಲಿ ಇರಲಾರದು. ತಾಯಿಗೆ ಸದಾ ಚಿಂತೆ, ಎಚ್ಚರಿಕೆಯ ಕಣ್ಗಾವಲು. ಓಡಾಡಿದ ಮರಿ ಜಿಂಕೆಯನ್ನು ಮೈದಡವಿ ಮುದ್ದಾಡುವ ಬಿಂಕ ನೋಡಲು ಚೆಂದ. ಮೈ ನೆಕ್ಕುತ್ತಿರುವಾಗಲೇ ತಪ್ಪಿಸಿ ಓಡುವ ಜಿಂಕೆ ಮರಿ ಹಿಂತಿರುಗಿ ತಾಯಿಯನ್ನು ಸೇರಿಕೊಂಡಾಗ ಮತ್ತೆ ಓಡದಿರಲಿ ಎಂದು ಮೈ ನೆಕ್ಕುವುದನ್ನು ಅತಿ ಮಾಡುತ್ತಾ ಮರಿಯ ಉಚ್ಚೆ ಬಳ್ಳಿಯನ್ನು ನೆಕ್ಕುತ್ತಾ ಅದನ್ನು ಮಲಗುವಂತೆ ಮಾಡುತ್ತಿತ್ತು. ಆದರೆ ಒಮ್ಮೆ ಜಿಂಕೆ ಮರಿಗೆ ಹುಮ್ಮಸ್ಸು ಹೆಚ್ಚಾಯಿತು. ದಡಕ್ಕನೆದ್ದು ಓಡಿತು. ಆ ಓಟ ಬಹು ದೂರ ಸಾಗಿತು.

" ಹಿಂತಿರುಗದೆ ಬಹು ಹೊತ್ತಾಯಿತು. ದಾರಿ ತಪ್ಪಿತೆ? ಸಾಧ್ಯವಿಲ್ಲ. ವಾಸನೆ ಹಿಡಿದು ಬರಬಹುದಲ್ಲ? ಛೆ! ಬಿಡಬಾರದಿತ್ತು. ಅಥವಾ ನಾನೇ ಜೊತೆಗೆ ಹೋಗಬೇಕಿತ್ತು" ಎನ್ನುತ್ತ ತಾಯಿ ಕಳವಳಗೊಂಡಳು. "ಕೂ...ಕೂ..." ಎಂದು ಕೂಗು ಹಾಕಿದಳು. ಕೂಗಿಗೆ ಪ್ರತ್ಯುತ್ತರವಿಲ್ಲ! ಈಗ ಅಥವಾ ಇನ್ನು ಸ್ವಲ್ಪ ಹೊತ್ತಿಗೆ ಮಗು ಬರಬಹುದೆಂದು ತಾಯಿ ಕಾತರದಿಂದ ಕಾದಳು. ಕಣ್ಣ ಮುಂದೆ ಬಿದ್ದಿರುವ ಅಂಬಟೆ ಹಣ್ಣಾಗಲಿ, ಗರಿಕೆಯಾಗಲಿ ಬೇಡವಾಯಿತು. ತಾಯಿಯ ಹಸಿವು ದೂರವಾಯಿತು. ಮಗು ಬಹುದೂರ ಉಳಿಯಿತು...!

ತೇಗದ ತೋಪು. ಜಿಗ್ಗು ಕಾಡಿಲ್ಲ. ಬಹು ದೂರದವರೆಗೆ ಕಾಣುತ್ತದೆ. ತುಂಟ ಮರಿ ಹುಮ್ಮಸ್ಸಿನಿಂದ ಓಡಿ ಓಡಿ ಬಹು ದೂರ ಸಾಗಿತು. ಓಡಿ ಒಂದೆಡೆ 'ಗಕ್ಕನೆ' ನಿಂತಿತು. " ಅಯ್ಯೋ ನಾನೇಕೆ ಇಷ್ಟುದೂರ ಬಂದೆ? ಅಮ್ಮ ಬಯ್ದಾಳು, ನೊಂದಾಳು ಕೂಡಲೇ ಹಿಂತಿರುಗಬೇಕು" ಎಂದು ತಿರುಗಿದ ಜಿಂಕೆಗೆ ಕಂಡದ್ದು ಕೆನ್ನಾಯಿಗಳನ್ನು!

ಕೆನ್ನಾಯಿಗಳು ಒಂಟಿ ಜಿಂಕೆಯನ್ನೇ ಆಯ್ದುಕೊಂಡಿದ್ದವು. ಕೆನ್ನಾಲಿಗೆಯನ್ನು ಹೊರ ಚಾಚಿ ಅಬ್ಬರಿಸಿ ಮರಿಯ ಮೇಲೆರಗಲು ಅಣಿಯಾದವು. ಮರಿ ಅಮ್ಮನನ್ನು ನಾಕಾರು ಬಾರಿ ನೆನೆಯಿತು. ಅಮ್ಮನ ವಾಸನೆಯಿಲ್ಲ. ಕೆನ್ನಾಯಿಗಳ ವಾಸನೆಯೆ ಎತ್ತೆತ್ತಲೂ, ಆದದ್ದಾಗಲಿ ಎಂದು ಗಟ್ಟಿ ಮನಸ್ಸು ಮಾಡಿ ಜಿಗಿಯಿತು. ಓಡಿತು, "ಅಮ್ಮಾ. ಅಮ್ಮಾ" ಕಾಡಿನಲ್ಲಿ ಆರ್ತನಾದ! ಓಡುತ್ತಿರುವ ಜಿಂಕೆಯ ಹಿಂದೆ ಕೆನ್ನಾಯಿಗಳು. ತುಂಟ ಮಾರಿ ಓಡಿ ಓಡಿ ದಿಕ್ಕು ತಪ್ಪಿತು, ಓಟವೇ ಗುರಿಯಾಯ್ತು. ಜಿಂಕೆಗಳ ಗುಂಪು ಎತ್ತಲೋ! ಮರಿ ಮತ್ತೆಲ್ಲೋ.

ಓಡಿತು ಓಡಿತು.. ಓಡುತ್ತಲೇ ಇತ್ತು..

ಇಷ್ಟು ದಿನ ಓಡುತ್ತಿದ್ದರೆ ಸಂತೋಷವಾಗುತ್ತಿತ್ತು. ಸಂಭ್ರಮವಾಗುತ್ತಿತ್ತು. ಆದರೆ ಇಂದು? ಬದುಕುವಾಸೆಗಾಗಿ, ಹಿಂಡನ್ನು ಸೇರುವ ಬಯಕೆಗಾಗಿ, ಅಮ್ಮನ ಬಿಸಿಯಪ್ಪುಗೆಯನ್ನು ಪಡೆಯಲಿಕ್ಕಾಗಿ ಅದು ತವಕಿಸಿತು.

ಜಿಂಕೆಯ ವೇಗ ಹೆಚ್ಚಿದಂತೆ ಕೆನ್ನಾಯಿಗಳ ವೇಗವೂ ಹೆಚ್ಚಾಯಿತು. ಜಿಂಕೆ ಸಿಕ್ಕಿತು, ಸಿಕ್ಕಿತು ಇನ್ನೇನು ಸಿಕ್ಕೇ ಸಿಕ್ಕಿತು. ಹಸಿ ಮಾಂಸ ಸಿಗಿದು ಬಿಸಿ ನೆತ್ತರನ್ನು ಹೀರುವ ತವಕ ಕೆನ್ನಾಯಿಗಳದು. ಸಿಗಲಾರೆ, ಓಡುತ್ತೆನೆ, ಸಾಧ್ಯವಾದಷ್ಟೂ ವೇಗವಾಗಿ ಓಡುತ್ತೇನೆ, ಎನ್ನುತ್ತಾ ಓಡುತ್ತಿದೆ ಜಿಂಕೆ. ಎಂದೆಂದೂ ಕಂಡರಿಯ ಹೊಸ ತಾಣ. ಅತ್ತ ಹುಲಿ ಇದ್ದಿತೆ? ಏನು ಮಾಡಲಿ? ಓ ನನ್ನ ಮೂರ್ಖತನವೇ ಎನ್ನುತ್ತಾ ಬುಸ ಬುಸ ಗುಡುತ್ತಾ ಮುನ್ನುಗ್ಗುತ್ತಿದ್ದಂತೆ ಕಾಡು ಕೊನೆಯಾಯಿತು. ಮುಂದೆ ಬಯಲು. ವಿಶಾಲ ಬಯಲು.

ಬಯಲು ಕಂಡಾಕ್ಷಣ ಕೆನ್ನಾಯಿಗಳು ನಿಂತು ಬಿಟ್ಟವು. ಜಿಂಕೆ ಮಾತ್ರ ಬಯಲಲ್ಲಿ ಓಡುತ್ತಲೇ ಇತ್ತು.

ಕಾಡಿನಂಚಿನ ಬಯಲು. ಅದೊಂದು ಹೊಲ. ಜೋಳದ ಬಿತ್ತನೆಗಾಗಿ ಹೊಲದಲ್ಲಿ ಕೆಲಸ ಸಾಗುತ್ತಿತ್ತು. ಜನರ ಗುಂಪನ್ನು ಕಂಡ ಜಿಂಕೆಗೆ ಜೀವ ಬಂತು. 'ಬದುಕಿದರೆ ಬೇಡಿಯಾದರೂ ತಿಂದೇನು' ಎನ್ನುವಂತೆ ಜಿಂಕೆ ಜಿಗಿದು ಜಿಗಿದು ಜನರ ಸಮೀಪ ಬಂದಿತು. ತಿರುಗಿ ಕೆನ್ನಾಯಿಗಳನ್ನು ನೋಡಿತು. "ನಿಮಗೇನು ಸಿಕ್ಕಿಲ್ಲವಲ್ಲ" ಎನ್ನುವ ತುಂಟ ನಗುವನ್ನು ನಕ್ಕಂತೆ ಆ ನೋಟವಿತ್ತು.

ಕೆನ್ನಾಯಿಗಳು 'ಬಂದ ದಾರಿಗೆ ಸುಂಕವಿಲ್ಲ' ಎನ್ನುತ್ತಾ ಬಾಲ ಮುದುಡಿ ಕಾಡಿನಲ್ಲಿ ಕಣ್ಮರೆಯಾದವು.

ಜಿಂಕೆ ಗಾಬರಿಯಿಂದ ತಾವು ಬಂದ ದಾರಿಯತ್ತ ಮೂಗರಿಳಿಸಿ ಕಿವಿಗಳನ್ನು ನಿಮರಿ 'ತಟಪಟ' ಬಡಿದುಕೊಳ್ಳುತ್ತಾ ನೆಲವನ್ನು ಮೂಸಿತು. ತಲೆಯೆತ್ತಿ ನೋಡಿತು. ಆದರೆ ಕಾಡಿಗೆ ನುಗ್ಗುವ ಧೈರ್ಯ ಬರಲಿಲ್ಲ. ಈ ಜನರು ರಕ್ಷಿಸಿಯಾರು, ಅಮ್ಮನನ್ನು ತೋರಿಯಾರು ಎಂಬ ಕನಸನ್ನು ಕಾಣುತ್ತ ನಿಂತಿತ್ತು.

ಹೊಲದಲ್ಲಿದ್ದ ಜನ ಜಿಂಕೆಯುನ್ನು ನೋಡಿದರು. ತಂತಮ್ಮ ಕೆಲಸಗಳನ್ನು ತಮಗರಿಯದಂತೆ ನಿಲ್ಲಿಸಿದರು. ಉಳುತ್ತಿದ್ದವರ ನೇಗಿಲು ನೆಲ ಕಚ್ಚಿ ನಿಂತಿತು. ಜೋಳದ ಕಾಳು ತಿರುಗಿ ಬುಟ್ಟಿ ಸೇರಿತು. ಕತ್ತಿ, ಬಡಿಗೆ ಕೈಗೆ ಬಂದಿತು. ಬಸವಳಿದು ನಿಂತ ಜಿಂಕೆಯತ್ತ ಜನ ಓಡಿದರು.

"ಇವರು ನನ್ನವರು ಎಂಬ ನೋಟ ಜಿಂಕೆಯ ಕಣ್ಣಲ್ಲಿತ್ತು. ಜಿಂಕೆ ನಿಂತಲ್ಲಿಂದ ಹೆಜ್ಜೆ ಕೀಳಲಿಲ್ಲ. ಯತ್ನಿಸಿದರೂ ಕಾಲು

ದೊಡ್ಡವರ ಮಾತು ಒಳ್ಳೆಯದು, ಬಡವರ ಊಟ ಒಳ್ಳೆಯದು.

18 ನೇ ಪುಟಕ್ಕೆ

# ಸೈನುಸೈಟಿಸ್ (Sinusitis)

ಸೈನುಸೈಟಿಸ್ (Sinusitis) ಇದು ತಲೆನೋವಿಗೆ ಒಂದು ಅತ್ಯಂತ ಸಾಮಾನ್ಯ ಕಾರಣವಾಗಿದೆ. ಈ ರೋಗವಿರುವವರು "ನನ್ನ ತಲೆ ಸೀಳಿದಂತಾಗುತ್ತದೆ, ತಲೆ ಭಾರ ತಡೆಯಲಾರೆ. ಮಲಗಿದರೂ ಈ ನೋವು ಮಾಯವಾಗುತ್ತಿಲ್ಲ, ಹೇಗಾದರೂ ಮಾಡಿ ಈ ತಲೆನೋವನ್ನು ಹೋಗಲಾಡಿಸಿ ಡಾಕ್ಟರೇ" ಅಂತ ಬೊಬ್ಬಿಡುವದುಂಟು. ಸೈನುಸೈಟಿಸ್‌ನಿಂದಾಗಿ ತಲೆನೋವು ಬಹಳ ಕಾಲದವರೆಗೆ ಇರಬಹುದು. ಆಗಾಗ ಕಾಡಿಸಬಹುದು. ಇಷ್ಟೊಂದು ತೊಂದರೆ ಕೊಡುವ ಈ ಕಾಯಿಲೆ ಏನು? ಕಾರಣಗಳೇನು?

ಮೂಗಿನ ಸುತ್ತ ಇರುವ ಎಲುಬುಗೂಡುಗಳಲ್ಲಿರುವ ಗ್ರಂಥಿಗಳಿಂದ ಸ್ರವಿತವಾಗುವ ದ್ರವಾಂಶ ದ್ವಾರದ ಮೂಲಕ ಹರಿದು ಮೂಗಿನೊಳಗೆ ಬರುತ್ತದೆ. ಕೆಲವೊಮ್ಮೆ ವ್ಯಕ್ತಿಗೆ ಶೀತವಾದಲ್ಲಿ, ಮೂಗು ಕಟ್ಟಿಕೊಂಡಲ್ಲಿ, ಈ ದ್ವಾರ ಮುಚ್ಚಿಕೊಂಡು ದ್ರವಾಂಶ ಎಲುಬುಗೂಡುಗಳಲ್ಲಿಯೇ ಕಟ್ಟಿಕೊಂಡು ಸೋಂಕಾಗಬಹುದು. ಇದನ್ನು ಸೈನುಸೈಟಿಸ್ ಎನ್ನುತ್ತಾರೆ. ಆದ್ದರಿಂದ ಪದೇ ಪದೇ ಬರುವ ನೆಗಡಿ ಸೈನುಸೈಟಿಸ್‌ಗೆ ಪ್ರಮುಖ ಕಾರಣವಾಗಿದೆ.

ಸೈನುಸೈಟಿಸ್ ಇದ್ದಲ್ಲಿ ವ್ಯಕ್ತಿಗೆ ಮುಖದಲ್ಲಿ ಕಣ್ಣುಗಳ ಮೇಲಕ್ಕೂ, ಕೆಳಕ್ಕೂ ನೋವಿರುತ್ತದೆ. ನೋವು ಬೆಳಗಿನ ಜಾವ ಜಾಸ್ತಿಯಿದ್ದು ಸಂಜೆಯಾಧ ಹಾಗೆ ಕಡಿಮೆಯಾಗುತ್ತದೆ. ರೋಗಿ ವಿಪರೀತ ತಲೆಸಿಡಿತವನ್ನು ಅನುಭವಿಸುತ್ತಾನೆ. ಕೆಲವೊಮ್ಮೆ ತಲೆ ಭಾರವಾದ ಅನುಭವವಾಗಬಹುದು. ಹಣೆಯ ಎಲುಬಿನ ಭಾಗವನ್ನು ಅಮುಕಿದಾಗ ಜೋರಾಗಿ ನೋವಾಗಬಹುದು. ಮೂಗಿನಲ್ಲಿ ಗಟ್ಟಿಯಾದ ಸಿಂಬಳ, ಕೆಟ್ಟವಾಸನೆ ಇರುತ್ತದೆ. ಮೂಗು ಕಟ್ಟಿಕೊಂಡು ಕಣ್ಣಿನಿಂದ ನೀರು ಸಹ ಹರಿಯಬಹುದು. ಕೆಲವೊಮ್ಮೆ ಜ್ವರ ಸಹ ಇರುತ್ತದೆ.

**ಚಿಕಿತ್ಸೆ ಹಾಗೂ ತಡೆ :**

ಶೀತವಾದಾಗ ಮೂಗು ಕಟ್ಟಿಕೊಳ್ಳದಂತೆ ನೋಡಿಕೊಳ್ಳುವುದರಿಂದ ಸೈನುಸೈಟಿಸನ್ನು ತಡೆಯಬಹುದು. ಶೀತವಾದಾಗ ಬಿಸಿನೀರಿನ ಆವಿಯನ್ನು ಸೇವಿಸುವುದರಿಂದ ಮೂಗು ಸಡಿಲವಾಗುತ್ತದೆ. ಬಿಸಿನೀರಿಗೆ ಸ್ವಲ್ಪ ವಿಕ್ಸ್ ಹಾಕಿ ಆವಿಯನ್ನು ಸೇವಿಸಿಕೊಳ್ಳಬಹುದು. ಮೂಗು ಸಡಿಲಮಾಡಲು ಔಷಧ ಹನಿಯನ್ನು ಬಳಸಬಹುದು. ವೈದ್ಯರ ಸಲಹೆಯಂತೆ ಜೀವರೋಧಕ(Antibiotics) ಔಷಧಗಳನ್ನು ತಪ್ಪದೇ ಉಪಯೋಗಿಸಬೇಕು. ಕೆಲವೊಮ್ಮೆ ಈ ಸಮಸ್ಯೆ ಮತ್ತೆ ಮತ್ತೆ ಮರುಕಳಿಸಬಹುದು. ಈ ರೀತಿ ಆಗಾಗ ಬರುವ ಹಾಗೂ ಬಹಳ ಸಮಯದವರೆಗೆ ಇರುವ ತಲೆನೋವನ್ನು ಗುಣಪಡಿಸುವುದು ಒಂದು ದೊಡ್ಡ ಸಮಸ್ಯೆಯಾಗಬಹುದು. ಇಂತಹ ಸಂದರ್ಭಗಳಲ್ಲಿ ಮೂಗಿಗೆ ಸಂಬಂಧಿಸಿದ (ENT)ತಜ್ಞ ವೈದ್ಯರನ್ನು ಕಂಡು ಅವರ ಸಲಹೆಗನುಗುಣವಾಗಿ ತಪ್ಪದೇ ನಡೆಯಬೇಕು.

— **ಡಾ. ಪ್ರವೀಣ. ಯನ್. ಎಸ್,** (MD., DNB) ಕೇರಳ

---

# ಹಿತ್ತಲ ಮದ್ದು : ಗರಿಕೆ ಹುಲ್ಲು

ಇದು ಒಂದು ಸಿದ್ದೌಷಧಿ. ಮೂಗಿನಿಂದ ರಕ್ತಸ್ರಾವ ನಿಲ್ಲಿಸಲು ಇದರಿಂದ ಸಾಧ್ಯವಾಗುತ್ತದೆ. ಉರಿಮೂತ್ರ, ಪದೇ ಪದೇ ಮೂತ್ರ ಮಾಡುತ್ತಿದ್ದರೆ ಗರಿಕೆ ಉತ್ತಮ ಔಷಧಿ ಹಾಗೂ ಹೆಂಗಸರಿಗೆ ಅತಿಸ್ರಾವಕ್ಕೆ ಬಹಳ ಉತ್ತಮ ಔಷಧಿ ಗರಿಕೆ. ವಿಟಮಿನ್ 'ಬಿ' ಮತ್ತು 'ಸಿ' ಕ್ಯಾಲ್ಸಿಯಂ ಹಾಗೂ ಇತರೆ ಔಷಧೀಯ ಗುಣಗಳನ್ನು ಹೊಂದಿದೆ ಎಂದು ತಿಳಿದು ಬಂದಿದೆ.

**ಔಷಧವಾಗಿ ಈ ಕೆಳಗಿನ ರೋಗಗಳನ್ನು ಪರಿಣಾಮಕಾರಿಯಾಗಿ ನಿವಾರಿಸುತ್ತದೆ.**

೧. ಇದರ ರಸವು (ಗರಿಕೆಗೆ ನೀರು ಸೇರಿಸಿ ಚೆನ್ನಾಗಿ ಅರೆದು ಬಟ್ಟೆಯಲ್ಲಿ ಹಿಂಡಿದರೆ ರಸ ಬರುತ್ತದೆ). ದೇಹಕ್ಕೆ ತಂಪಾಗಿ ಬಾಯಾರಿಕೆಯುನ್ನು, ವಾಂತಿಯನ್ನು ನಿಲ್ಲಿಸುತ್ತದೆ.

೨. ಮೂಗಿನಲ್ಲಿ ರಕ್ತಸ್ರಾವ ಆಗುತ್ತಿದ್ದರೆ ಇದರ ರಸವನ್ನು ಸೋಸಿಮೂಗಿಗೆ 1-2 ಹನಿಯನ್ನು ಬಿಟ್ಟರೆ ರಕ್ತಸ್ರಾವ ತಕ್ಷಣ ನಿಲ್ಲುತ್ತದೆ. ಗಾಯವಾಗಿ ರಕ್ತಸೋರುತ್ತಿದ್ದರೆ ಎಲೆಗೆ ಸ್ವಲ್ಪ ಸುಣ್ಣ ಸೇರಿಸಿ ನುಣ್ಣಗೆ ಅರೆದು ಗಾಯದ ಮೇಲೆ ಇಟ್ಟು ಕಟ್ಟಿದಲ್ಲಿ ವಾಸಿಯಾಗುತ್ತದೆ.

೩. ತಲೆಗೆ ಪೆಟ್ಟು ಬಿದ್ದು ರಕ್ತಸ್ರಾವವಾಗಿ, ತಲೆ ತಿರುಗುವಿಕೆ, ಎಚ್ಚರ ತಪ್ಪುವುದು, ಆದರೆ ಇದರ ರಸ ಅರ್ಧ ಲೋಟ 1-2 ಚಮಚ ಜೇನು ತುಪ್ಪ ಅಥವಾ ಬೆಲ್ಲ ಸೇರಿಸಿ ಹೊಟ್ಟೆಗೆ ಕೊಟ್ಟರೆ ಕೂಡಲೇ ಕಡಿಮೆಯಾಗುತ್ತದೆ.

೪. ಅತಿಸಾರ ಮತ್ತು ರಕ್ತಭೇಧಿಗಳಲ್ಲಿ ಇದರ ರಸವನ್ನು ಗಂಟೆಗೊಮ್ಮೆ ಅರ್ಧ ಲೋಟದಷ್ಟು 4-6 ಸಲ ತೆಗೆದು ಕೊಂಡರೆ ಕೂಡಲೇ ನಿಲ್ಲುತ್ತದೆ.

೫. ಮೂತ್ರದ್ವಾರದಲ್ಲಿ ಉರಿ ಮೂತ್ರ, ಪದೇ ಪದೇ ಮೂತ್ರಕ್ಕೆ ಹೋಗುವುದು, ಮೂತ್ರದಲ್ಲಿ ರಕ್ತ ಹೋಗುವುದು ಮೂಲ ವ್ಯಾಧಿಯಲ್ಲಿ ರಕ್ತ ಸೋರುತ್ತಿದ್ದರೆ ಇದರ ರಸ ಅರ್ಧ ಲೋಟ ಆಕಳ ಹಾಲಿನೊಂದಿಗೆ ಕಲ್ಲುಸಕ್ಕರೆ ಸೇರಿಸಿ ದಿನಕ್ಕೆ 2-3 ಸಲ ತೆಗೆದುಕೊಂಡರೆ ಕಡಿಮೆಯಾಗುತ್ತದೆ.

ಸಂಗ್ರಹ : **ಹೊಸೂರು ತುಳಸಿಮಾಲ, ಚೇರಂಗಾಲ**

---

**ಯಾರ್‍ಯಾರ ಮಕ್ಕಳು ಸತ್ತರೆ ನೋಡುವುದಕ್ಕೆ ಚೆಂದ.**

# ವಾಂಟೆಡ್ ಮಿಸ್ಟರ್ ರಾಜು : [ನಮ್ಮ ರಾಜು ಮಂಜ ಕಥೆ]

ಲೇಖನ : ತಂಕರನ ಬಸಪ್ಪ

ಸರಾವಾಯಿ - 25

ಹಿಂದಿನ ಸಂಚಿಕೆಂದ ......

ಮೂರನೆ ದಿನ ಸುಂಟಿಕೊಪ್ಪದ ಮೊಣ್ಣಪ್ಪಜ್ಜಂಗೆ ಮಗಳ ಮದ್ವೆಗಿರುವ ಬಟ್ಟೆಬರೆಗಳ ಕೊಡ್ಸಿತ್. ಅಲ್ಲಿ ತನಿಗೂ ತನ್ನ ತಂಗೆಗೂ ಇರ್ವ ಬಟ್ಟೆ ಬರೆಗಳನ್ನ ಮಾಡಿಕಂಡತ್. ಮಾರನೆ ದಿನ ಹೊಟೇಲ್ ರಮ್ಯಲಿ ಕುದ್ದ್‌ಕಂಡ್ ತಿಂಡಿತಿಂಬಕಾಕನ ರಿಯಲ್ ಎಸ್ಟೇಟ್ ಏಜೆಂಟ್ ಒಂದ್ ಮನೆನ ಮಾರ್ಸ ಕೊಡುವ ವ್ಯವಹಾರದ ಬಗ್ಗೆ ಮಾತಾಡುತಿರುದರ ಕೇಳ್ಸಿಕಂಡತ್. ಹಂಗೇ ಆ ಗಿರಾಕಿಗಳ ಪಾಲೋಮಾಡ್ತ್........

ಮುಂದಕೆ .........

ರಾಜು ಮಂಜ ಸುಬ್ಬಯ್ಯ ಅಂಕಲ್‌ನ ಒಂದ್ ಆಟೋಲಿ ಏದ್ರಿಸಿಕಂಡ್ ಸೀದಾ ಹಿನ್‌ಕಲ್‌ಲಿ ಅವರ ಮನೆಗೆ ಬಾತ್. ಆಗ Mr. ರಾಜು ಸುಬ್ಬಯ್ಯ ಅಂಕಲಿಗೆ ಹೇಳ್ತ್ ನೋಡಿ ಅಂಕಲ್ ಈಗ Mr. ಜಯದೇವ್ ಅವರ ಮನೆನ ನಿಮಗೆ ಮಾರಿಬುಟ್ಟವೆ. ಅದ್ರಿಂದ ಅವು ಒಂದೇ ಸರ್ತಿಗೇ ಆಸ್ತಿನ ಕಳ್‌ಕಂಡವೆ. ನೀವು ಅವರ ಆಸ್ತಿನ ಗಳಿಸಿಕಂಡರೆ. ಆದ್ರೇ ಅವುಕೆ ಕಳ್ಕಂಡ ಆಸ್ತಿ ಕಳ್ದ್ ಹೋದೆ. ಅದರ ಪುನಃ ಸಂಪಾದಿಸಿಕೆ ಆದುಲ್ಲೆ. ಕಳ್ದದ್ ಕಳ್ದೇ ಹೋದೆ. ಆದ್ರಂದ ನೀವೇ ಇದಕ್ಕೆ ಸಮ್ಮಂದ ಪಡ್ಡ ಪೇಪರ್ಸ್ ಖರ್ಚುಗಳ್ನೆಲ್ಲಾ ಹಾಕೋಕು. ಎಲ್ಲಾ ಒಟ್ಟು ಏಳ್‌ಮುಕ್ಕಾಲು ಲಕ್ಷ ಈಗ ಬೇಕಾಗಿದ್ದದೆ. ಪೋಯಿ ಬೇಗ ಬ್ಯಾಂಕಿಗೆ ಹೋಗಿ ಹೇಳಿ ಇಷ್ಟೊಂದು ಹಣನ ತಕಂಡ್ ಹೊರಡೋಕುತಾ Mr. Raju ಜ್ಞಾಪಿಸಿತ್.

Mr. ರಾಜು ಮತ್ತೆ ಸುಬ್ಬಯ್ಯಣ್ಣ ಇಬ್ರೂ ಸೇರಿ ಅಲ್ಲೆ ಹಿನ್‌ಕಲ್‌ಂದ ಒಂದು ಆಟೋನ ಹಿಡ್ದ್ ದೇವರಾಜ್ ಅರ್ಸ್ ರಸ್ತೆಲಿರುವ ಸುಬ್ಬಯ್ಯನವರ ಎಕೌಂಟ್ ಇರುವ ಕೆನರಾ ಬ್ಯಾಂಕಿಗೆ ಈ ಸುಬ್ಬಯ್ಯಣ್ಣನ ಇಳ್ಸಿಕೊಟ್ಟ್ ತಾನ್ ಮಾತ್ರ ಇದೇ ಆಟೋಲಿ ತಾಲೋಕು ಆಫೀಸ್ ಕಡೆಗೆ ಹೊರಟಿತ್.

ಮಿಸ್ಟರ್ ಸುಬ್ಬಯ್ಯಣ್ಣ ಅಲ್ಲಿ 6½ ಲಕ್ಷಕ್ಕೆ ಒಂದೇ ಡಿಮ್ಯಾಂಡ್ ಡ್ರಾಪ್ಟ್‌ನ ತಕಂಡ್ ಇನ್ನೂ ಒಂದು ಲಕ್ಷ ಕ್ಯಾಶ್ ಮಾಡ್ಸಿಕಂಡ್ ಅಲ್ಲಿಂದ ಬೇಗ Mr. ರಾಜು ಹೇಳ್ದಂಗೆ ತಾಲೋಕು ಆಫೀಸ್ ಕಡೆಗೆ ಪುನಃ ಒಂದ್ ಆಟೋನ ಹಿಡ್ದ್ ಹೊರಟತ್.

ತಾಲೋಕು ಆಪೀಸ್ ಕಟ್ಟಡದ ಹಿಂಬಾಗಲಿ ಇಂತ ಆಸ್ತಿಪಾಸ್ತಿಗಳ ಮಾರಾಟದ ಕೊಂಡುಕೊಂಬುದರ ವ್ಯವಹಾರ ಮಾಡಿಕೆ ಸರಿಯಾದ ಜನ ಒಳೊ. ಅಲ್ಲಿ ಇಂವಂಗೆ ಸ್ವಲ್ಪ ಪರಿಚಯದ ಮಹಿಷಿ ಎಂಟರ್‌ಪ್ರೈಸ್‌ತೇಳುವ ಒಂದ್ ಆಫೀಸ್‌ಗೆ Mr. Rajuಅವರ ಮನೆ ಡಾಕ್ಯುಮೆಂಟ್ಸ್‌ಗಳನೆಲ್ಲಾ ಕೊಟ್ಟತ್.

ಮತ್ತೆ ಸಿಕ್ಕ ವ್ಯಾಪಾರಕ್ಕೆ ಬೇಕಾದ (ಬಾಂಡ್ ಛಾಪ್‌ಕಾಗದನ್ನ ತಕಂಡ್ ಅಲ್ಲೇ ಕುದ್ದಿದ ಒಬ್ಬಲಾಯರ್‌ನ ಕೈಗೆ ಕೊಡ್ತ್ ಮತ್ತೆ ಬರಿಯಕ್ ಅಲ್ಲೆ ಒಬ್ಬ ಮಾನ್ಯತೆ ಪಡೆದ ಬರವಣಿಗೆದಾರ ಈ ಪಾರ್ಟಿಗಳ ಸರಿಯಾದ ಅಡ್ರೆಸ್‌ಗಳ್ನ ತಕ್ಕಂಡ್ ಮನೆ ಕ್ರಯ ಪತ್ರನೆಲ್ಲಾ ಬರ್ದ್ ಮುಗ್ಸಿತ್. ಅಷ್ಟೊತ್ತಿಗಾಕನ ಸುಬ್ಬಯ್ಯ ಅಂಕಲ್ 6½ ಲಕ್ಷಕ್ಕೆ ಒಂದ್ ಡಿ. ಡಿ. ಮಿಕ್ಕಿದ ಹಣಕ್ಕೆ ಒಂದು ಲಕ್ಷ ಕ್ಯಾಷ್ ಹಣನ ಹೊತ್‌ಕಂಡ್ ಒಂದ್ ಆಟೋಲ್ ಬಂದ್ ಇಳ್ದ್ ಇವರ ಹುಡುಕುತಿದ್ದೋ. ಕೊನೆಗೆ ನೋಡಿರೆ ಇವು ತುಂಬಾ [illegible] ಒಳಗೆ ತಾಲೋಕು ಆಪೀಶ್‌ನ ಹಿಂದ್‌ಗಡೆ ಆಫೀಸ್ ಒಳಗೆ ಕುದ್ದಿದ್ದೊ. ಸರಿ ಎಲ್ಲಾ ಪೇಪರ್ಸ್‌ಗ ತಾಯರಾತ್.

ಸಬ್‌ರಿಜಿಸ್ಟ್ರಾರ್ ಆಫೀಸ್‌ಲಿ ದಿನದ ಒಂದ್ ಒಳ್ಳೆ ದೊಡ್ಡಗಿರಾಕಿಗೋಸ್ಕರ ಇದಿರ್‌ನೋಡಿಕಂಡ್ ಕುದ್ದಿದಂಗೆ ಕಾಣಿಸ್‌ತಿತ್ತ್. ಯಾಕೆತ್ತೇಳಿರೆ ದಿನಾ ಈ ಆಫೀಸ್‌ಲಿ ಜನ ಗಿಜಿಗುಟ್ಟುತಿದ್ದೊ. ಆದ್ರೆ ಇಂದ್ ಅಲ್ಲಿ ಜನನೇ ಕಮ್ಮಿ ಇದ್ದೊ. ಹೋ ಬನ್ನಿ ಬನ್ನಿತೇಳಿ ಒಳಗೆ ಬರ್‌ತಿದ್ದ ಈ ಮೂರು ಜನರ ಕರ್ದ್ ಕೂರ್ಸಿಕಂಡೊ. ಒಬ್ಬ ಗುಮಾಸ್ತ ಅದೇನೋ ಒಂದ್ ಲೆಟರಿಗೆ ಸಿಗ್ನೇಚರ್‌ಗೆ ಬಂದಿದ್ದವ. ಹೋದಮೇಲೆ ಏನು ಸ್ವಾಮಿ ಏನ್ ಸಮಾಚಾರ? ಕೊಡಿಲ್ಲಿ ನಿಮ್ಮ ಡಾಕ್ಯುಮೆಂಟ್ಸ್‌ಗಳ್ನ ತ್ತೇಳಿ ಅದರ ಕೈಗೆ ಇಸಿಕಂಡತ್. ಮೊದ್ಲಿನಿಂದ ಕೊನೆ ಒರೆಗೂ ಓದಿ ನೋಡ್ತ್. ಮತ್ತೆ ಕಾಲಿಂಗ್ ಬೆಲ್‌ನ ಒತ್ತಿ ಒಳಗಿಂದ ಒಬ್ಬ ಬೆಂಚ್ ಕ್ಲರ್ಕ್‌ನ ಕರ್ತ್. ಅಂವ ಬಾಕೆ ಮುಂದೆ ಆ ಆಫೀಶ್ರ್ ಹೇಳ್ತ್. ನೋಡಿ ಇವ್ರೆ ನೀವು ಮಾರಾಟ ಮಾಡುವ ಆ ಏರಿಯಾದ ವ್ಯಾಲ್ಯು ಈಗ 10ಲಕ್ಷದ ಮೇಲೆ ಆಗುಟ್ಟು ನಿಮ್ಮ ಪೇಪರ್ಸ್‌ನಲ್ಲಿ 5ಲಕ್ಷಕ್ಕೆ ವ್ಯಾಪಾರತ್ತೇಳಿ ಬರ್ಸಿದ್ದೀರಾ ಇವನ್ನ ನಾನು ರಿಜಿಸ್ಟರ್‌ಮಾಡಿಕೊಡಿಕೆ ಆದುಲ್ಲೇ. ನಾನ್ ಇಷ್ಟ್ ಕಡಿಮೆ ಬೆಲೆಗೆ ರಿಜಿಸ್ಟರ್ ಮಾಡಿರೆ ಕಾನೂನು ರೀತಿ ಆಗಿ ನಂದೇ ತಪ್ಪಾದೆ ಗೊತ್ತುಟಾ ನಿಮಗೆ? ತೇಳಿ ಒಂದ್ ಬೆದರಿಕೆ ಹಾಕಿತ್ತ್. ಆಗ Mr. ರಾಜು, ಸಾರ್ ನಿಮ್ಮ ಕಾನೂನಿನ ಬೆಲೆನಂಗೆ ಗೊತ್ತುಟ್ಟು. ಸುಮ್ಮನೆ ಅನ್ಯಾಯವಾಗಿ ಛಾಪ ಕಾಗದಕ್ಕೆ ದುಡ್ಡು ಸುರಿಯಕಲ್ಲಾ ? ಅದ್‌ಕೇ ನಾನ್ ಒಂದ್ ಲಕ್ಷಕ್ಕೆ ಕಡಿಮೆ ಮಾಡಿಸಿ ಬರ್ಸಿದೆ. ಇದರಲ್ಲಿ ನಿಮಗಾದ್ರೂ ಸ್ವಲ್ಪ ಪ್ರಯೋಜನ ಆದು ಇದ್ನ ದೊಡ್ಡಮನ್ಸ್‌ಮಾಡಿ ಸ್ವೀಕರಿಸಿಕೊಳ್ಳಿತ್ತೇಳಿ 100ರ 50ನೋಟ್‌ನ ಒಂದ್ ಕವರ್‌ಲಿ ಹಾಕಿ ಅಲ್ಲಿದ್ದ ಒಂದ್ ಲೆಡ್ಜರ್‌ನ ಕೆಳಗೆ ಮೆಲ್ಲೆ ತುರುಕಿತ್. ಈ ದಪ್ಪ ಮತ್ತೆ ಉದ್ದ ಇದ್ದ ಕವರ್‌ನ ಕಂಡ ಆ ರಿಜಿಸ್ಟ್ರಾರ್ ಆಫೀಸರ್ ಮೆಲ್ಲಂಗೆ ಕಕ್ಕಡೆ ಏಸಂಡ್ ಮೀನ್ ಹಿಡ್ದಂಗೆ ದುಡ್ಡ್‌ನ ಹಿಡ್ದ್ ಪ್ರಾಯರ್

ಒಳಗೆ ತುರ್ಕಿ ಬುಟ್ಟ್. ಆತ್ ಏನು Mr. ಜಯದೇವ್ ನಿಮಗೆ ಇದರಲ್ಲಿ ಬರತಕ್ಕ ಹಣ ಎಲ್ಲಾ ಸಂದಾಯ ಆ ಗುಟ್ಟಾ? ಅಥವಾ ಇಲ್ಲೆ ನಾ? ಹೇಳಿ ತ್ತಾ ಕೇಳಿಕಾಕನ ಸಾರ್ Mr. ಸುಬ್ಬಯ್ಯನವರು ಇವರಿಗೆ ಕೊಡಬೇಕಿರುವ ಹಣಕ್ಕೆ ಒಂದ್ ಡಿ.ಡಿ. ಮಾಡಿಕೊಂಡು ಬಂದಿದ್ದಾರೆ. ಈಗ ನಿಮ್ಮ ಸಮಕ್ಷಮದಲ್ಲೇ ಅದರ ಕೊಟ್ಟವೆ ಮತ್ತೆ ಮಿಕ್ಕಿದ ಹಣನ ಕ್ಯಾಷ್‌ನ ಕೂಡಾ ನಿಮ್ಮ ಎದುರು ಕೊಟ್ಟವೆ. ಹಣದ ಬಗ್ಗೆ ಏನೂ ತಕರಾರ್ ಇಲ್ಲೆ. ನೀವು ರಿಜಿಸ್ಟರ್ ಮಾಡ್ಸಿ ಕೊಡಿಸಾರ್‌ತ್ತೇಳಿ, ಸುಬ್ಬಯ್ಯ ಅಂಕಲ್‌ಗೆ ಕಣ್ ಸನ್ನೆಮಾಡಿ ಹೇಳ್ತ್. ಸುಬ್ಬಯ್ಯ ಅಂಕಲ್ ರಿಜಿಸ್ಟಾರ್ ಆಫೀಸರ್ ಎದ್‌ರನೇ Mr.ಜಯದೇವ್‌ಗೆ 6ಲಕ್ಷದ ಡಿಮಾಂಡ್ ಡ್ರಾಫ್ಟ್‌ಕೊಟ್ಟ್ ಉಳಿದ 50,000ರೂ. ಕ್ಯಾಸ್‌ನ ಕೊಟ್ಟೊ. ಎಲ್ಲಾ ವ್ಯವಹಾರಗಳ್ನ Mr. Raju ಇಷ್ಟೊಂದ್ ಲಾಯಕಲ್ಲಿ ಮುಗ್ಸಿಕೊಡುತಿದ್ದುದಕ್ಕೆ Mr. ಜಯದೇವ್ ಬಹಳ ಖುಷಿ ಆಗಿದ್ದೊ, ಅಷ್ಟೊತ್ತಿಗೆ ರಿಜಿಸ್ಟಾರ್‌ರವು ಇವರ ಕರ್ದ್ ಯಾವುದ್ಯಾವುದೋ ಲೆಡ್ಜರ್‌ಗಳ ಸಹಿ, ಸಿಗ್ನೇಚರ್‌ಗಳನ್ನು ಈ ಇಬ್ಬರ ಕೈಯಿಂದಲೂ ಹಾಕಿಸಿಕಂಡೊ. ಮತ್ತೆ ಆ ಕೂಡ್ಲೆ Mr. Raju,ಜಯದೇವರ ಹತ್ರ ಇದ್ದ ಒರಿಜಿನಲ್ ಡಾಕ್ಯುಮೆಂಟ್ಸ್‌ಗಳನೆಲ್ಲಾ ಇಸ್‌ಕಂಡ Mr. ಸುಬ್ಬಯ್ಯ ಅಂಕಲ್‌ನ ಕೈಗೆ ಕೊಟ್ಟತ್, ಅಂಕಲ್ ಇನ್ನೇನಾದ್ರೂ ಅನುಮಾನ ಇದ್ರೆ ಹೇಳಿಬುಡಿ, ಎಲ್ಲಾ ನಮ್ಮ ರಿಜಿಸ್ಟಾರ್ ಆಫೀಸ್‌ರನ ಎದರುಗಡೆ ಮುಗ್ಸ್ದ್ ಹೋದ್ರೆ ಯಾವ ಮುಲಾಜೂ ಇರ್ದುಲೆ ತ್ತಾ ಹೇಳಿಕಾಕನ ಸುಬ್ಬಯ್ಯ ಅಂಕಲ್, ಎಲ್ಲಾ ಸರಿ ಆಗುಟ್ಟು ಮನೆ ಕ್ರಯ ಪತ್ರದ ಎಗ್ರಿಮೆಂಟ್ ಆಗುಟ್ಟು, ಖಾತೆ ಬದಲಾವಣೆ ಆಗುಟ್ಟು ಅಲ್ಲದೆ ಅಂಪ ಹಳೆ ಒರಿಜಿನಲ್ ಡಾಕ್ಯುಮೆಂಟ್ಸ್‌ಗಳ್ನ ಕೂಡಾ ಕೊಡ್ತ್ರಿಳೊರಿ, ಸಾಕ್ ಇಷ್ಟೆ ; Mr. ಜಯದೇವ್ ಜಂಟ್ಲ್‌ಮನ್ನ್. ಮುಂದಕ್ಕೆ ಅವರಿಂದಾಗ್ಲೀ ಅವರ ಕಡೆಯುವರಿಂದಾಗ್ಲೀ ಯಾವ ತೊಂದ್ರೆನೂ ಬಾರದಂಗೆ ಪತ್ರದಲ್ಲಿ ಬರ್ಸಿಕಂಡ್ ಸಿಗ್ನೇಚರ್‌ಮಾಡಿ ಕೊಟ್ಟೊಳಲ್ಲಾ? ಥ್ಯಾಂಕ್ಸ್‌ಸಾರ್ ; ಇನ್ನು ನಾವು ಹೊರಡ ಬಹುದಲ್ಲಾ? ತ್ತೇಳಿ ಆ ರಿಜಿಸ್ಟಾರ್ ಆಫೀಸ್‌ಂದ ಎಲ್ಲವೂ ಹೊರಗೆ ಹೊರಟೊ.

ಇಷ್ಟು ವ್ಯವಹಾರ ಮುಗ್ದ್ ಇನ್ ಮುಖ್ಯವಾಗಿ ಬಾಕಿ ಇದ್ದ ಒಂದ್ ವ್ಯವಹಾರ ಮುಗ್ದಿತಿಲ್ಲೇ, ಅದೇ Mr. ರಾಜುಗೆ ಬರುವ ಕಮಿಷನ್ ವ್ಯವಹಾರ ಮತ್ತೆ ಆಫೀಸ್‌ಲಿ ಖರ್ಚ್ ಆದರ ಬಾಪ್ತ್, ಅದರ ಮುಖಮುರ್ದಂಗೆ ಕೇಳಿಕ್ಕೆ Mr. Rajuದು ಮನಸ್ಸ್ ಒಪ್ಪಿತಿಲ್ಲೆ. ಹಂಗಾಗಿ ಈ ಸಂದರ್ಭನ ಕ್ರಿಯೇಟ್ ಮಾಡಿಕೋಸ್ಕರ, ಆ ಇಬ್ಬರ್ನೂ ಕರ್‌ಕಂಡ್ ಮುಂದಿನ ಸರ್ಕಲ್ ಅಲ್ಲೆ ಹತ್ರ ಇದ್ದ ಹೋಟೇಲ್ ಸಾಮ್ರಾಟ್‌ಗೆ ಕರಕಂಡ್ ಬಾತ್. ಅಲ್ಲಿ Mr. Raju 3ಬಾಟ್ಲ್ Knock out ಬಿಯರ್‌ಗೆ ಆರ್ಡರ್‌ಮಾಡಿ 3ಪ್ಲೇಟ್ ಚಿಕನ್ ಚಿಲ್ಲಿಗೆ ಆರ್ಡರ್ ಹೇಳ್ತ್. ಮೂರು ಜನನೂ ಒಟ್ಟಿಗೆ ಕುಡ್ದ್‌ಕಂಡ್ ಮೆಲ್ಲೆ ಮೆಲ್ಲೆಂಗೆ ಈ ನಿಶೆನ ಏರ್ಸಿಕಾಕನ Mr.ರಾಜು ಒಂದ್ ಕಡೇಂದ ಇಂದ್ ತಾಲೋಕು ಆಫೀಸ್ ಖರ್ಚ್‌ನ ಬಾಪ್ತ್ ಒಂದ್ ಚೀಟಿಲಿ ಲೆಕ ಬರ್ದ್ ಅದರ್ನ Mr.ಸುಬ್ಬಯ್ಯ ಅಂಕಲ್‌ನ ಕೈಗೆ ಕೊಡ್ತ್ ಇನ್ನೊಂದ್ ಚೀಟಿ ಬರ್ದ್ Mr. ಜಯದೇವ್ ಅಂಕಲ್‌ನ ಕೈ ಕೊಡ್ತ್. Mr. ಸುಬ್ಬಯ್ಯ ಅಂಕಲ್‌ಗೆ ಆ ಚೀಟಿನ ನೋಡಿ ಖುಶಿ ಆತ್. Mr. ರಾಜು, ನೀವು ಇದ್ದರ್‌ಂದ ನನ್ನ ವ್ಯವಹಾ ಏನ್ ಕಷ್ಟ ಆಗದಂಗೆ ಮಡಿಕೊಟ್ಟೊಳೊರಿ. ತಕಣಿ ಪೇಪರ ಕರ್ಚ್, ಲಂಚ, ತಾಲೋಕು ಆಫೀಸ್ ಖರ್ಚ್ ಎಲ್ಲಾ ಒಟ್ಟಿಗೆ ಆದ್ರೆ ನಾನೇ ಆಗಿದ್ರೇ ಇನ್ನೂ 5-6 ಸಾವಿರ ಹೆಚ್ಚಿಗೆ ಖರ್ಚ್ ಆಗಿ ಹೋತಿತ್ತ್ ತ್ತೇಳಿ ಆ ಚೀಟಿ ಪ್ರಕಾರ ಒಟ್ಟು 40,750 ರೂ. ನ ಎಣಿಸಿ ಕೊಟ್ಟೊ. Mr. ಜಯದೇವ್ ಕಮಿಷನ್ ಬಾಪ್ತ್, ಒಟ್ಟ್ 13000ರೂ. ಗಳ್ನ ಎಲ್ಲಾ 100ರೂ. ನೋಟ್‌ಗಳ ಎಣಿಸಿ Mr. ರಾಜುನ ಕೈಗೆ ಕೊಟ್ಟೊ. ಈ ವ್ಯವಹಾ ಮುಗಿತಿದ್ದಂಗೆ ಮೂರು ಜನರಿಗೂ ವೇಯಿಟರ್ ಬಂದ್ ಇನ್ನೇನು ಬೇಕುಸಾರ್ ತ್ತಾ ಕೇಳ್ತ್. Mr. ಸುಬ್ಬಯ್ಯ ಅಂಕಲ್‌ಗೆ ಲೋಡ್ ಕಡಿಮೆ ಆಗಿತ್ತ್, ಇದರ ಕಂಡ್ Mr. ರಾಜು ಇನ್ನೂ ಒಂದು ರೌಂಡ್ ಲೈಟ್ ಡ್ರಿಂಕ್ಸ್‌ಗೆ ಆರ್ಡರ್ ಕೊಡ್ತ್, ಮೂರುಜನನೂ ಸೇರಿಕಂಡ್ ಅಲ್ಲಿ ಆರಾಂ ಆಗಿ ಕುಡ್ದ್ ತಿಂದ್ ಆದಮೇಲೆ ಈ ಇಬ್ಬರೂ Mr. ರಾಜುನ ಹೊಗಳಿಕೆ ಶುರು ಮಾಡ್ದೊ. Mr.ರಾಜು ಇಲ್ದೇ ಇದ್ದಿದ್ದರೆ ನಾವು ಇನ್ನೂ 10, 15, ಸಾವಿ ರೂಪಾಯಿಗಳ ಕಳಕಂಬೋತಿದ್ದೊ. ಬೇಷ್ ಇಂತಹ ಚೋಟಿ ಹೈದಂಗ ನಮ್ಮಲ್ಲಿದ್ದರೆ ಎಂಥ ಕಷ್ಟದ ಅಫಿಷಲ್ ಕೆಲ್ಸಗಳಿದ್ದರೂ ನಿಭಾಯಿಸಿ ಕಣಕ್ ತಾ ಮೆಚ್ಚುಗೆ ವ್ಯಕ್ತ ಪಡಿಸಿದೊ.

ಅಲ್ಲಿಯ ಲೈಟ್ ಡಿನ್ನರ್ ಪಾರ್ಟಿಯ ಖರ್ಚ್‌ನ Mr. ರಾಜುನೇ ಕೊಡ್ತ್. ಎಲ್ಲವೂ ಸಂತೋಷಲಿ ಎದ್ದ್ ಹೋಟೇಲ್‌ಂದ ಹೊರಗೆ ಬಂದವು ಒಬ್ಬರನೊಬ್ಬರು ಬೀಳ್ಕೊಟ್‌ಕಂಡ್ ಮೂರು ಜನ ಮೂರು ಕಡೆಗೆ ಹೊರಟೊ.

---

## ನನ್ನ ಊರ್

ನನ್ನ ಊರ್ ಮರಗೋಡ್
ಅಲ್ಲಿ ನೋಡ್ದರೆ ಬಾರಿ ಮರಗಳ ಬೀಡ್
ಕಾಡ್‌ಗಳ ಮಧ್ಯಲುಟ್ಟು ಎಂತೆಂತ ಹೈವೇಗ ||

ಸುತ್ತಮುತ್ತಲುಟ್ಟು ಕಾಫಿ ತೋಟಗಳ ಸಾಲ್
ವಸಂತ ತಿಂಗಳಲಿ ಬಂದ್ ನೋಡಕು
ಊರ್ಗೆ ಊರೇ ಘುಮಘುಮಿಸಿದೆ ಕಾಫಿಹೂವಿಂದ ||

**ಕಾನಡ್ಕ ಚರಣ್ ಶಿವಯ್ಯ, ಮರಗೋಡು.**

---

**ಉಂಡ ಮೇಲೆ ಜಾತಿ ಕೇಳಬಾರದು.**

# ಏಡ್ ನೈಟ್ !

— ಬಿ. ಆರ್. ಜೋಯಪ್ಪ, ಮದೆ.

"ಓ! ದೊಡ್ಡವ್ವಾ? ದೂರ ಹೊರ್ಟದ್?

"ನೀ ಯಾರ್? ಓಹೋ ನಮ್ಮ ಸೀತೆ. ಇಂದ್ ರಾಣಿ ೞಡೆದ್ ಕೂಸುನ ತೊಟ್ಟಿಗಿಲಿಗೆ ಹಾಕುದಲಾ. ಹಂಗೆ ಅಲ್ಲಿಗೆ ೋಯಾಂತ ಹೊರ್ಟೆ."

"ನೀ ದೂರ?"

"ನಾನೂ ಅಲ್ಲಿಗೇ ಹೊರ್ಟದ್ ದೊಡ್ಡವ್ವಾ".

ಏನಾರಾಗಲಿ. ಒಬ್ಬಳೇ ಹೋಕಲ್ಲಾಂತ ಬೇಜಾರಾಗಿತ್. ೆಂಗೂ ನೀನೂ ಅಲ್ಲಿಗೇ ಹೋದುತಾದಮೇಲೆ ನಾವಿಬ್ಬರೂ ಾತಾಡಿಕಂಡ್ ಪೋಯಿ.

ಹೋದೊರ್ಸ ಮದುವೆ, ಈ ವರ್ಸ ನಾಮಕರಣ. ಈ ವರ್ಸ ುದುವೆ ಮುಂದ್‌ನೊರ್ಸ ನಾಮಕರಣ. ನಂಗೆ ಬೊತ್ತಪಾ. ಎಲ್ಲ ಡೆಗೂ ನನ್ನನೇ ದೂಡುವೆ. ನಮ್ಮ ಇವು ಒಳೊ. ಮನೆ ಮಸ್ಗಿರೂ ಇವು ಮಸ್ಗಿಕಿಲೆ. ಸೀತೆ ನನ್ನ ಮೊಕನೋಡು. ಬೂದಿ ಬೂದಿ ುಟ್ಟಾ? ನಾ ಬ್ಯಾಡ ಬ್ಯಾಡಾಂತೇಳಿರೂ ನನ್ನ ಎರಡ್ನೇ ಮಗ್ಳು ೌಡರ್ ಹಾಕಿತ್. ಈ ಹಾಳ್ ಚಪ್ಪಲ್ ಹಾಕಿ ಅಭ್ಯಾಸನೂ ಇಲ್ಲೆ. ಾಲ್ ಎಳ್ಕಂಡ್ ಎಳ್ಕಂಡ್ ನಡೆಂಗಾತ್. ನೋಡವು ನಗಾಡುವೊ. ಈ ಅಜ್ಜಿನ ಕೋಲ ನೋಡಿ ಬೊತ್ತಪ್ಪಾಂತೇಳುವೊ. ನೀ ಕೂಸ್ನ ೈಗೆ ಕೊಡಿಕೆ ಎಂತನೂ ತಕಂಡತಂಲೆಯಾ? ನಾ ಕವರ್ ಕೊಡ್ತುತ ುಡ್ಚಿ ಹಿಡ್ಕಂಡೊಳೆ. ಅಲ್ಲಾ ಈಗೆಲ್ಲಾ ಜೋಗುಳ ಹಾಡೆಲ್ಲಾ ಕಾಡ್ ಹತ್ತಿತ್. ನಾ ಏನಾರ್ ಪದ ಹೇಳಿನೇಂತ ಸುರು ಮಾಡಿರೆ "ನಿನ್ನ ಕಳೆರಾಗ ನಿಲ್ಸವ್ವಾ. ಹೊಸ ಟೇಪು ತಂದೊ ಳೊಂತೇಳಿಕಂಡ್" ಎಂತೆಂತದೋ ಪದ ಹಾಕಂಡ್ ಕೊಣ್ದುವೆ. ನೀವ್ ಹೆಂಗಾರ್ ಾಳಾಗಿತ ನಾನೂ ಪದ ಹೇಳ್ದು ಬುಟ್ ಬುಟ್ಟೆ. ಓಹೋ! ನಾವ್ ಆ ರಸ್ತೆಲೇ ಹೋಕಾಗಿತ್ ಗದ್ದೆಗಾಗಿ ಹೋದರೆ ಹತ್ರಂತ ನಾ ನ್ನ ಇಲ್ಲೇ ಕರ್ಕಂಡ್ ಬಂದೆ. ಗದ್ದೆ ಪುಣಿಪೂರಾ ಕೆಸ್ರ್. ಹಾಳ್ ಚಪ್ಪಲ್ ಬ್ಯಾರೆ. ಆ ದೊಡ್ಡಗದ್ದೆ ಕರೆಗಾಗಿ ಪೋಯಿ. ದೊಡ್ಡವ್ವ ಮಾತಾಡಿಕಂಡೇ ಇತ್. ಸೀತೆ ಹ್ಞಾ, ಹಂತ ಹೇಳ್ತಾ ಇತ್.

ಇಬ್ಬರೂ ಕೊಡೆ ಬುಳ್‌ಗಿಕಂಡ್ ಪುಣಿಲೇ ನಡ್ಕಂಡ್ ಹೋಗ್ತಾ ಇದ್ದೊ. ಹಿಂಗೆ ಇರಕನ ತುಂಟ ಮಕ್ಕಳೋ ಯಾರೊ ಹುಲ್‌ಗೆ ಗಂಟ್ ಹಾಕಿ ಇಸಿದ್ದೊ. ದೊಡ್ಡವ್ವಂಗೆ ಗೊತ್ತಾತ್‌ಲೆ. ಆ ಹುಲ್‌ಗಂಟ್ ಕಾಲಿಗೆ ಸಿಕ್ಕಿ ದೊಡ್ಡವ್ವ ಎಡಗಡೆ ಗದ್ದೆಗೆ ಹೊಣ್ಕೆ ಬೀತ್. ಕೊಡೆ ಪುಣಿಮೇಲೆ. ಅಜ್ಜಿ ಗದ್ದೆ ಒಳಗೆ. ಒಂದ್ ಕಾಲ್‌ಲಿ ಚಪ್ಪಲ್ ಉಟ್ಟು. ಇನ್ನೊಂದ್ ಎತ್ತಳೋ ರಟ್ಟಿ ಹೋತ್. ಅದೋ ಆ ಗದ್ದೆಗೆ ಬಗಲೆ ತೆಗ್ದಿದ್ದೊ. ಹಂದಿ ಪಳ್ಳ ಬಿದ್ದಂಗಾತ್. ಪೌಡರ್ ಗೀವ್‌ಡರ್ ನಾಪತ್ತೆ. ಸೀತೆಗೂಡೆ ಬಾಯಿ ಬಾಯಿ ಬಡ್ಕಂಡ್ ದೊಡ್ಡವ್ವನ ಕೈ ಕೊಟ್ ಪುಣಿಕಡೆ ಎಳ್ದ್ ಹಾಕಿತ್. ದೊಡ್ಡವ್ವನ ಸೀರೆಗೀರೆ ಪೂರಾ ಕೆಸ್ರೋ ಕೆಸ್ರ್. ಸೀತೆಗೆ ಪಜೀತಿ. ಊಡಿ ಎತ್ ಬುಡಕನ ತೋಡೊಳಗೆ ಎತ್‌ಗಳ ನಿಲ್ಸಿಕಂಡ್ ಮೈ ತೊಳ್ದವೆಲ್ಲಾ ಹಂಗೆ ದೊಡ್ಡವ್ವನ ನಿಲ್ಸಿಕಂಡ್ ಸೀರೆನೆಲ್ಲಾ ಸೀತೆ ತೊಳ್ತ್. ಸೀತೆಗೆ ನಗೆ ತಡೆಕೆ ಬೊತ್ತದೆ.

ದೊಡ್ಡವ್ವಂಗೆ ಒಂದ್ ಕಡೆಂದ ಸಿಟ್. ಇನ್ನೊಂದ್ ಕಡೆಂದ ಅವಮಾನ ಆ ದಂಗಾತ್. ಇಬ್ಬರೂ ಅಲ್ಲೇ ಪುಣಿಲಿ ಕುದ್ದೊ. ಒಳ್ಳೆ ಬಿಸಿಲ್ ಇತ್ ಸೀರೆ ಪೂರಾ ಒಣಂಗಿತ್. ಮತ್ತೆ ಗುಣು ಗುಣು ಮಾತಾಡಿಕಂಡ್ ಹೊರ್ಟೊ. ಮನೆಗೆ ಎತ್ತಿದೊ. ಮನೆವು ನೀರ್ ಕೊಟ್ಟೊ. ಕಾಲ್ ತೊಳ್ಕಂಡ್ ಒಳಗೆ ನುಗ್ಗಿದೊ. ಗಂಡ್ ಜನ ಕೈಯಾಲೆಲೆ"ಡಲ್" ಆಗಿ ಕುದ್ದಿದ್ದೊ.

ಒಳಗೆ ಜೋಗಳುಗೀಗಳ ಯಾವ್ದೂ ಇಲ್ಲೆ. ಹೆಣ್ ಮಕ್ಕಳ ನಗೆ ಮಾತ್‌ನೆಲ್ಲ ಮೀರಿಕಂಡ್ ಆ ಕೂಸ್‌ದ್ ಸೈರನ್ ಕೇಳ್ತಾ ಇತ್. ದಮ್‌ಕಟ್ಟಿ ಮರ್ಡ್ತಾ ಇದ್ದ ಕೂಸುನ ಅಯ್ಯೆ ಬೋಚಿ " ನೋಡು ಅಲ್ಲಿ ಅತ್ತೆ. ಇಲ್ಲಿ ನೋಡು ಆಂಟಿ, ಅಲ್ಲಿ ನೋಡು ಅಕ್ಕ, ಇಲ್ಲಿ ನೋಡು ಅಜ್ಜಿಂತೆಲ್ಲಾ ತೋರ್‌ಸಕನ ನೀ ಬೇಕರೆ ನೋಡಿಕಂತೇಳುವಂಗೆ ಕೂಸು ರಂಪ ಮಾಡಿಕಂಡ್ ಮರ್ಡ್ತಾ ಇತ್. ಅಷ್ಟೊತ್ತಿಗೆ ಕೂಸುನ ಬಾಯಿಗೆ 'ಅನ್ನ" ಕೊಡಿಕೆ ಸುರು ಮಾಡ್ದೊ. ಕೈ ತೊಳ್ದವು ತೊಳೆದೇ ಇರವು ಪೂರಾ ಅದರ ಬಾಯಿಗೆ ಅನ್ನ ಕೊಟ್ಟೊ. ಆಶೀರ್ವಾದ ಮಾಡ್ದೊ. ನೀ ದೊಡ್ಡ ಕೆಲ್ಸಕೆ ಹೋಗುತ ಒಬ್ಬು ಹೇಳ್ತ್. ಇನ್ನೊಬ್ಬು ನೀ ಡಾಕ್ಟರ್ ಆಗ್‌ತ ಹೇಳ್ತ್. ಮತ್ತೊಬ್ಬ ನೀ ಇಂಜಿನಿಯರ್ ಆಕುಂತ ಹೇಳ್ತ್. ಇನ್ನೊಬ್ಬು ನೀ ಓದಿಕೆ ಫಾರಿನ್‌ಗೆ ಹೋಗಿ ಅಲ್ಲೆ ಚಾಕ್ರಿ ಮಾಡ್‌ತ ಹೇಳ್ತ್. ಕೂಸು ಮಾತ್ರ ಒಂದೇ ಸಮ ಸೈರನ್ ಮಾಡ್ತನೇ ಇತ್. ಸುಸ್ತು ಆಗಿ ಆಕನ ಕೂಸು ಸೈರನ್ ಕಮ್ಮಿ ಮಾಡ್ತ್. ಈ ಗಲಾಟೆಲಿ ಕಟ್ಟಕಂಡೇ ಇದ್ದ ಕೂಸು ಚೊಳ್‌ಂತ ಸ್ಪ್ರಿಂಕ್ಲರ್ ಹಾರ್ಸಿತ್. ಅದ್ ಹಾರ್ದ್ ಅದರ ತಲೆ ಕಡೆಗೆ. ಗಂಡ್ ಕೂಸು ಬಯ್ಯೋದೇ ಹಂಗೆತ ಅಜ್ಜಿ ಬೊಚ್ ಬಾಯಿ ಬುಟ್‌ಕಂಡ್ ನಗಾಡ್ತ್. ಸುತ್ತ ಇದ್ದ ಎಲ್ಲವ್ ಒಟ್ಟಿಗೆ ನಗಾಡಕನ ಕೂಸು ಸೆಕೆಂಡ್ ರೌಂಡ್ ಸೈರನ್ ಸುರು ಮಾಡ್ತ್. ರಾತ್ರೆ ಹುಟ್ಟಿದ ಕೂಸು ಹಗ್ಲ್ ಮರ್ಬುದು, ಹಗ್ಲ್ ಹುಟ್ಟಿದ ಕೂಸು ರಾತ್ರೆ ಮರ್ಡುದುಂತೆಲ್ಲಾ ಹೇಳಿಕಂಡ್ ಕಾರ್ಯ ಮುಂದೊರ್ಸಿದೊ.

ತೊಟ್ಲು ಕರೇಲಿ " ಇಂಗ್ಲಿಷ್" ಪುಸ್ತಕ ಇಸಿದೊ. ಪೆನ್‌ಲಿ ಇಂಕ್ ಇತ್ತೊ ಇಲ್ಲೆಯೋ ಅದನ್ನೂ ಇಸಿದೊ. "ಒಳ್ಳೆದ್ ಮಾಡ್ದರಿ, ಇಂಗ್ಲಿಷ್ ಪುಸ್ತಕನೇ ಇಸಿದ್ ಒಳ್ಳೆದಾತ್‌ತ" ಯಾವ ಭಾಷೆನೂ ಓದದ ಅಜ್ಜಿಗೆ ಕುಸೀ ಆತ್!

ಒಳಗೆ ಹಿಂಗೆಲ್ಲಾ ಆಕನ ಹೊರಗೆ ಕೈಯಾಲೆಲಿ " ಡಲ್" ಆಗಿ ಕುದ್ದ ಜನ "ಬ್ರೈಟ್" ಆಗಿ ಬುಟ್ಟೊಳೊ. ಮತೋ ಮಾತ್. ನಗೆಯೋ ನಗೆ!

ಮೊಕನೆಲ್ಲಾ ಕೆಂಪು ಕೆಂಪು ಮಾಡಿಕಂಡ್ ನೀರ್ ಹಾಕಂಡೊ ಹಾಕದೆಯೋ ಏರ್‌ಸ್ತಾ ಇದ್ದೊ. ಊಟಕ್ಕೇಳಿತ ಮನೆ ಯಜಮಾನನ ಪ್ರೀತಿಯ ಕರೆಗೆ ಜನ ಎಲೆಮುಂದೆ ಕುದ್ದೊ. ಕುಸೀಲಿ ಉಂಡೊ. ಕೈ ತೊಳ್ದೊ. ಎಲೆ ಅಡಿಕೆ ಅಗ್ದೊ. ಜಗಲ್ ಕರೆಗೆ ಉಗ್ದೊ. ಹೂಗಿಡನೆಲ್ಲಾ ಮೆಟ್ಟಿಕಂಡ್ ಹಾರ್ದೊ. ಸಿಕ್ಕಿದ ಚಪ್ಪಲ್ ಒಳಗೆ ಪಾದ ನುಗ್ಗಿಸಿದೊ. " ಪೋಯಲ್ಲ, ಪೋಯಲ್ಲಂತ

ರೋಗಿ ಬಯಸಿದ್ದು ಹಾಲು, ವೈದ್ಯನು ಕೊಟ್ಟಿದ್ದೂ ಹಾಲು.

17 ನೇ ಪುಟಕ್ಕೆ

ಜ್ಯೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡ

## ಸಂಗಾತಿ ಭವಿಷ್ಯ : ಜನವರಿ 16- 31

**ಮೇಷ ರಾಶಿ** : ದೈವಾನುಕೂಲವಿದೆ. ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪ ನೆಮ್ಮದಿ ಇದೆ. ಆರೋಗ್ಯವು ಹದಗೆಡಬಹುದು. ನೇತ್ರ ಬಾಧೆಗೆ ಚಿಕಿತ್ಸೆ ಅಗತ್ಯ. ದೇವತಾರಾಧನೆ ಮಾಡಿಕೊಂಡು ಬಂದಲ್ಲಿ ಕ್ಷೇಮಕಾರಕ.

**ವೃಷಭ ರಾಶಿ** : ದೈವಾನುಕೂಲವಿಲ್ಲ. ಹಣಕಾಸಿನ ವ್ಯವಹಾರದಲ್ಲಿ ಸಾಧಾರಣ ಮಟ್ಟಿಗೆ ನೆಮ್ಮದಿ. ಉದರ ವ್ಯಾಧಿ ಕಾಣಿಸಬಹುದು. ಸಂಸಾರವಲಯದಲ್ಲಿ ನಿಷ್ಠುರ ಕಲಹಗಳಾಗುವುದು. ಮಹಾಕಾಲ ಮೃತ್ಯುಂಜಯ ಜಪ ಮಾಡುವುದರಿಂದ ನೆಮ್ಮದಿ ಉಂಟಾಗುವುದು.

**ಮಿಥುನ ರಾಶಿ** : ದೈವಾನುಕೂಲವಿದೆ. ಗೃಹವಲಯದಲ್ಲಿ ತುಸು ನೆಮ್ಮದಿ ಇದೆ. ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪ ಭಾಗ ಲಾಭವಿದೆ. ಹೊಸ ಮಿತ್ರರ ಭೇಟಿಯಿಂದ ಲಾಭವಿದೆ. ಆರೋಗ್ಯವು ಉತ್ತಮ ಗೊಳ್ಳುವುದು.

**ಕರ್ಕಾಟಕ ರಾಶಿ** : ದೈವಾನುಕೂಲವಿಲ್ಲ ಭೂ ಸಂಬಂಧವಾದ ವಿವಾದಗಳು ಭುಗಿಲೇಳುವುದು. ಹಣಕಾಸಿನಲ್ಲಿ ವ್ಯವಹರಿಸುವಾಗ ಎಚ್ಚರ ಅಗತ್ಯ. ಹೊಸ ಮಿತ್ರ ಭೇಟಿಯಿಂದ ಮನಸ್ಸಿಗೆ ನೆಮ್ಮದಿ. ಶನಿಜಪ ಮಾಡಿಕೊಂಡು ಬನ್ನಿ.

**ಸಿಂಹರಾಶಿ** : ದೈವಾನು ಕೂಲವಿದೆ. ಬಲಭಾಗಕ್ಕೆ ದೋಷಗಳಿವೆ. ಶತ್ರುಗಳ ತಂಟೆಯಿಂದ ಮನಸ್ಸಿಗೆ ನೆಮ್ಮದಿ ಇರಲಾರದು. ಹಣಕಾಸಿನ ವ್ಯವಹಾರ ಸ್ವಲ್ಪ ಮಟ್ಟಿಗೆ ಕೈಗೂಡುವುದು. ದುರ್ಗಿ ದೇವಿಯ ಜಪ ಮಾಡಿಕೊಂಡು ಬನ್ನಿ

**ಕನ್ಯಾರಾಶಿ** : ದೈವಾನುಕೂಲವಿಲ್ಲ. ಆರೋಗ್ಯ ಸ್ವಲ್ಪ ಮಟ್ಟಿಗೆ ಸುಧಾರಿಸಬಹುದು. ಹಣಕಾಸು ಸ್ವಲ್ಪಮಟ್ಟಿಗೆ ಕೈಗೂಡುವುದು. ಶತ್ರುಗಳು ಮಿತ್ರರಂತೆ ವರ್ತಿಸಿ ನಿಮ್ಮನ್ನು ವಂಚಿಸಬಹುದು. ದೃಢ ಮನಸ್ಸು ಅಗತ್ಯ. ದುರ್ಗಿ ಜಪದಿಂದ ಸಕಲ ಕಾರ್ಯಗಳು ಸುಗಮವಾಗುವುದು.

**ತುಲಾರಾಶಿ** : ದೈವಾನುಕೂಲವಿಲ್ಲ. ಹಣಕಾಸು ವ್ಯವಹಾರದಲ್ಲಿ ನಷ್ಟ ಅನುಭವಿಸುವಿರಿ. ಹೊಸ ಭೂಮಿ ಸಂಬಂಧ ವ್ಯವಹಾರಗಳ ಪ್ರಸ್ತಾಪಕ್ಕೆ ಬರುವುದು. ಶನಿಯನ್ನು ಆರಾಧನೆ ಮಾಡಿಕೊಂಡು ಬಂದಲ್ಲಿ ಕ್ಷೇಮಕಾರಕ

**ವೃಶ್ಚಿಕ ರಾಶಿ** : ದೈವಾನು ಕೂಲವಿಲ್ಲ. ಹಣಕಾಸಿನ ವ್ಯವಹಾರದಲ್ಲಿ ನಷ್ಟ ಬರಬಹುದು. ಗೃಹವಲಯದಲ್ಲಿ ಸ್ತ್ರೀಯರು ಕಿರಿಕಿರಿ ಉಂಟುಮಾಡುವರು. ಆರೋಗ್ಯ ಹದಗೆಡುವ ಸಂಭವವಿದೆ. ಎಚ್ಚರ ಅಗತ್ಯ ಸುಬ್ರಹ್ಮಣ್ಯ ಸ್ವಾಮಿಯ ಆರಾಧನೆಯಿಂದ ಶುಭವಾಗುವುದು.

**ಧನಸ್ಸು ರಾಶಿ** : ದೈವಾನುಕೂಲವಿದೆ. ವಿವಿಧ ಕಡೆಗಳಿಂದ ಹಣ ಕೈಸೇರುವುದು. ಗೃಹವಲಯದಲ್ಲಿ ದೇವತಾ ಕಾರ್ಯಗಳನ್ನು ನಡೆಸುವಿರಿ. ಭೂಮಿ ಸಂಬಂಧ ವ್ಯವಹಾರಗಳು ಜಯವಾಗುವುದು. ತೀರ್ಥಯಾತ್ರೆ ಮಾಡುವ ಯೋಗವಿದೆ.

**ಮಕರ ರಾಶಿ** : ಗೃಹವಲಯದಲ್ಲಿ ನೆಮ್ಮದಿ ಇದೆ. ಹಣಕಾಸಿನ ವ್ಯವಹಾರ ಕೈ ಗೂಡುವುದು. ಸ್ತ್ರೀ ಸಂಬಂಧ ಲಾಭವಿದೆ. ಶತ್ರುಗಳ ದೂರಾಗಿ ಮನಸ್ಸಿಗೆ ನೆಮ್ಮದಿ. ಶನಿಯ ಆರಾಧನೆ ಮಾಡಿರಿ.

**ಕುಂಭ ರಾಶಿ** : ದೈವಾನು ಕೂಲವಿದೆ. ಭೂ ಸಂಬಂಧ ವ್ಯವಹಾರಗಳಿಂದ ನೆಮ್ಮದಿ ಇಲ್ಲ. ಹಣಕಾಸು ಯಥೇಚ್ಛವಾಗಿ ಕೈಗೂಡುವುದು. ಗೃಹವಲಯದಲ್ಲಿ ದೇವತಾರಾಧನೆ ಮಾಡಿ. ಶನಿಯನ್ನು ಆರಾಧನೆ ಮಾಡಿಕೊಂಡು ಬನ್ನಿ.

**ಮೀನ ರಾಶಿ** : ಗೃಹವಲಯದಲ್ಲಿ ಕಲಹವೇರ್ಪಟ್ಟು ಪರಸ್ಥಳ ಸೇರುವಿರಿ. ಹಣಕಾಸು ಕೈಗೂಡುವುದು. ಆರೋಗ್ಯ ಹದಗೆಡುವುದು ರಕ್ತದೊತ್ತಡ ಬರಬಹುದು. ದೇವತಾರಾಧನೆ ಮಾಡಿರಿ.

---

## ನುಡಿ ಮುತ್ತುಗಳು

" ಗೆಳೆತನ ಮಾಡಿದರೆ ನಮಗಿಂತ ಶ್ರೇಷ್ಠರಾದವರೊಡನೆ ಮಾಡಬೇಕು, ಇಲ್ಲವೇ ಸಮಾನರಾದವರೊಡನೆ ಮಾಡಬೇಕು, ಇವೆರಡು ಸಾಧ್ಯವಾಗದಿದ್ದರೆ ಒಂಟಿಯಾಗಿರುವುದು ಲೇಸು".— **ಗೌತಮ ಬುದ್ಧ.**

"ಹೆಚ್ಚಾಗಿ ಮಾತನಾಡುವುದರಿಂದ ಮಾತ್ರ ಒಬ್ಬ ವ್ಯಕ್ತಿ ಜ್ಞಾನಿ ಎನಿಸಿಕೊಳ್ಳಲಾರ". — **ಬುದ್ಧ.**

"ಮಾನವ ಜೀವನದಲ್ಲಿ ಶಾಂತಿಗಿಂತ ಉತ್ತಮವಾದ ಸಂತಸ ಬೇರ್‍ಯಾವುದು ಇಲ್ಲ".— **ಗೌತಮ ಬುದ್ಧ.**

"ರಟ್ಟೆ ಮುರಿದು ಸಂಪಾದಿಸಿದ ರೊಟ್ಟಿಯ ರುಚಿ ದೇವಲೋಕದ ಅಮೃತಕ್ಕೂ ಇಲ್ಲ " — **ಟಿ. ಪಿ. ಕೈಲಾಸಂ.**

"ಕೆಲಸವಿಲ್ಲದವನ ತಲೆ ಕೆಟ್ಟ ಯೋಚನೆಗಳ ತೌರುಮನೆ " — **ಸುಭಾಷಿತ**

ಮುಕ್ಕಾಟಿರ ವಾಣಿ ಈರಪ್ಪ, ಕೈಕೇರಿ.

---

**ಅನ್ಯರು ಮಾಡಿದರೆ ಅನರ್ಥ, ಮಗ ಮಾಡಿದರೆ ಮಧ್ಯಮ, ತಾನು ಮಾಡಿದರೆ ಉತ್ತಮ.**

# "ಪ್ರೇಮ ವಿವಾಹಕ್ಕೆ ಪ್ರೇರೆಪಣೆ ಬೇಕು".

ನಾವು ದಿನನಿತ್ಯ ಪೇಪರ್‌ಗಳ್ನ ಓದುವೆ. ಟಿ.ವಿ. ನೋಡುವೆ. ರೇಡಿಯೋ ಕೇಳುವೆ. ಅಥವಾ ನಮ್ಮ ಸುತ್ತ ಮುತ್ತ ನಡಿಯುವ ಘಟನೆಗಳ್ನ ಕಣ್‌ಲಿ ನೋಡಿಯೂ ಕಿವಿಲಿ ಕೇಳಿಯೂ ತಿಳ್ಕಂಡವೆ. ನಮ್ಮ ಸಮಾಜಲಿ ಅದೆಷ್ಟೋ ಹದಿಹರೆಯದ ಹೃದಯಗ ಒಂದನೊಂದು ಸ್ಪಂದಿಸಿ ಪ್ರೀತಿ ಪ್ರೇಮಾತೇಳುವ ಬಲೆಗೆ ಬೀಳ್ದು ಸಹಜ. ಇದರ್‌ಂದ ಎಷ್ಟೋ ಜನ ಆತ್ಮಹತ್ಯೆ ಮಾಡಿಕಂಡವೆ. ಸಂಸಾರನೇ ತೊರದ್ ದೂರ ಹೊರಟ್ ಹೊದವೆ. ಇನ್ನ್ ಕೆಲವು ಜನ ಜೀವನ ಪೂರ್ತಿ ಕೊರ್‌ಗಿಕಂಡ್ ಕಣ್ಣೀರ್‌ಲೀ ಕೈ ತೋಳಿತಾ ಇದ್ದವೆ. ಇದಿಕ್ಕೆಲ್ಲಾ ಕಾರಣ ಹಿರಿಯರ್‌ಂದ ಬರುವ ಅಡ್ಡಿ ಆತಂಕಗ. ಜಾತಿಪದ್ದತಿ, ವರದಕ್ಷಿಣೆ, ಬಡತನ, ಸಿರಿತನ, ಮುಂತಾದವು. ಪ್ರೀತಿತೇಳ್ದು ಪ್ರತಿಯೊಬ್ಬರ ಹೃದಯದಲ್ಲೂ ಸಹಜವಾಗಿಯೇ ಹುಟ್ಟುವಂತದ್ದ್. ಇದಿಕೆ ಯಾವ ಬೇಧ ಬಾವ ಇರ್ದುಲೇ. ಒಂದು ಹೃದನೂ ಗೂಡೆನು ಮನಸಾರೆ ಪ್ರೀತಿಸಿ, ಒಬ್ಬರ ಜೀವನನೊಬ್ಬ ಅರಿತ್ ವೈವಾಹಿಕ ಜೀವನದ ಕನಸ್ ಕಾಣ್‌ತಿರ್‌ಕನ ಅದರ್ನ್. ವಿರೋಧಿಸುದು ನಮ್ಮೆಲ್ಲರ ಮೂರ್ಖತನ. ಅವರವರ ಜೀವನಕ್ಕೆ ಬೇಕಾದ ಸಂಗಾತಿನ ಆಯ್ಕೆ ಮಾಡುವಷ್ಟ್ ಸ್ವಾತಂತ್ರ್ಯನೂ ಅವುಕುಟ್ಟು. ಮತ್ತೆ ಎಂತೆಂತವರ್ನ್ ಆರಿಸಿಕಂಡ್‌ರೆ. ನಮ್ಮ ಜೀವನ ಸುಖಿಕರವಾಗಿರ್‌ಕ್ಕೆ ಸಾಧ್ಯತಾ ತಿಳಿವಷ್ಟ್ ಬುದ್ದಿಶಕ್ತಿನೂ ಉಟ್ಟು. ಪ್ರೀತಿಸಿ ಮದುವೆಯಾದರಿಂದ ಆ ಎರಡ್ ಕುಟುಂಬಗಳಿಗೆ ಎಷ್ಟೋ ಲಾಭತೇಳಕ್. ಪ್ರತಿಯೊಬ್ಬ ಅಪ್ಪ-ಅವ್ವನ ಮನ್‌ಸ್‌ಲಿ ನಮಿಗೊಂದು ಒಳ್ಳೆ ಸೊಸೆ ಬರೋಕ್ಕು, ಒಂದು ಒಳ್ಳೆ ಅಳಿಯಾ ಸಿಕೋಕ್ಕು ತೇಳುವ ಆಸೆ ಇದ್ದೆ ಇದ್ದದೆ. ಅದ್‌ಕ್ಕಾಗಿ, ಅಲ್ಲಿ ಇಲ್ಲಿ, ಹುಡುಕಾಡುವ ಸಮಯಾನು ಉಳ್ದದೇ. ಇನ್ನೊಂದು ಮುಖ್ಯವಾಗಿ ವರದಕ್ಷಿಣೆ ತೇಳುವ ಪಿಶಾಚಿಯಿಂದ ದೂರಾಗಿ ಆ ಪ್ರೀತಿಸಿದ ಹೃದಯಗಳ್ನ ಒಂದಾಗಿಸಿ ಅವರ ಸುಖದ ಜೀವನ ನೋಡಿ ಕುಸಿಪಡುವ ಅದೃಷ್ಟ ನಮ್ಮದಾಗಿರಕ್ಕು. " ಹೆಣ್ಣು ಸಂಸಾರದ ಕಣ್ಣು" ಆದರೆ ಜನರ ದೃಷ್ಟಿಲೀ " ಹೆಣ್ಣು ಬರಿ ಹುಣ್ಣು" ಹುಟ್ಟಿದ ಕೂಸ್ ಹೆಣ್ಣಾದರೆ ಜನರ ಬಾಯಿಲೀ ಅದೆಷ್ಟೋ ಮಾತ್‌ಗಳ್ನ ಕೇಳುವೆ. ಯಾರೋದೋ ಒತ್ತಾಯದಿಂದ ವರದಕ್ಷಿಣೆ ಆಶೆಗೋಸ್ಕರ ಮದುವೆಯಾಗಿ ಮೂರೇ ಮೂರು ದಿನಲೀ ಹಿಂಸೆ ಕೊಡುವ ಆ ಕುಟುಂಬದ ದೂರಾದ ಅದೆಷ್ಟೋ ಹೆಣ್ಣ್ ಮಕ್ಕಳ ಬಾಳ್ ಧೂಳಾದ್ಧ ಘಟನೆಗ ನಮ್ಮ ಕಣ್ಣ್‌ಮುಂದೆ ತೇಲಿ ಬರ್ತಾಉಟ್ಟು. ಅದಿಕ್ಕಾಗಿ ಈ ಪ್ರೇಮ ವಿವಾಹಕ್ಕೆ ಹೆಚ್ಚ್ ಒತ್ತು ಕೊಟ್ಟಿದ್ದರೆ ವರದಕ್ಷಿಣೆ ತೇಳುವ ಭೂತನ ನಮ್ಮ ಸಮಾಜದಿಂದ ಹೊಡೆದೊಡಿಸಕಾಗಿತ್ತೇನೊ.!

— ಅಣ್ಣೆಚೀರಾ ಭಾರತಿ, ಮಕ್ಕಂದೂರು.

---

15 ನೇ ಪುಟದಿಂದ

" ಹೇಳಿಕಂಡ್ ಅಲ್ಲೇ ನಿತ್ರೊ. ಹೆಣ್ ಮಕ್ಕಳೂ ಹೊರ್ರೊ. ಒಂದ್ ರೌಂಡ್ ಕೈಕಾಲ್ ಹಿಡ್ದ್ ಅಂಗಳಕ್ಕೆ ಇಳ್ದೊ. ಪುನಾ ಅಲ್ಲೇ ಗುಂಪುಕೂಡಿ ಮಾತಾಡಿಕೆ ಸುರು ಮಾಡ್ದೊ. ಗಂಟೆ ಎರಡ್ ಕಳ್ತ್. "ನಮ್ಮ ಇವು ಬಾಕಾತ್" ಪೋಯಿ ಪೋಯಿಂತ ಹೇಳಿ ಇನ್ನೊಮ್ಮೆ ಎಲೆ ಅಡಿಕೆ ಅಗ್ದೊ.

ಅಲ್ಲೇ ಕರೆಲಿ ನಿತ್ತಿದ್ದ ಅಜ್ಜಪಂಗೆ" ಅಜ್ಜಪ್ಪಾ ನಾವ್ ಹೋಗಿ ಬಂದವೇಂತ " ಹೇಳಿ ಕಾಲಿಗೆ ಬಿದ್ದೊ. ಅಜ್ಜಪ್ಪ ಆತ್ ಹೋಕಂಡ್ ಬನ್ನಿ... ಗುಡ್‌ನೈಟ್‌ತ ಹೇಳ್ತ್ !! ಮಟ ಮಟ ಮಧ್ಯಾಹ್ನ ಅಜ್ಜಪ್ಪ ಗುಡ್ ನೈಟ್‌ಂತ ಹೇಳ್ದ ಕೇಳಿ ಜನ ಪೂರಾ ಅಡ್ಡಡ್ಡ ಬಿದ್ ನಗಾಡ್ದೊ. ಅಷ್ಟೊತ್ತಿಗೆ ಅಜ್ಜವ್ವ ಓಡಿ ಬಂದ್" ನೀವಿಗೆ ಹೊತ್ತು ಗೊತ್ತು ಒಂದೂ ಗೊತ್ತಿಲ್ಲೆನಾ? ಗುಡ್‌ನೈಟ್ ಗಡ ಗುಡ್‌ನೈಟ್‌ಂತ ಷಮೂದಬಾಯ್ಸಿತ್. ನೈಂಟಿ ನೈಂಟಿ ಎರಡ್‌ದಪಾ ಹಾಕಿದ ಅಜ್ಜಪಂಗೆ ನಗೆಯೋ ನಗೆ.

ನೆಂಟ್ರ್ ಬಂದೊ... ತಿಂದೊ. ಕುಡ್ದೊ. ಹೋದೊ. ಕೂಸುನ ಹೆಸ್ರ್ ಎಂತಾ? ಉಮ್ಮಾ... ಮರ್ತೇ ಹೋತು... ಮನೇಲಿ ಕೇಳಿರೆ ಎಂತಾಂತ ಹೇಳ್ದು?

## ನಿಧನ

● ಮೂಲತ ಕಡಿಯತ್ತೂರು ಗ್ರಾಮದ ದಿ. ಬಾಡನ ಚಿಂಣಪ್ಪನವರ ಪುತ್ರಿ ಪಾರ್ವತಿಯವರು ದಿನಾಂಕ 23/12/2000 ದಂದು ಪಿರಿಯಾಪಟ್ಟಣದಲ್ಲಿರುವ ತಮ್ಮ ನಿವಾಸದಲ್ಲಿ ಸ್ವರ್ಗಸ್ಥರಾದರು. ಇವರಿಗೆ 68ವರ್ಷ ಪ್ರಾಯವಾಗಿತ್ತು. ಇವರು ಒಬ್ಬ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ ಎಂದು ತಿಳಿದು ಬಂದಿದೆ.

● ಕಡಿಯತ್ತುನಾಡಿನ ನರಿಯಂದಡ ಗ್ರಾಮದ ಚೈಯ್ಯಂಡಾಣೆ ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷೆಯಾದ ಶ್ರೀಮತಿ ಕುವೇಂಡ್ರ ಧನಲಕ್ಷ್ಮಿ (ಸರಳ) ನವರು ದಿನಾಂಕ 1-1-2000 ರಂದು ವೈಕುಂಠವಾಸಿಯಾದರು. ಇವರಿಗೆ 40ವರ್ಷ ಪ್ರಾಯವಾಗಿತ್ತು. ಇವರು ಪತಿ ಒಂದು ಗಂಡು ಮತ್ತು ಎರಡು ಹೆಂಣು ಮಕ್ಕಳಲ್ಲದೆ ಅಪಾರ ಬಂದುವರ್ಗವನ್ನು ಅಗಲಿದ್ದಾರೆ ಎಂದು ತಿಳಿದು ಬಂದಿದೆ.

— ವರದಿ : ಮಂಞಾಪುರ ಬಾಬು

---

ದೊಡ್ಡವರೊಡನೆ ಹಗೆ ಬೇಡ, ಸಣ್ಣವರೊಡನೆ ಸಲಿಗೆ ಬೇಡ.

## ಶುಭವಿವಾಹ

* ಬೆಂಗಳೂರು ನಿವಾಸಿ ಪೂಜಾರಿ ಪೂವಯ್ಯನವರ ಮಗ ತಿಮ್ಮಯ್ಯನಿಗೂ ಮತ್ತು ಹೊದ್ದೂರು ಗ್ರಾಮದ ತೆಕ್ಕಡೆ ಸಿದ್ದಾರ್ಥನವರ ಮಗಳು ಕುಸುಮಾಳಿಗೂ ದಿನಾಂಕ 10-12-2000ದಲ್ಲಿ ಮಡಿಕೇರಿಯ ಕೆಳಗಿನ ಗೌಡ ಕಲ್ಯಾಣ ಮಂಟಪದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

* ಗುಡ್ಡೆ ಹೊಸೂರು ನಿವಾಸಿ ಕೈಬಿಲಿರ ತಿಮ್ಮಯ್ಯನವರ ಮಗ ವಸಂತಕುಮಾರ್‌ನಿಗೂ ಮತ್ತೆ ಚೇರಂಗಾಲ ಗ್ರಾಮದ ಪರಿವಾರನ ಬೋಪಣ್ಣನವರ ಪುತ್ರಿ ಕಲ್ಪನಳಿಗೂ ದಿನಾಂಕ 1-12-2000ದಲ್ಲಿ ಭಾಗಮಂಡಲಗೌಡ ಸಮಾಜದಲ್ಲಿ ವಿಜೃಂಬಣೆಯಿಂದ ನೆರವೇರಿತು.

* ಮೊಣ್ಣಂಗೇರಿ ಗ್ರಾಮದ ಜಾಂಗನ ಚಂಗಪ್ಪನವರ ಮಗ ಪೂವಯ್ಯನಿಗೂ ಮತ್ತು ಅತ್ತೂರು ಗ್ರಾಮದ ಚಂಡೀರ ಮಂದಣ್ಣನವರ ಮಗಳು ಲಿಖಿತಳಿಗೂ ದಿನಾಂಕ 19-11-2000ದಲ್ಲಿ ಮಡಿಕೇರಿಯ ಕೆಳಗಿನ ಗೌಡ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನಡೆಯಿತು.

* ಕೋರಂಗಾಲ ಗ್ರಾಮದ ಅಂಬ್ರಾಟಿ ತಮ್ಮಯ್ಯನವರ ಮಗ ಭಗವತಿ ಪ್ರಸಾದ್‌ನಿಗೂ ಮತ್ತು ಕಿರುಂದಾಡು ಗ್ರಾಮದ ಬಿಟ್ಟೀರ ದಿ. ರಾಮಯ್ಯನವರ ಮಗಳು ಮೈನಕುಮಾರಿಗೂ ದಿನಾಂಕ 11-11-2000ದಲ್ಲಿ ಭಗವತಿ ಕಲ್ಯಾಣ ಮಂಟಪ, ನಾಪೋಕ್ಲುನಲ್ಲಿ ವಿಜೃಂಭಣೆಯಿಂದ ನಡೆಯಿತು.

* ಮಡಿಕೇರಿ ತಾಲೋಕು ಮುಕ್ಕೋಡ್ಲು ಗ್ರಾಮದ ತೇಲಬೈಲು ಪಳಂಗಪ್ಪನವ್ರ ಮಗ್ಳು ಶೋಭಳ ವಿವಾಹ ಮಡಿಕೇರಿ ತಾಲೋಕು ಕೊಟ್ಟೂರು ಗ್ರಾಮದ ಕೇಕಡ ದಿ. ಪಳಂಗಪ್ಪವ್ರ ಮಗ ಲೋಕೇಶ್‌ನವರ ಜೊತೆ ದಿನಾಂಕ 3-12-2000 ರಂದು ಮಡಿಕೇರಿಯ ಮೇಲಿನ ಗೌಡ ಸಮಾಜದಲ್ಲಿ ವಿಜೃಂಭಣೆಯಿಂದ ಜರುಗಿತು.

## ಕನಸಿನಲಿ ನಾಕಂಡ ಹುಡುಗಿ

ಅಂದೊಮ್ಮೆ ಕನಸಿನಲಿ ನಾಕಂಡೆ ಒಂದು ಹುಡುಗಿಯ,
ನೆನೆಯುತ್ತಿರುವೆ ನಾನೀಗಲೂ ಸಿಡಿಲಿನಂತೆ ಮರೆಯಾದ ಆ ಬೆಡಗಿಯ
ಉಟ್ಟಿದ್ದಳು ಆಕೆ ಬಿಳಿಯ ಮಡಿಯ,
ಮಲ್ಲಿಗೆ ಹೂವು ಅಲಂಕರಿಸಿತ್ತು ಅವಳ ಮುಡಿಯ
ಭೂಮಿ ಮುಟ್ಟಿತ್ತು ಅವಳ ಪಾದದಡಿಯ
ಇನ್ನೇನು ನುಡಿಯ ಬೇಕೆಂದಿದ್ದೆ ಅವಳೊಂದಿಗೆ ಒಂದೆರಡು ನುಡಿಯ
ಅಷ್ಟರಲ್ಲಿ ಆಕೆಯನ್ನು ಕರೆದೊಯ್ದು ಬಿಟ್ಟ ಒಬ್ಬದಡಿಯ
ಹಾಸಿಗೆಯಿಂದ ಬಿದ್ದು ನಾ ಸೇರಿದ್ದೆ ಮಂಚದಡಿಯ
ಕಣ್ತೆರೆದಾಗ ಸೂರ್ಯ ಉದುರಿಸುತ್ತಿದ್ದ ಮಂಜಿನ ಪುಡಿಯ.

**ತಳೂರು ಸುಧಿ, ಮಡಿಕೇರಿ.**

11 ನೇ ಪುಟದಿಂದ

ಬಾರದು. ಗಡಗಡ ನಡುಗುತ್ತಾ ನಿಂತ ಜಿಂಕೆ ಪ್ರಾಣ ಭಿಕ್ಷೆ ಬೇಡುತ್ತಿತ್ತು.

ಒಬ್ಬ ಕಲ್ಲಿನಿಂದ ಬಲವಾಗಿ ಅದಕ್ಕೆ ಹೊಡೆದ. ಆ ಎಳೆ ಮೈಗೆ ಮತ್ತೊಂದು ಹೊಡೆತ ಬಿದ್ದಿತು. ಹೊಡೆತವ ತಾಳಲಾರದ ಜಿಂಕೆ ಮುಗ್ಗರಿಸಿತು. ಬೀಳಲಿಲ್ಲ. ಓಡಲಾರದ, ಓಡಲಾಗದ ಜಿಂಕೆಯತ್ತ ಜನರು ಮುಗಿ ಬಿದ್ದರು. ಕುತ್ತಿಗೆ ಕಾಲುಗಳನ್ನು ಹಿಡಿದು ಅಡ್ಡ ಬೀಳಿಸಿದರು. ತಮ್ಮ ತಲೆಗೆ ಸುತ್ತಿಕೊಂಡಿದ್ದ ಮುಂಡಾಸನ್ನು ಅದರ ಕಾಲಿಗೆ ಬಿಗಿದರು. ಜಿಂಕೆ ಒದ್ದಾಡಿತು. ಏಳಲು ಪ್ರಯತ್ನಿಸಿತು. ಸಾಧ್ಯವಾಗಲಿಲ್ಲ.

ಜಿಂಕೆ ಬಂದಿಯಾಯ್ತು. ಬಿದ್ದುಕೊಂಡು ಕಣ್ಣರಳಿಸಿ ನೋಡಿತು. ಎಲ್ಲಿಯಾದರೂ ತಪ್ಪಿಸಿಕೊಂಡೀತೆಂದು ಭಯ ಪಟ್ಟವನೊಬ್ಬ ತಾನು ಹೊತ್ತು ತಂದಿದ್ದ ಗುದ್ದಲಿಯ ಹಿಂಬದಿಯಿಂದ ಜಿಂಕೆಯ ತಲೆಗೆ ಹೊಡೆದ. ಜಿಂಕೆ ಒದ್ದಾಡಿತು. ಮತ್ತೊಂದು ಹೊಡೆದ. ಜಿಂಕೆ ತನ್ನೆಲ್ಲಾ ಆಸೆಗಳನ್ನು ಬದಿಗೊತ್ತಿ ಚಿರನಿದ್ರೆ ಮಾಡಿತು.

## ಕಾವೇರಿ

ಕನ್ನಡಾಂಬೆಯ ಬೆಡಗಿನ ಕುವರಿ
ಚೆಲುವಿನ ಕೊಡಗಿನ ಕಾವೇರಿ
ಹಚ್ಚಹಸಿರಿನ ಸೀರೆಯಧರಿಸಿ
ಬಳುಕುತ ನಡೆಯುವ ಸಿಂಗಾರಿ ||ಪ.||

ದೇಶ ರಕ್ಷೆಗೆ ಯೋಧರ ನೀಡುವ
ಸುಂದರ ಸುಮಧುರ ಮದನಾರಿ
ಕನ್ನಡ ಮಣ್ಣಿಗೆ ನೀರನು ಉಣಿಸುವ
ಕೊಡಗಿನ ಗೌಡರ ಕುಲನಾರಿ ||ಪ.||

ನಲಿಯಲು ಕುಣಿಯಲು ಓಡುತ ಬನ್ನಿರಿ
ಅಂದದ ಚಂದದ ಗುಡ್ಡವನೇರಿ
ಮಂಜಿನ ಹನಿಯಲಿ ಚಂದ್ರನ ಬೆಳಕಲಿ
ಕಾಣುವುದದುವೇ ಮಡಿಕೇರಿ ||ಪ.||

ಭಾರತ ದೇಶದ ಕಣ್ಮನ ತಣಿಸುವ
ಹೆಮ್ಮೆಯ ದಕ್ಷಿಣ ಕಾಶ್ಮೀರಿ
ಹೆಜ್ಜೆಗು ಹೆಜ್ಜೆಗು ಹೃನ್ಮನ ಬೆಳಗುವ
ಬಳಕುವ ಬಳಿಯುವ ವೈಯ್ಯಾರಿ ||ಪ.||

ನಮ್ಮಯ ಕೊಡಗನು ಒಡೆಯದಿರಿ ನೀವ್
ಹೆಮ್ಮೆಯ ಸಂಸ್ಕೃತಿ ಅಳಿಸದಿರಿ
ಉಳಿಸಿರಿ ಉಳಿಸಿರಿ ಉಳಿಸಿರಿ ಎನ್ನುತ
ಬೇಡುವೆ ನಿಮ್ಮಯ ಕ್ಷಮೆ ಕೋರಿ ||ಪ.||

**ತೀರ್ಥ ಅರಂಬೂರು, ಕಾಶ್ಮೀರ.**

**ನೀರು ಸೇರುವುದು ಸಮುದ್ರವನ್ನೇ, ಹಣ ಸೇರುವುದು ಇದ್ದವರನ್ನೇ.**

# ಪ್ರೀತಿಸುವ ಹೃದಯ

ಸುಖಿಸಂಸಾರಕ್ಕೆ 12 ಸೂತ್ರಗಳಂತೆ!! ಇರಬಹುದು. ಆದರೆ ನನ್ನ ಪ್ರಕಾರ " ಸುಖಿ ಜೀವನಕ್ಕೆ ನಮಗೆ ಬೇಕಾಗಿರುವುದು ಕೇವಲ 4ವಸ್ತುಗಳು".

1. ಮಾಡಲು ಒಂದು ಕೆಲಸ, 2. ಆರೋಗ್ಯ, 3. ನಾಳೆಯ ಬಗ್ಗೆ ನಿರೀಕ್ಷೆ(hope) 4. ನಮ್ಮನ್ನು ಪ್ರೀತಿಸುವ ಒಂದು ಹೃದಯ.

ಇದು ನೂರಕ್ಕೆ ನೂರರಷ್ಟು ಸತ್ಯದ ಮಾತು. ಈ ನಾಲ್ಕೂ ನಮ್ಮ ಜೀವನದಲ್ಲಿದ್ದುಬಿಟ್ಟರೆ ನಮ್ಮಷ್ಟು ಸುಖಿ ಈ ಜಗತ್ತಿನಲ್ಲೇ ಯಾರೂ ಇರಲಾರರು. ಮನುಷ್ಯನಿಗೆ ಮಾಡಲು ಒಂದು ಕೆಲಸವಿದ್ದರೆ ಸಾಕು. 'ಬೇಸರ''ದುರ್ಗುಣ' ಮತ್ತು 'ಬಡತನ'ವೆಂಬ ಮೂರು ಅನಿಷ್ಟ ಪಿಶಾಚಿಗಳು ಅವನಿಂದ ದೂರ ಓಡುತ್ತವೆ.

ಎಲ್ಲಾ ಇದ್ದು ನಾವು ಅನಾರೋಗ್ಯದಿಂದ ಬಳಲುತ್ತಿದ್ದರೆ ಅದಕ್ಕಿಂತ ದೊಡ್ಡ ನರಕ ಇನ್ನೊಂದಿಲ್ಲ. ಬಾಳಿನ ಎಲ್ಲಾ ಸುಖಗಳನ್ನು ಅನುಭವಿಸಬೇಕಾದರೆ ಆರೋಗ್ಯವಂತರಾಗಿದ್ದರೆ ಮಾತ್ರ ಸಾಧ್ಯ – "ಆರೋಗ್ಯವೇ ಭಾಗ್ಯ".

ಹಾಗೆಯೇ ನಾಳೆಯ ಬಗ್ಗೆ ನಿರೀಕ್ಷೆಗಳು ನಮ್ಮೆಲ್ಲರಿಗೂ ಬೇಕು. ಇಂದಲ್ಲದಿದ್ದರೆ ನಾಳೆ ನಮ್ಮ ಗುರಿ ಮುಟ್ಟುತ್ತೇವೆ ಎಂಬ ಛಲವಿದ್ದರೆ, ಬಾಳಿನುದ್ದಕ್ಕೂ ಅದಕ್ಕಿಂತ ದೊಡ್ಡ ಕಾಯಕಲ್ಪ ಇನ್ನೊಂದಿಲ್ಲ. "ನೆನಪುಗಳು ಇರುವಷ್ಟು ದಿನ ನಾವು ನೆನ್ನೆಯ ಒಡೆಯರು" "ನಂಬಿಕೆ/ನಿರೀಕ್ಷೆಗಳಿರುವಷ್ಟು ದಿನ ನಾಳೆಗಳು ನಮಗಾಗಿ ಕಾಯುತ್ತವೆ." "ಪ್ರೀತಿಸುವವರು ಜೊತೆಗಿದ್ದುಬಿಟ್ಟರೆ ಇಂದು ಕೂಡ ನಮ್ಮದೇ ಆಗುತ್ತವೆ."

4ನೇ ಹಾಗೂ ಬಹಳ ಪ್ರಮುಖವಾಗಿ ಮನುಷ್ಯನಿಗೆ ಅವಶ್ಯಕವಾದದ್ದು ಅವನನ್ನು "ಪ್ರೀತಿಸುವ ಒಂದು ಹೃದಯ"."Love Makes life live" ಹೌದು -"ಪ್ರೀತಿ ಜೀವನವನ್ನು ಜೀವಿತಗೊಳಿಸುತ್ತದೆ." ಮಾನವ ಸಂಘಜೀವಿ, ಆತ ಒಂಟಿಯಾಗಿ ಹೆಚ್ಚುದಿನ ಬದುಕಲು ಅಸಾಧ್ಯ. ನಾವು ಯಾರಿಗೂ ಬೇಡವಾಗಿರುವವರು, ಎಂಬ ಭಾವನೆ ಮನಸ್ಸಿನಲ್ಲಿ ಮೂಡಿಬಿಟ್ಟರೆ, ನಮ್ಮ ಬಾಳು ಎಷ್ಟು ನಿರರ್ಥಕ ಎನಿಸಿ ಬಿಡುತ್ತದೆ. ಹೊಟ್ಟೆಗಿಲ್ಲದೆ ಸಹಸ್ರಾರು ಮಂದಿ ಸಾಯುತ್ತಾರೆ. ಆದರೆ, ಪ್ರೀತಿಗಾಗಿ ಹಾತೊರೆದು ಸಾಯುವ ಮಂದಿ ಅದಕ್ಕಿಂತ ಹೆಚ್ಚು. 'Take away Love and the Earth is a tomb", (Robert Browing) ಎಂಬುದು ಸತ್ಯ.

ಸ್ವಾಮಿ ವಿವೇಕಾನಂದರು ಕೂಡ-"He who loves lives, he who is selfish dies" ಎಂದು ನುಡಿದಿದ್ದಾರೆ. ನಮ್ಮ ಬಣ್ಣಗಳು ಯಾವುದೇ ಇರಲಿ, ವಯಸ್ಸು ಎಷ್ಟೇ ಆಗಿರಲಿ, ಬಡವನಾಗಲಿ, ಧನಿಕನಾಗಲಿ ನಮ್ಮೆಲ್ಲರಿಗೂ ಜೀವನದಲ್ಲಿ ಒಂದೇ ಪ್ರಮಾಣದ ಪ್ರೀತಿ ಅಗತ್ಯ. ಜಗತ್ತಿನ ಪ್ರತಿಯೊಬ್ಬ ವ್ಯಕ್ತಿ ತನಗೋಸ್ಕರ ಜೀವಿಸುವುದಿಲ್ಲ. ನಾವೆಲ್ಲರೂ ನಮ್ಮ ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ, ಗಂಡ ಅಥವಾ ಹೆಂಡತಿ, ನಮ್ಮ ಮಕ್ಕಳಿಗೋಸ್ಕರವಾಗಿ ಈ ಜೀವನದ ಗಾಡಿಯನ್ನು ಎಳೆಯುತ್ತಿರುತ್ತೇವೆ. ಈ ಬಂಧನದಿಂದ ಯಾರೂ ಮುಕ್ತರಲ್ಲ. ನಮ್ಮ ಬಾಳಿನಲ್ಲಿ ಈ ಬಂಧನಗಳು ಅತ್ಯಗತ್ಯ ಕೂಡ. ನಾವು ನಮ್ಮ ಬಾಳಿನಲ್ಲಿ ಯಾರನ್ನೂ ಪ್ರೀತಿಸದೆ ಬದುಕುವುದು ದುರಂತವೇ ಸರಿ. ಹಲವಾರು ಸಲ ನಾವು ಮನಃಪೂರ್ವಕವಾಗಿ ಪ್ರೀತಿಸುತ್ತಿರುವವರಿಗೆ ಅದನ್ನು ತಿಳಿಸದೆಯೇ ಸಾಯುವುದು ಅದಕ್ಕಿಂತ ದೊಡ್ಡ ದುರಂತ. ನಮ್ಮನ್ನು ಪ್ರೀತಿಸುವವರನ್ನು ನಾವು ಆದಷ್ಟು ಹೆಚ್ಚುಕಾಲ ಉಳಿಸಿಕೊಳ್ಳಬೇಕು. ಯಾಕೆಂದರೆ, ಬಾಳಿನ ಈ ಬಂಧನಗಳು ಶಾಶ್ವತವಲ್ಲ. ಅನೇಕ ಸಲ ನಮ್ಮನ್ನು ಹೆಚ್ಚಾಗಿ ಪ್ರೀತಿಸುವ ಜೀವಗಳೊಂದಿಗೇ ನಾವು ಒರಟಾಗಿ ನಡೆದುಕೊಂಡು ಅವರ ಮನಸ್ಸನ್ನು ನೋಯಿಸುತ್ತೇವೆ. ಅವರ ಸಾಂಗತ್ಯದ ಬೆಲೆ ಅವರು ಅಗಲಿದಾಗಲೇ ನಮಗೆ ಅರಿವಾಗುವುದು. ಆದ್ದರಿಂದ ನಾವು ಯಾವಾಗಲೂ ಪ್ರೀತಿಸುವವರನ್ನು ಅಗಲುವಾಗ ಅನುರಾಗದ ಎರಡು ಮಾತುಗಳನ್ನಾಡಿ ವಿದಾಯ ಹೇಳಬೇಕು. ಆ ಭೇಟಿ ನಮ್ಮ ಕೊನೆಯ ಭೇಟಿ ಕೂಡ ಆಗಿಬಿಡಬಹುದು.

ಮಾನವ ಬಾಂಧವ್ಯಗಳು ಹಿಡಿ ಮಣ್ಣಿನಂತೆ. ನಮ್ಮ ಕೈಯಲ್ಲಿ ಮಣ್ಣನ್ನು ಸಡಿಲವಾಗಿ ಹಿಡಿದಿಟ್ಟರೆ, ಮಣ್ಣು ಅಂಗೈಯಲ್ಲೇ ಉಳಿಯುತ್ತದೆ. ಸ್ವಲ್ಪ ನಾವು ಮುಷ್ಠಿಯನ್ನು ಬಿಗಿ ಮಾಡಿದರೆ ಮಣ್ಣು ಬೆರಳುಗಳ ಸಂದಿಯಿಂದ ಜಾರಿ ನೆಲದ ಪಾಲಾಗುತ್ತದೆ. ಸ್ವಲ್ಪ ಮಣ್ಣು ನಮ್ಮ ವಶದಲ್ಲಿದ್ದರೂ, ಅರ್ಧದಷ್ಟು ಕೈ ಜಾರಿ ಹೋಗುತ್ತದೆ. ಬಾಂಧವ್ಯಗಳೂ ಹಾಗೆಯೇ. ನಾವು ಪ್ರೀತಿಸುವ ವರಿಗೆ ನಾವು ಸ್ವಾತಂತ್ರ್ಯ ಹಾಗೂ ಗೌರವ ಒದಗಿಸಿದರೆ, ಬಂಧುತ್ವ ಹೆಚ್ಚು ಕಾಲ ಉಳಿಯುತ್ತದೆ. ಅವರ ಸ್ವಾತಂತ್ರ್ಯಕ್ಕೆ ಕೊಂಚ ಧಕ್ಕೆಯಾದರೂ ಅಥವಾ ನಾವು ಅವರನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಿದರೆ, ಬಾಂಧವ್ಯ ಹಾಳಾಗುತ್ತದೆ.

— ಎಡಿಕೇರಿ ಸುಧರ್ಶನ್, ಬೆಂಗಳೂರು.

---

### ನಲ್ಮೆಯ "ಕೊಡಗು ಸಂಗಾತಿ"

ವಿರಾಮದ ವೇಳೆಯಲ್ಲಿ ನೀನು ನನಗೆ
ಒಳ್ಳೆಯ ಜೊತೆಗಾತಿ
ಇದೋ ನಿನ್ನಗಾಗಿ ಕಳಿಸುವೆ
ನನ್ನ ಬರಹದ ಒಂದು ಪ್ರತಿ
ಅದನ್ನು ಅಚ್ಚಾಕಿಸಿ ನನ್ನ ಮನ
ಸಂತೋಷ ಪಡಿಸುವೆ ಎಂದು ನಂಬಿರುವೆ

ಕೊಲ್ಯದ ಮನೋಜ್, ಬೆಂಗಳೂರು.

---

**ಮೂಗಿನಿಂದ ಉಣ್ಣುವುದರಿಂದ ಹೊಟ್ಟೆ ತುಂಬದು.**

## ಕುಶಾಲನಗರದಲ್ಲಿ ಹುತ್ತೇರಿ ಆಚರಣೆ.

ಕುಶಾಲನಗರ ಗೌಡ ಸಮಾಜದಲ್ಲಿ, ಗೌಡ ಯುವಕ ಸಂಘದವರು ಹಾಗೂ ಗೌಡ ಮಹಿಳಾ ಒಕ್ಕೂಟದ ವತಿಯಿಂದ ದಿನಾಂಕ 11-12-2000ದಂದು ಹುತ್ತೇರಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಸಂಜೆ 7ಗಂಟೆಗೆ ಕುಲ ಬಾಂಧವರು ಗೌಡ ಸಮಾಜವನ್ನು ಸೇರಿ ಕುಲಗುರು ವೆಂಕಟರಮಣ, ಕಾವೇರಿಮಾತೆ, ಇಗ್ಗುತಪ್ಪನನ್ನು ನೆನೆಯುವುದರ ಮೂಲಕ ಗೌಡ ಯುವಕ ಸಂಘದ ಅಧ್ಯಕ್ಷರಾದ ಪೊನ್ನಚ್ಚನ ಶ್ರೀ ಮೋಹನ ಹಾಗೂ ಸಂಘದ ಪದಾಧಿಕಾರಿಗಳು ನೇತೃತ್ವದಲ್ಲಿ ಒಡ್ಡುವೊಲಗದೊಂದಿಗೆ ಮೆರವಣಿಗೆ ಹೊರಟು ಶ್ರೀ ಗಣಪತಿ ದೇವಸ್ಥಾನದಲ್ಲಿ ಪೂಜೆ ಮಾಡಲಾಯಿತು.

ಕದಿರುಗುತ್ತಿಯನ್ನು ಹೆಗಲಿಗೇರಿಸಿದ ಕೊಡಗನ ಶ್ರೀ ರಮೇಶನವರ ಮುನ್ನಡೆಯಲ್ಲಿ ಅವರ ಮನೆಯಲ್ಲಿ ಪ್ರಸಾದ ಸ್ವೀಕರಿಸಿ, ಅವರ ಗದ್ದೆಯಲ್ಲಿ ನೆರೆಕಟ್ಟಿ ಭೂಮಿತಾಯಿಯನ್ನು ನೆನೆದು ಕದಿರು ಕುಯ್ದಿದು ಸೇರಿದ ಸುಮಾರು 800ಜನರಿಗೆ ಕದಿರು ಹಂಚಲಾಯಿತು.

ರಾತ್ರಿ 10ಗಂಟೆಗೆ ಗೌಡ ಯುವಕ ಸಂಘದವರು, ಮಹಿಳಾ ಒಕ್ಕೂಟದವರು ಹಾಗೂ ಜನಾಂಗದ ದಾನಿಗಳ ನೆರವಿನಿಂದ ಎಲ್ಲರಿಗೂ ಹುತ್ತೇರಿ ಹಬ್ಬದ ಊಟದ ವ್ಯವಸ್ಥೆ ಮಾಡಲಾಗಿತ್ತು.

— ವರದಿ : **ಕುಂಭಗೌಡನ ಸೋಮಣ್ಣ.**
ಕುಶಾಲನಗರ.

---

## ಡಾರ್ವಿನ್ ವಿಕಾಸವಾದವೆಂದರೇನು ?

ಭೂಮಿಯ ಮೇಲಿರುವ ಪ್ರತಿಯೊಂದು ರೂಪದ ಜೀವಿಯೂ, ಪ್ರತ್ಯೇಕವಾಗಿ ಅಸ್ತಿತ್ವಕ್ಕೆ ಬಂದು, ಅದರ ರೂಪ ಯಾವಾಗಲೂ ಬದಲಾವಣೆಯಾಗಿಲ್ಲವೆಂಬ ನಂಬಿಕೆ ಬಹಳ ಕಾಲದಿಂದಲೂ ಇತ್ತು. ಈ ನಂಬಿಕೆ ಸರಿಯಲ್ಲವೆಂಬುದನ್ನು ಸಿದ್ಧ ಮಾಡಿ ತೋರಿಸಿ, ವಿಕಾಸದ ಆಧುನಿಕ ಸಿದ್ಧಾಂತಕ್ಕೆ ಆಧಾರವನ್ನು ಕಲ್ಪಿಸಿದ ಮೊಟ್ಟಮೊದಲ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್. ಈ ಸಿದ್ಧಾಂತದ ಪ್ರಕಾರ, ಇಂದು ಭೂಮಿಯ ಮೇಲಿರುವ ಎಲ್ಲ ಜೀವಿಗಳು, ಲಕ್ಷಾಂತರ ವರ್ಷಗಳಷ್ಟು ಹಿಂದೆ ಜೀವಿಸಿದ್ದ ಪೂರ್ವಜರ ವಂಶಜರು; ಎಲ್ಲ ಸಸ್ಯಗಳು ಮತ್ತು ಪ್ರಾಣಿಗಳು ವ್ಯವಸ್ಥಿತವಾದ ವಿಧಾನದಲ್ಲಿ ವಿಕಾಸಗೊಂಡಿವೆ ಮತ್ತು ಈಗಲೂ ಅವು ಬದಲಾಗುತ್ತಲೇ ಇವೆ.

ಚಾರ್ಲ್ಸ್ ಡಾರ್ವಿನ್ 1809ರಲ್ಲಿ ಜನಿಸಿದ. ಅವನು ಎಡಿನ್‌ಬರೋ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದ. ಜೀವಶಾಸ್ತ್ರದ ಅಧ್ಯಯನದಲ್ಲಿ ಅವನಿಗೆ ತುಂಬ ಆಸಕ್ತಿ ಇತ್ತು. ತನ್ನ ಇಪ್ಪತ್ತೆರಡನೇ ವಯಸ್ಸಿನಲ್ಲೇ ಚಾರ್ಲ್ಸ್ ಡಾರ್ವಿನ್ ಹಡಗಿನಲ್ಲಿ ವಿಶ್ವಪರ್ಯಟನೆ ಮಾಡಿದ. ಇಂಗ್ಲೆಂಡಿನ ಬೀಗ್ಲ್ ಎಂಬ ಹಡಗಿನಲ್ಲಿ ಅವನು ಸಂಚರಿಸಿದ. ಐದು ವರ್ಷಗಳ ಸಮುದ್ರಯಾನದಲ್ಲಿ ಅವನು ಅನೇಕ ಹೊಸ ದೇಶಗಳನ್ನು ನೋಡಿದ. ಹಲವಾರು ಪ್ರಾಣಿಗಳ ಬಗ್ಗೆ ಅಧ್ಯಯನ ನಡೆಸಿದ. ಸಮುದ್ರಯಾನ ಮುಗಿದ ಬಳಿಕ, ಚಾರ್ಲ್ಸ್ ಡಾರ್ವಿನ್ ತನ್ನ ಅನುಭವಗಳನ್ನು ವಿವರಿಸುವ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದ. ಆ ಪುಸ್ತಕದ ಹೆಸರು 'ದಿ ಆರಿಜಿನ್ ಆಫ್ ಸ್ಪೀಷೀಸ್ ಬೈ ನ್ಯಾಚ್ಯುರಲ್ ಸೆಲೆಕ್ಷನ್'. ಅದರ ಮೊದಲ ಸಂಚಿಕೆ 1859ರಲ್ಲಿ ಪ್ರಕಟವಾಯಿತು. ಪೇಟೆಗೆ ಬಂದ ದಿನವೇ ಆ ಪುಸ್ತಕದ ಎಲ್ಲ ಪ್ರತಿಗಳೂ ಮಾರಾಟ ವಾದವು.

ಎಲ್ಲ ಜೀವಿಗಳು, ಎಷ್ಟೋ ಪೀಳಿಗೆಗಳ ವಿಕಾಸದ ನಂತರ ತಮ್ಮ ಈಗಿನ ರೂಪವನ್ನು ತಳೆದಿವೆ. ಎಲ್ಲ ಜೀವಿಗಳು ತಮ್ಮದೇ ಆದ ಸಾಮಾನ್ಯ ಮೂಲವನ್ನು ಹೊಂದಿವೆ. ಜೀವನಕ್ಕಾಗಿ ನಡೆಸುವ ಹೋರಾಟದಲ್ಲಿ, ಶಕ್ತಿಶಾಲಿ ಜೀವಿಗಳು ಮಾತ್ರ ಉಳಿಯುತ್ತವೆ ಎನ್ನುವುದು ಅವನ ಸಿದ್ಧಾಂತ. ಪ್ರತಿಯೊಂದು ಜೀವಿ, ತನ್ನ ಹಿಂದಿನದಕ್ಕಿಂತ ಸ್ವಲ್ಪ ಭಿನ್ನವಾಗಿದ್ದು, ಕಾಲಕ್ರಮೇಣ ಈಗಿನ ರೂಪ ತಳೆದಿವೆಯೆಂದು ಅವನ ಅಭಿಪ್ರಾಯ.

ಎಮ್ಮ ವೆಡ್ಜ್‌ವುಡ್(Emma Wedgwood) ಎಂಬ ಹೆಂಗಸನ್ನು ಡಾರ್ವಿನ್ ಮದುವೆಯಾದ. ಅವನ ಬಳಿ ತುಂಬ ಹಣವಿತ್ತು, ಆದ್ದರಿಂದ ಅವನು ತನ್ನ ಇಡೀ ಸಮಯವನ್ನು ಮತ್ತು ಸಾಮರ್ಥ್ಯವನ್ನು ಸಂಶೋಧನೆ ಹಾಗೂ ಬರಹಕ್ಕೆ ವಿನಿಯೋಗಿಸುತ್ತಿದ್ದ. ಜೀವವಿಜ್ಞಾನದ ಜಟಿಲ ಸಮಸ್ಯೆಗಳ ಅಧ್ಯಯನಕ್ಕಾಗಿ, ಅವನು ತನ್ನ ಜೀವನವನ್ನು ಮುಡಿಪಾಗಿರಿಸಿದ. ಚಾರ್ಲ್ಸ್ ಡಾರ್ವಿನ್ 1882ರಲ್ಲಿ ಕೆಂಟ್‌ನಲ್ಲಿ ನಿಧನ ಹೊಂದಿದ. ಅವನಿಗೆ ನಾಲ್ವರು ಗಂಡುಮಕ್ಕಳಿದ್ದರು. ಅವರೆಲ್ಲರೂ ಪ್ರತಿಭಾವಂತ ವಿಜ್ಞಾನಿಗಳಾದರು. ಅವರಲ್ಲಿ, ಮೂವರು ಲಂಡನ್‌ನ ರಾಯಲ್ ಸೊಸೈಟಿಯ ಫೆಲೋಗಳಾದರು. ಆ ಜೀವವಿಜ್ಞಾನಿ ಸಲ್ಲಿಸಿರುವ ಕೊಡುಗೆಯನ್ನು ಎಷ್ಟೇ ಪೀಳಿಗೆಗಳಾದರೂ ಮರೆಯಲು ಸಾಧ್ಯವಿಲ್ಲ.

ಸಂಗ್ರಹ : **ಪಟ್ಟಡ ನಿಶಾ**

# ಭಯುದ ನೆರಳಲ್ಲಿ "ಕೊಡಗು ಸಂಗಾತಿ"

1997ರ ಏಪ್ರಿಲ್‌ನಲ್ಲಿ "ಗೌಡ" ಸಂಸ್ಕೃತಿಯನ್ನು ವಿಶ್ವದಾದ್ಯಂತ ಪಸರಿಸುವ ಪಣ ತೊಟ್ಟು ಉದ್ಭವಗೊಂಡ "ಕೊಡಗು ಸಂಗಾತಿ"ಯು ಈಗಾಗಲೇ ತನ್ನ ಉದ್ದೇಶ ಸಾಧಿಸುವಲ್ಲಿ ಯಶಸ್ಸಿನ ದಾಪುಗಾಲನ್ನಿತ್ತಿದೆ. ಅರೆಭಾಷಿಕ ಗೌಡ ಜನಾಂಗದ ಪ್ರತಿಭೆಯನ್ನು ಗುರುತಿಸಿ, ಯುವಶಕ್ತಿಯನ್ನು ಸಂಘಟಿಸಿ, ಏಕತೆಯೇ ದೇಶದ ಪ್ರಗತಿಯೆಂದು ಭಾವಿಸಿ, ಈ ಪತ್ರಿಕೆ ಹೊರತಂದಿದ್ದೇವೆ. ತಮ್ಮ ಆಸುಪಾಸಿನ ಬಂಧುಬಾಂಧವರ ಆಗುಹೋಗುಗಳ ಆಚಾರವಿಚಾರ, ಸಂದರ್ಶನ, ವ್ಯಕ್ತಿ ಪರಿಚಯ, ಹಬ್ಬ ಹರಿದಿನಗಳ, ಶುಭಕಾರ್ಯಗಳ, ಕಾಲಕಂಡು ಕಾರೋಣರಾಗಿರುವ ನಮ್ಮ ಹಿರಿಯರ, ಪೂರ್ವಿಕರ ಘನಕಾರ್ಯಗಳ ಬಗ್ಗೆ, ಊರಿನ ದೈವದೇವರುಗಳ ಉತ್ಸವ, ಭೂತಕೋಲಗಳ, ಧರ್ಮದೇವತೆಗಳ ಬಗ್ಗೆ, ಚಿಕ್ಕಪುಟ್ಟ ವಿಶೇಷ ವಿಚಾರಗಳ ಬಗ್ಗೆ, ಗ್ರಾಮದ ಪ್ರತಿಭೆಗಳನ್ನು ಎತ್ತಿ ಹಿಡಿಯುವ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ತಿಳಿದು ಪ್ರಚುರ ಪಡಿಸಲು ಈ ನಮ್ಮ ಸಂಗಾತಿ ಬಯಸಿ ಕಾರ್ಯನಿರತವಾಗಿದೆ.

ಸಂಘಟನೆ, ಐಕ್ಯತೆ, ಮಾತೃಭಾಷೆ, ಸಂಸ್ಕೃತಿ, ಸಂಪ್ರದಾಯದ ಅವಶ್ಯಕತೆಗಳನ್ನು ನಮ್ಮವರ ಮನೆಮನೆಗಳಲ್ಲಿ ಸಾರಿ ಹೇಳುತ್ತಾ, ನಮ್ಮ ನಮ್ಮಲ್ಲಿಯೇ ವಿಚಾರ ವಿನಿಮಯ ಮಾಡಿಕೊಳ್ಳಲು ಈಗ ಇದಕ್ಕಿಂತ ಭಿನ್ನವಾದ ಮಾಧ್ಯಮವೇ ಇಲ್ಲ. ಆದುದರಿಂದ ತಾವು ತಮ್ಮ ಸಂಘ ಸಂಸ್ಥೆಗಳು, ನಡೆಸುವ ಯಾವುದೇ ಕಾರ್ಯಕಲಾಪಗಳ ಬಗ್ಗೆ ನಮ್ಮ ಪತ್ರಿಕೆಗೆ ಜಾಹೀರಾತು ಶುಭಾಶಯಗಳ ಮೂಲಕ ನೀಡಿದಾಗ ಜನ ಸಂಘಟನೆ ಆಗುವುದರಲ್ಲಿ ಯಾವ ಸಂಶಯವೇ ಇರುವುದಿಲ್ಲ.

ವ್ಯಾಪಾರಿ ಮನೋಭಾವನೆ ಅಲ್ಲದ, ಶುದ್ಧ ಜನಾಂಗೀಯ ಪತ್ರಿಕೆಯು ಹೌದಾಗಿದೆ. ಜನಾಂಗದ ಭವಿಷ್ಯದ ದೃಷ್ಟಿಯಿಂದ ತಾವು ತಮ್ಮ ತನು, ಮನ, ಧನ, ಸಹಾಕಾರದೊಂದಿಗೆ ಪ್ರೋತ್ಸಾಹಿಸಬೇಕೆಂದು ನಮ್ಮ ಅಪೇಕ್ಷೆಯಾಗಿದೆ. ಇಂದು ನೀವು ಪತ್ರಿಕೆಯನ್ನು ಬೆಳೆಸಿದ್ದೇ ಆದರೆ ಮುಂದೆ ಇದೇ ಪತ್ರಿಕೆ ಜನಾಂಗಕ್ಕೆ "ಲಕ್ಷ್ಮಣ ರೇಖೆ" ಯಂತೆ ಕಾಯಕಲ್ಪವಾಗಬಲ್ಲದೆಂಬ ಅಭಿಪ್ರಾಯ ನಮ್ಮದು.

ದಿನಾಂಕ 9-4-1997ರ ಯುಗಾದಿಯ ಶುಭ ದಿನದಂದು ಜನಾಂಗದ ಮತ್ತು ನಾಡಿನ ಏಳಿಗೆಯನ್ನು ಬಯಸಿ ಅನಿವಾರ್ಯವಾಗಿ ಕೊಡಗು ಸಂಗಾತಿಯ ಉದಯವಾದರೂ ಆರ್ಥಿಕವಾಗಿ ಸಫಲತೆಯನ್ನು ಪಡೆದಿರುವುದಿಲ್ಲ. ಸಂಗಾತಿ ಅದಕ್ಕಾಗಿ ಹಗಲಿರುಳು ಶ್ರಮಿಸುತ್ತಿದೆ. ಸಂಗಾತಿ ಹೋಗದ ಜಾಗವಿಲ್ಲ, ನೋಡದ ಸ್ಥಳವಿಲ್ಲ. ಸಂಗಾತಿ ಓದಲು ಎಲ್ಲರಿಗೂ ಬೇಕು. ಆದರೆ ಸದಸ್ಯರಾಗುವುದು ಕೇವಲ ಕೆಲವೆ ಹೃದಯ ಸಿರಿವಂತಿಕೆಯವರು ಮಾತ್ರ. ಬಡ ಮತ್ತು ಕೆಳವರ್ಗದಲ್ಲಿ ಸಾಕಷ್ಟು ಕೆಲಸ ಸಾಧಿಸಿವೆ. ಪತ್ರಿಕೆಯು ಐದನೇ ಸಂಪುಟದಲ್ಲಿದ್ದರು ಕೇವಲ ಎರಡು ಸಾವಿರ ಪ್ರತಿಗಳು ಮಾತ್ರ ಓಡುತ್ತಲಿವೆ. ಅವುಗಳಲ್ಲಿ 31-12-2000ದ ದಿನಾಂಕದಲ್ಲಿ ಕೇವಲ 835 ಸದಸ್ಯರು (ಅಂದರೆ 41.75%) ಮಾತ್ರ ನವೀಕರಿಸಿರುತ್ತಾರೆ. ಪತ್ರಿಕೆಯನ್ನು ಬೇಡವೆನ್ನುವವರಿಲ್ಲ. ಶ್ರೀರಾಮನನ್ನು ಶಬರಿ ಕಾದಿರುವಂತೆ ಸಂಗಾತಿ ನವೀಕರಣಕ್ಕಾಗಿ ಕಾಯುತ್ತಿದೆ. ಅರ್ಧಕ್ಕಿಂತಲು ಕಡಿಮೆ ಪ್ರಮಾಣದಲ್ಲಿ ನವೀಕರಣವಾದ್ದರಿಂದ ಪತ್ರಿಕೆಯ ಭವಿಷ್ಯವು ಭಯದ ನೆರಳಲ್ಲಿ ಇರುತ್ತದೆ. ನಷ್ಟದ ಮೇಲೆ ನಷ್ಟ, ಕಷ್ಟಗಳು ಬಂದರು ಸಹಿಸಿದೆ. ಅದಕ್ಕೂ ಸಹ ಸಹನೆ,ತಾಳ್ಮೆ, ಮಿತಿ ಎನ್ನುವುದೊಂದಿದೆ. ಇರುವ ಒಂದೇ ಒಂದು ಮಾಧ್ಯಮವನ್ನು ಉಳಿಸಿ ಬೆಳೆಸುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಮಾನ್ಯ ಚಂದದಾರರು ಕೂಡಲೇ ಹಣ ಪಾವತಿಸುವಂತೆಯೂ, ಹಾಗೂ ಸಂಗಾತಿಯ ಲಾಟರಿ ಯೋಜನೆಯನ್ನು ಸದುಪಯೋಗವನ್ನು ಪಡೆದು ಕೊಳ್ಳುವಂತೆಯೂ ಸಹ ನಮ್ರ ವಿನಂತಿಯಾಗಿದೆ.

**ಚಂದಾ ವಿವರ :** ಬಿಡಿ ಪ್ರತಿ ರೂ. 6-00, ವಾರ್ಷಿಕ 15-00, ಜೀವಾವಧಿ ಸದಸ್ಯತನ 2,000-00, ಹಿತೈಷಿಗಳಾಗಿ ರೂಪಾಯಿ 5,000-00 ಕ್ಕೂ ಮೇಲ್ಪಟ್ಟು.

**ಜಾಹೀರಾತು :** ¼ ಪುಟ್ಟಕ್ಕೆ 250-00, ½ ಪುಟಕ್ಕೆ 500-00, ಒಂದು ಪುಟಕ್ಕೆ 1,000-00 ಕೊನೆಯ ಪುಟಕ್ಕೆ 1,500-00

**ಸೂಚನೆ :** ತಾವು ದಯಮಾಡಿ ಈ ಮೇಲಿನ ಚಂದಾ ವಗೈರೆ ಹಣವನ್ನು ನಗದ್ದಾಗಿ ಯಾ ಮನಿ ಆರ್ಡರ್ ಅಥವಾ ಬ್ಯಾಂಕಿನ ಡಿ. ಡಿ. ಮೂಲಕವಾದರೂ ಕಳುಹಿಸಬಹುದು. ಮೈಸೂರಿನ ಸ್ಥಳೀಯ ಚೆಕ್‌ಗಳನ್ನು ಮಾತ್ರ ಸ್ವೀಕರಿಸಲಾಗುವುದು.

ವಂದನೆಗಳು,

ಇತೀ ತಮ್ಮ ವಿಶ್ವಾಸಿ
**ಪಟ್ಟಡ ಪ್ರಭಾಕರ**
ಗೌರವ ಸಂಪಾದಕ

**ವಿಳಾಸ : ಕೊಡಗು ಸಂಗಾತಿ,** ನಂ. 35, ಸವಿತಾ ನಿಲಯ, 1ನೇ ಕ್ರಾಸ್, 4ನೇ ಬ್ಲಾಕ್,
ಜಯಲಕ್ಷ್ಮಿಪುರಂ, ಮೈಸೂರು - 570 012 ✆ : **0821 - 516771**

Reg. No. KA/SK/MYS-88 Registered : 10-01-96 TCI Kar. 09592

# ಕೊಡಗು ಸಂಗಾತಿ ಚಂದದಾರರಿಗೊಂದು ಅವಕಾಶ; ಕೊಡಗು ಸಂಗಾತಿ ಲಾಟರಿ ಯೋಜನೆ ಡ್ರಾ ದಿನಾಂಕ 8-4-2001

ಕೊಡಗು ಸಂಗಾತಿ ಪತ್ರಿಕಾ ಅಭಿವೃದ್ಧಿ ಬಯಸಿ ಲಾಟರಿ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಅದನ್ನು ದಿನಾಂಕ 8-4-2001ರಲ್ಲಿ ಎತ್ತಲಾಗುವುದು. ಮಾನ್ಯ ಚಂದದಾರರು 31-3-2001ರ ಒಳಗಡೆ ಪತ್ರಿಕೆಯ ಚಂದವನ್ನು ತಪ್ಪದೇ ನವೀಕರಿಸಿಕೊಂಡವರ ಹೆಸರಿನಲ್ಲಿ ಮಾತ್ರ ಲಾಟರಿಯನ್ನು ಎತ್ತಲಾಗುವುದು. ನವೀಕರಣದ ವಾಯಿದೆ ದಿನಾಂಕವನ್ನು ಚಂದದಾರರ ವಿಳಾಸದ ಮೇಲ್ಭಾಗದಲ್ಲಿ ಪ್ರತಿ ಸಂಚಿಕೆಯಲ್ಲಿ ಕಾಣಿಸಿರುತ್ತೇವೆ.

## ಬಹುಮಾನಗಳು

| | | |
|---|---|---|
| 1ನೇ ಬಹುಮಾನ | : | ¼ ಪವನ್ ಚಿನ್ನ |
| 2ನೇ ಬಹುಮಾನ | : | 1½ ಲೀ ಕುಕ್ಕರ್ 1 |
| 3ನೇ ಬಹುಮಾನ | : | ಸ್ಟೀಲ್ ಫ್ಲಾಸ್ಕ್ 1 |
| 4ನೇ ಬಹುಮಾನ | : | ಮಿಲ್ಕ್ ಕುಕ್ಕರ್ 1 |
| 5ನೇ ಬಹುಮಾನ | : | ದೋಸೆ ತವ 1 |
| 6ನೇ ಬಹುಮಾನ | : | ಗೋಡೆ ಗಡಿಯಾರ 1 |
| 7ನೇ ಬಹುಮಾನ | : | ಉತ್ತಮ ಫೌಂಟೆನ್ ಪೆನ್ನು 1 |
| 8ನೇ ಬಹುಮಾನ | : | ರೋನಾಲ್ಡ್ ಪೆನ್ನುಗಳು 1 ಡಜನ್ |
| 9ನೇ ಬಹುಮಾನ | : | ರೋನಾಲ್ಡ್ ಪೆನ್ನುಗಳು ½ ಡಜನ್ |
| 10ನೇ ಬಹುಮಾನ | : | ಒಂದು ಸಂಗಾತಿ ಮೊಮೆಂಟೊ. |

ಚಂದದಾರರು ಹಣವನ್ನು ಈ ಕೆಳಗಿನ ವಿಳಾಸಕ್ಕೆ ನಗದು, ಎಂ.ಓ., ಡಿ.ಡಿ. ಮೂಲಕ ಕಳುಹಿಸುವುದು. ಮೈಸೂರಿನ ಸ್ಥಳೀಯ ಚೆಕ್‌ಗಳನ್ನು ಸ್ವೀಕರಿಸಲಾಗುವುದು. ಹಿತೈಷಿಗಳು ನವೀಕರಿಸುವುದಲ್ಲದೆ ವಾರ್ಷಿಕ ಚಂದ, ಜೀವಾವಧಿ ಸದಸ್ಯತನ (Rs. 2000/-), ಜಾಹೀರಾತು, ಚಿರಸ್ಮರಣೆ ಇತ್ಯಾದಿಯನ್ನು ನೀಡಿ ಸಹಕರಿಸುವಂತೆ ಮನಪೂರ್ವಕವಾದ ಕಳಕಳಿಯ ಪ್ರಾರ್ಥನೆ.

ಒಬ್ಬೊಬ್ಬ ಚಂದದಾರರು ಒಂದೊಂದು ಸದಸ್ಯರನ್ನು ನೊಂದಾಯಿಸಿದಲ್ಲಿ ಪತ್ರಿಕೆ ಅಭಿವೃದ್ಧಿ ಖಂಡಿತ ಸಾಧ್ಯವೆಂದು ನಾವು ಭರವಸೆ ನೀಡುತ್ತೇವೆ. ಪತ್ರಿಕೆ ನಿಮ್ಮದು, ಪತ್ರಿಕೆ ನಿಮ್ಮ ಮಗು, ಮಗುವಿನ ಲಾಲನೆ ಪಾಲನೆ ಚಂದದಾರರಿಗೆ ಸೇರಿದ ಕರ್ತವ್ಯವಾಗಿದೆ.

ವಿಳಾಸ : ಸಂಪಾದಕಿ, ನಂ. 35, ಸವಿತಾ ನಿಲಯ,
1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ,
ಮೈಸೂರು - 570 012 ✆ : 0821 - 516771

ವ್ಯವಸ್ಥಾಪಕ ಮತ್ತು ಸಂಗಾತಿ ಬಳಗ

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.